ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 21 ಸಂಚಿಕೆ 41

ಅಕ್ಟೋಬರ್ 5-11, 1998 ರೂ. 2.00

ಮುಖಭಂಗ ಮುಚ್ಚಿಕೊಳ್ಳಲು "ರಾಷ್ಟ್ರೀಯ ಚರ್ಚೆ"ಯ ಆರ್ಭಟ

ಬಿಹಾರದಲ್ಲಿ **356ನೇ** ಕಲಮನ್ನು ಪ್ರಯೋಗಿಸುವ ಬಿ.ಜೆ.ಪಿ. ನೇತೃತ್ವದ ಸರಕಾರದ ಅಬ್ಬರ ರಾಷ್ಟ್ರಪತಿಗಳು ಕೇಂದ್ರ ಸಂಪುಟದ ಶಿಫಾರಸನ್ನು ಒಪ್ಪದೆ ಸಪ್ಟಂಬರ್ **25** ರಂದು ಮರು ಪರಿಶೀಲನೆಗೆ ಹಿಂದಿರುಗಿಸಿದಾಗ ಒಮ್ಮೆಲೇ ಅಡಗಿತು. ಸಂಪುಟದ ಮರು ನಿರ್ಧಾರವನ್ನು ರಾಷ್ಟ್ರಪತಿಗಳು ಒಪ್ಪಲೇ ಬೇಕೆಂದು ತಕ್ಷಣ ಕುಪಿತ ಪ್ರತಿಕ್ರಿಯೆ ನೀಡಿದ ಸ್ವತಃ ಕೇಂದ್ರ ಗೃಹಮಂತ್ರಿಗಳೇ ಮರುದಿನವೇ ರಾಷ್ಟ್ರಪತಿಗಳ ಆಶಯಕ್ಕೆ ಗೌರವ ನೀಡಿ ಬಿಹಾರ ಸರಕಾರದ ವಜಾಕ್ಕೆ ಒತ್ತಾಯಿಸದಿರಲು ಕೇಂದ್ರ ಸಂಪುಟ ನಿರ್ಧರಿಸಿದೆ ಎಂದು ಪ್ರಕಟಿಸಿದರು. ಕೇವಲ ಕೈ-ಕೈಹಿಸುಕಿಕೊಂಡು ನೀಡಿದ ಪ್ರಕಟಣೆ ಇದು ಎಂಬುದು ಆ ದಿನದಿಂದಲೇ ಬಿ.ಜೆ.ಪಿ. ಮುಖಂಡರು ನೀಡುತ್ತಿರುವ ಹೇಳಿಕೆಗಳಿಂದ ಸ್ಪಷ್ಟವಾಗುತ್ತಿದೆ. ಈ ಹೇಳಿಕೆಗಳ ಮೂಲಕ ಬಿ.ಜೆ.ಪಿ. ಒಂದು ಪ್ರಜಾಪ್ರಭುತ್ವವಾದಿ ಪಕ್ಷವೇ ಎಂದು ಎಲ್ಲರೂ ಸಂದೇಹ ಪಡುವಂತಾಗಿದೆ.

ಬಿ.ಜೆ.ಪಿ. ಅಧ್ಯಕ್ಷರು ಬಿಹಾರದಲ್ಲಿ 356ನೇ ಕಲಮನ್ನು ಬಳಸಲಾಗದಿದ್ದರೆ ಆ ಕಲಮೇ ನಿರರ್ಥಕ ಎಂದರೆ, ಆ ಪಕ್ಷದ ಪ್ರಧಾನ ಕಾರ್ಯದರ್ಶಿಗಳು 356ನೇ ಕಲಮಿನ ಬಗ್ಗೆ 'ರಾಷ್ಟ್ರೀಯ ಚರ್ಚೆ' ನಡೆಯಬೇಕು ಎಂದು ಆರ್ಭಟಿಸಿದರು. ಕೇಂದ್ರ ಸಂಪುಟ ಶಿಫಾರಸನ್ನು ಮತ್ತೊಮ್ಮೆ ಕಳಿಸದಿರಲು ನಿರ್ಧರಿಸಿದೆ ಎಂದು ಪ್ರಕಟಿಸಿದ ಗೃಹಮಂತ್ರಿಗಳೂ ಇದು ಕೇವಲ 'ಸದ್ಯ'ಕ್ಕೆ, ಶಿಫಾರಸು ಮಾಡಿದ ಕೇಂದ್ರ ಸಂಪುಟದ ನಿರ್ಧಾರ 'ಸರಿ' ಎಂದು ಮತ್ತೆ-ಮತ್ತೆ ಹೇಳಲಾರಂಭಿಸಿದರು. ಶಿಫಾರಸನ್ನು ಕಳಿಸಿ ವಿಮಾನ ಹತ್ತಿ ವಿದೇಶ ಪ್ರವಾಸಕ್ಕೆ ಹೋಗಿದ್ದ ಪ್ರಧಾನಮಂತ್ರಿಗಳೂ ಹಿಂತಿರುಗಿದ ಕೂಡಲೇ ಇದೇ ಮಾತನ್ನು ಹೇಳಿದ್ದಾರೆ. ಅಂದರೆ ರಾಷ್ಟ್ರಪತಿಗಳ ಅಭಿಪ್ರಾಯ ತಪ್ಪು ಎಂದು ಪರೋಕ್ಷವಾಗಿ ಪ್ರಚಾರ ನಡೆಸಲಾಗುತ್ತಿದೆ. ಈ ಎಲ್ಲಾ ಆರ್ಭಟಗಳ ಹಿಂದಿರುವುದು ಬಿ.ಜೆ.ಪಿ.ಗೆ ಈ ವಿಷಯದಲ್ಲಾಗಿರುವ ಮುಖಭಂಗ ಎಂಬುದು ಸ್ಪಷ್ಟ.

"ಬಿ.ಜೆ.ಪಿ. ನೇತೃತ್ವದ ಸರಕಾರಕ್ಕೆ ಬಿಹಾರ ಸರಕಾರದ ವಜಾವನ್ನು ಮತ್ತೆ ಒತ್ತಾಯಿಸುವಷ್ಟು ಧೈರ್ಯ ಬರುತ್ತಿಲ್ಲ. ತನ್ನ ಮಿತ್ರರೂ ಈ ವಿಷಯದಲ್ಲಿ ತನ್ನ ಜೊತೆಗಿಲ್ಲ, ಸಂಸತ್ತಿನಲ್ಲಿ ಈ ನಿರ್ಣಯಕ್ಕೆ ಅನುಮೋದನೆ ದೊರೆಯುವುದಿಲ್ಲ ಎಂದು ಅವರಿಗೆ ಗೊತ್ತಿದೆ" ಎಂದು ಈ ಹೇಳಿಕೆಗಳಿಗೆ ಪ್ರತಿಕ್ರಿಯಿಸಿರುವ ಸಿ.ಪಿ.ಐ.(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಷನ್ ಸಿಂಗ್ ಸುರ್ಜಿತ್‌ರವರು ಈಗ 356ನೇ ಕಲಮಿನ ಹೊಸ ಚರ್ಚೆಯ ಅಗತ್ಯವಿಲ್ಲ ಎಂದಿದ್ದಾರೆ. ನಾಲ್ಕು ದಶಕಗಳ ಹಿಂದೆ 1959 ರಲ್ಲಿ ಕೇರಳದ ಇ.ಎಂ.ಎಸ್. ಸರಕಾರವನ್ನು ವಜಾ ಮಾಡಿದಂದಿನಿಂದ ಆರಂಭವಾದ ಈ ರಾಷ್ಟ್ರೀಯ ಚರ್ಚೆ ವಿವಿಧ ಅಧಿಕೃತ ವೇದಿಕೆಗಳಲ್ಲಿ, ಸುಪ್ರೀಂ ಕೋರ್ಟಿನಲ್ಲೂ ನಡೆದಿದೆ. ಸರ್ಕಾರಿಯಾ ಆಯೋಗ, ಅಂತರ-ರಾಜ್ಯ ಮಂಡಳಿಯ ಸಭೆಗಳು ಇತ್ಯಾದಿಗಳ ಮೂಲಕ ಹಲವು ಶಿಫಾರಸುಗಳು ಬಂದಿವೆ. ಈಗ ಇವನ್ನೆಲ್ಲಾ ಜಾರಿಗೆ ತರಬೇಕಷ್ಟೇ ಎಂದು ಸುರ್ಜಿತ್ ಅಭಿಪ್ರಾಯ ಪಟ್ಟಿದ್ದಾರೆ.

ಈಗಾಗಲೇ ನಡೆದಿರುವ ದೀರ್ಘ ರಾಷ್ಟ್ರೀಯ ಚರ್ಚೆಯಿಂದ ಒಂದು ವ್ಯಾಪಕ ಒಮ್ಮತ ಮೂಡಿಬಂದಿದೆ. ಅದೇನೆಂದರೆ ದೇಶದ ಐಕ್ಯತೆಗೆ ಬೆದರಿಕೆ ಉಂಟಾದ ಸಂದರ್ಭದಲ್ಲಿ ಮಾತ್ರವೇ ಈ ಕಲಮನ್ನು ಬಳಸಬಹುದು ಎಂದು. ಅಯೋಧ್ಯೆಯ ಬಾಬ್ರಿ ಮಸೀದಿ ಧ್ವಂಸದ ನಂತರ ಉತ್ತರ ಪ್ರದೇಶ ಸರಕಾರದ ವಜಾವನ್ನು ಸುಪ್ರೀಂ ಕೋರ್ಟ್ ಸಮರ್ಥಿಸಿದ್ದು ಇದಕ್ಕೊಂದು ಉದಾಹರಣೆ ಎಂದು ಅವರು ನೆನಪಿಸಿದ್ದಾರೆ. (ಐಕ್ಯರಂಗದ ಜುಲೈ 13-19, 1998ರ ಸಂಚಿಕೆಯನ್ನು ನೋಡಿ)

ರಾಷ್ಟ್ರೀಯ ಚರ್ಚೆ ನಡೆಯಬೇಕೆನ್ನುವವರು ರಾಷ್ಟ್ರಪತಿಗಳ ಪತ್ರವನ್ನೇಕೆ ಬಹಿರಂಗ ಪಡಿಸಿಲ್ಲ?

ರಾಷ್ಟ್ರಪತಿಗಳು ಸಪ್ಟಂಬರ್ 25ರಂದು ಕೇಂದ್ರ ಸಂಪುಟಕ್ಕೆ ಕಳಿಸಿದ ಪತ್ರವನ್ನು ಬಹಿರಂಗ ಪಡಿಸಬೇಕು ಎಂದು ಮರುದಿನವೇ ಸಿ.ಪಿ.ಐ.(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್‌ರವರು ಆಗ್ರಹಿಸಿದ್ದರು. ರಾಷ್ಟ್ರಪತಿಗಳ ಈ ಪತ್ರ ಗುಪ್ತ ದಸ್ತಾವೇಜೇನೂ ಅಲ್ಲ. ವಿವಿಧ ರಾಜಕೀಯ ಪಕ್ಷಗಳಲ್ಲದೆ, ಸಂವಿಧಾನ ತಜ್ಞರು, ಕಾನೂನು ಪಂಡಿತರೊಂದಿಗೆ ಸಮಾಲೋಚನೆಯ ನಂತರ ತಯಾರಿಸಿದ ತರ್ಕಬದ್ಧವಾದ ಪತ್ರ ಇದು. ಸರ್ಕಾರಿಯಾ ಆಯೋಗದ ಶಿಫಾರಸುಗಳನ್ನು, ಸಂಬಂಧಪಟ್ಟ ಸುಪ್ರೀಂ ಕೋರ್ಟ್ ತೀರ್ಪುಗಳನ್ನು ಇದು ಉದ್ಧರಿಸಿದೆ ಎಂದು ಹೇಳಲಾಗುತ್ತಿದೆ. ಇದನ್ನು ದೇಶದ ಮುಂದಿಟ್ಟರೆ ಜನ ಕೇಂದ್ರದ ಶಿಫಾರಸು ಸರಿಯೋ ತಪ್ಪೋ ಎಂದು ಹೇಳಲು ಸಾಧ್ಯ ಎಂದಿರುವ ಸುರ್ಜಿತ್ ಈ ಮಹತ್ವದ ಪ್ರಶ್ನೆಯ ಮೇಲೆ ಚರ್ಚೆಯನ್ನು ಬಿ.ಜೆ.ಪಿ. ಉದ್ದೇಶಪೂರ್ವಕವಾಗಿ ತಪ್ಪಿಸುತ್ತಿದೆ, ಈ ಬಗ್ಗೆ ಸಂಸತ್ತಿನ ಅಧಿವೇಶನ ಕರೆಯಬೇಕೆಂಬ ಆಗ್ರಹವನ್ನೂ ಬೇಕೆಂದೇ ಅದು ಕಿವಿಗೆ ಹಾಕಿಕೊಳ್ಳಲಿಲ್ಲ ಎಂದು ದೂಷಿಸಿದ್ದರು.

356 ನೇ ಕಲಮಿನ ಬಗ್ಗೆ 'ರಾಷ್ಟ್ರೀಯ ಚರ್ಚೆ' ಯಾಗಬೇಕು, ಎಡಪಕ್ಷಗಳು ಈ ಚರ್ಚೆಯಿಂದ ಓಡಿಹೋಗುತ್ತಿವೆ ಎಂದು ಆರ್ಭಟಿಸುವ ಬಿ.ಜೆ.ಪಿ. ಮುಖಂಡರು ಈಗಾಗಲೇ ನಡೆದಿರುವ ಇಂತಹ ಚರ್ಚೆಗಳ ಹಿನ್ನೆಲೆಯಲ್ಲಿ ರಾಷ್ಟ್ರಪತಿಗಳು ಕಳಿಸಿದ ಪತ್ರವನ್ನು ಏಕೆ ಬಹಿರಂಗ ಪಡಿಸುತ್ತಿಲ್ಲ?

ವಾಸ್ತವವಾಗಿ ಈ ಸರಕಾರ ದೇಶದಲ್ಲಿ ಪ್ರಜಾಪ್ರಭುತ್ವವನ್ನು ಬುಡಮೇಲ ಮಾಡಬಯಸುತ್ತದೆ ಎಂದು ಸಿ.ಪಿ.ಐ.(ಎಂ) ಪ್ರಧಾನ ಕಾರ್ಯದರ್ಶಿಗಳು ಸಪ್ಟಂಬರ್ 26ರ ತಮ್ಮ ಪತ್ರಿಕಾ ಸಮ್ಮೇಳನದಲ್ಲಿ ಆಪಾದಿಸಿದ್ದರು. ಆದರೆ ತನ್ನ ವಿಚ್ಛಿದ್ರಕಾರಿ ಹಾಗೂ ಅಪಾಯಕಾರಿ ಅಜೆಂಡಾವನ್ನು ಅನುಸರಿಸುತ್ತಿರುವ ಸಂಘ ಪರಿವಾರದ ಕೈಗಳಲ್ಲಿ ದೇಶದ ಪ್ರಜಾಪ್ರಭುತ್ವದ ಕಗ್ಗೊಲೆಯಾಗಲು ತಮ್ಮ ಪಕ್ಷ ಬಿಡುವುದಿಲ್ಲ ಎಂದೂ ಅವರು ಎಚ್ಚರಿಸಿದ್ದಾರೆ. ಸಪ್ಟಂಬರ್ 25 ರಂದು ಕೇಂದ್ರ ಸರಕಾರದ ಕ್ರಮದ ವಿರುದ್ಧ ಪ್ರತಿಪಕ್ಷಗಳ ಕರೆಗೆ ದೇಶಾದ್ಯಂತ ದೊರೆತ ಭಾರೀ ಪ್ರತಿಸ್ಪಂದನದತ್ತ ಗಮನ ಸೆಳೆಯುತ್ತಾ ಅವರು ಬಿ.ಜೆ.ಪಿ. ನೇತೃತ್ವದ ಸರಕಾರದ ಪ್ರಜಾಪ್ರಭುತ್ವ-ವಿರೋಧಿ ಕ್ರಮಗಳ ವಿರುದ್ಧ ತೀವ್ರ ಹೋರಾಟ ನಡೆಯುತ್ತದೆ ಎಂದಿದ್ದಾರೆ.

ಬಿಹಾರ ಪ್ರಶ್ನೆಯ ಮೇಲೆ ಏರ್ಪಟ್ಟ ವಿರೋಧ ಪಕ್ಷಗಳ ಐಕ್ಯತೆ ಮುಂದುವರೆಯಬುಹದೇ, ಅದು ಹೊಸದೊಂದು ರಂಗದ ಸ್ವರೂಪ ಪಡೆಯಬಹುದೇ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸುತ್ತಾ ಸುರ್ಜಿತ್‌ರವರು ಈ ಐಕ್ಯತೆ ಮುಖ್ಯವಾಗಿ ದೇಶದಲ್ಲಿ ಪ್ರಜಾಪ್ರಭುತ್ವವನ್ನು ರಕ್ಷಿಸಲು ಎಂದು ಸ್ಪಷ್ಟಪಡಿಸಿದರು. ಇದಷ್ಟೇ ವಿವಿಧ ಶಕ್ತಿಗಳ ಮರುಹೊಂದಾಣಿಕೆ ನಡೆದು ಹೊಸದೊಂದು ರಂಗ ಮೂಡಿ ಬರಲು ಆಧಾರವಾಗಲಾರದು. ಆದರೆ ಸಿ.ಪಿ.ಐ.(ಎಂ) ಒಂದು ಮೂರನೇ ರಂಗ ರಚನೆಗೆ ತನ್ನ ಪ್ರಯತ್ನವನ್ನು ಮುಂದುವರೆಸುತ್ತದೆ ಎಂದೂ ಅವರು ಹೇಳಿದರು.

ಓದುಗರ, ಏಜೆಂಸಿದಾರರ ಗಮನಕ್ಕೆ

'ಐಕ್ಯರಂಗ' ಮುಂದಿನ ವಾರ ಪ್ರಕಟವಾಗುವುದಿಲ್ಲ. ನಂತರದ ವಾರದ ಸಂಚಿಕೆ ಸಿ.ಪಿ.ಐ.(ಎಂ)ನ 16ನೇ ಮಹಾಧಿವೇಶನದ ವರದಿಗಳೊಂದಿಗೆ ಹೆಚ್ಚಿನ ಪುಟಗಳಲ್ಲಿ ಪ್ರಕಟವಾಗಲಿದೆ.

ಈ ನಡುವೆ ಏಜೆನ್ಸಿದಾರರು ತಮ್ಮ ಬಿಲ್ ಬಾಕಿ ಬೇಗನೇ ತೀರಿಸಲು ಕ್ರಮಕೈಗೊಳ್ಳಬೇಕೆಂದು ಮತ್ತೊಮ್ಮೆ ವಿನಂತಿಸುತ್ತೇವೆ. ಅಂಚೆ ದರ ಏರಿಕೆಯೂ ಸೇರಿದಂತೆ ಆಗಿರುವ ವಿಪರೀತ ಬೆಲೆಯೇರಿಕೆಯಿಂದ 'ಐಕ್ಯರಂಗ'ದ ನಿರ್ವಹಣಾ ಖರ್ಚು ಬಹಳಷ್ಟು ಏರಿದೆ. ಆದರೂ ಹಲವಾರು ಏಜೆನ್ಸಿದಾರರು ತಮ್ಮ ಬಿಲ್ ಬಾಕಿಗಳನ್ನು ತೀರಿಸಲು ಹಲವಾರು ಬಾರಿ ವಿನಂತಿಸಿಕೊಂಡರೂ ಸಾಕಷ್ಟು ಮುತುವರ್ಜಿ ತೋರಿಸುತ್ತಿಲ್ಲ. ಇದರಿಂದ 'ಐಕ್ಯರಂಗ'ದ ನಿರ್ವಹಣೆ ದುರ್ಭರವಾಗುತ್ತಿದೆ. ಸಹೃದಯ ಏಜೆಂಸಿದಾರರು ಇದನ್ನು ಗಮನಿಸಬೇಕಾಗಿ ಮತ್ತೊಮ್ಮೆ ಕೋರುತ್ತೇವೆ

- ಐಕ್ಯರಂಗ

ಪಕ್ಷದ ಮಹಾಧಿವೇಶನ ಅಕ್ಟೋಬರ್ 5 ರಂದು ಆರಂಭ

ಸಿ.ಪಿ.ಐ(ಎಂ)ನ 16ನೇ ಮಹಾಧಿವೇಶನ ಕಲ್ಕತ್ತೆಯಲ್ಲಿ ಅಕ್ಟೋಬರ್ 5 ರಿಂದ ನಡೆಯಲಿದೆ. 13 ವರ್ಷಗಳ ನಂತರ ಪಶ್ಚಿಮ ಬಂಗಾಳದಲ್ಲಿ ಈ ಪಕ್ಷದ ಮಹಾಧಿವೇಶನ ನಡೆಯುತ್ತಿದೆ. 1985 ರಲ್ಲಿ 12ನೇ ಮಹಾಧಿವೇಶನ ಇಲ್ಲಿ ನಡೆದಿತ್ತು.


ಪ್ರೀತಿಯ ಕಮ್ಯುನಿಸ್ಟ್ ನೇತಾರರ ನೆನಪಿನಲ್ಲಿ ಮಹಾಧಿವೇಶನದ ಸ್ಥಳಕ್ಕೆ ಕಾಮ್ರೇಡ್ ಇ.ಎಂ.ಎಸ್. ನಗರ ಎಂದು ಹೆಸರಿಡಲಾಗಿದೆ. ಕಳೆದ ಒಂದು ತಿಂಗಳಿಂದ ನೂರಾರು ಕಾರ್ಯಕರ್ತರು ಮಹಾಧಿವೇಶನದ ಸಿದ್ಧತೆಯಲ್ಲಿ ಭರದಿಂದ ತೊಡಗಿದ್ದು ಕಲ್ಕತ್ತಾ ನಗರವಿಡೀ ಪೋಸ್ಟರುಗಳು, ಕೆಂಬಾವುಟಗಳು, ಗೋಡೆಬರಹಗಳಿಂದ ಅಲಂಕೃತ ಗೊಂಡಿದೆ. ಬಂಗಾಳಿ, ಹಿಂದೀ, ಉರ್ದು ಭಾಷೆಗಳಲ್ಲಿ ಹತ್ತು ಲಕ್ಷ ಕರಪತ್ರಗಳನ್ನು ರಾಜ್ಯಾದ್ಯಂತ ಹಂಚಲಾಗಿದೆ. ಹಬ್ಬದ ಸಮಯದಲ್ಲೂ ಪಕ್ಷದ ರಾಜಕೀಯ ಸಂದೇಶವನ್ನು ರಾಜ್ಯಾದ್ಯಂತ ಪಸರಿಸಲಾಗಿದೆ. ಸಪ್ಟಂಬರ್ 21ರಂದು ಇಡೀ ರಾಜ್ಯದಲ್ಲಿ ಮೆರವಣಿಗೆಗಳು, ಸಭೆಗಳು, ಸಾರ್ವಜನಿಕ ಧನಸಂಗ್ರಹ ಇತ್ಯಾದಿಗಳ ಮೂಲಕ ಪ್ರಚಾರ ದಿನವನ್ನು ಆಚರಿಸಲಾಯಿತು. ಪಕ್ಷದ ದೈನಿಕ 'ಗಣಶಕ್ತಿ' ಪ್ರತಿದಿನ ಈ ಸಂದರ್ಭದಲ್ಲಿ ಒಂದು ನಿಯಮಿತ ಕಾಲಂ ಪ್ರಕಟಿಸುತ್ತಿದೆ. ಅಕ್ಟೋಬರ್ 5ರಂದು ಮಹಾಧಿವೇಶನ ಉದ್ಘಾಟನೆಯ ಸಂದರ್ಭದಲ್ಲಿ ಒಂದು ವಿಶೇಷಾಂಕವನ್ನು ಪ್ರಕಟಿಸುತ್ತಿದೆ.

ಮಹಾಧಿವೇಶನಕ್ಕೆ ಸಂಬಂಧಪಟ್ಟಂತೆ ಹಲವಾರು ವಿಚಾರ ಸಂಕಿರಣಗಳು, ಪ್ರದರ್ಶನಗಳು, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಯೋಜಿಸಲಾಗಿದೆ.

ಸುಮಾರು ಒಂದು ಸಾವಿರ ಸ್ವಯಂಸೇವಕರು ಮಹಾಧಿವೇಶನದ ಕೆಲಸಗಳಲ್ಲಿ ನೇರವಾಗಿ ತೊಡಗಿದ್ದಾರೆ. ವಿದೇಶ ಹಾಗೂ ದೇಶದ ವಿವಿಧ ಭಾಗಗಳಿಂದ ಬರುವ ಪ್ರತಿನಿಧಿಗಳು, ವೀಕ್ಷಕರು ಮತ್ತು ಇತರ ಅತಿಥಿಗಳಿಗೆ ಊಟ-ವಸತಿ, ವೈದ್ಯಕೀಯ ಸೌಲಭ್ಯ, ಸಾಗಾಣಿಕಾ ಸೌಲಭ್ಯಗಳನ್ನು ಸಂಘಟಿಸುವ ಕೆಲಸಗಳನ್ನು ಅವರಿಗೆ ವಹಿಸಲಾಗಿದೆ. ಕರ್ನಾಟಕದಿಂದ 8 ಪ್ರತಿನಿಧಿಗಳು ಹಾಗೂ ಇಬ್ಬರು ವೀಕ್ಷಕರು ಈ ಮಹಾಧಿವೇಶನದಲ್ಲಿ ಭಾಗವಹಿಸುತ್ತಿದ್ದಾರೆ.

ಅಕ್ಟೋಬರ್ 11 ರಂದು ಕಲ್ಕತ್ತೆಯ ಬ್ರಿಗೇಡ್ ಪರೇಡ್ ಮೈದಾನದಲ್ಲಿ ನಡೆಯುವ ಸಾರ್ವಜನಿಕ ರ್‍ಯಾಲಿಯ ಚರಿತ್ರಾರ್ಹ ಯಶಸ್ಸಿಗೆ ರಾಜ್ಯಾದ್ಯಂತ ಸಿದ್ಧತೆಗಳು ನಡೆದಿವೆ.

(ಐ.ಎನ್.ಎನ್)



ಪ್ರಜಾಪ್ರಭುತ್ವ ಆಂದೋಲನದ ತ್ವರಿತ ಮುನ್ನಡೆಗಾಗಿ - ಸುರ್ಜಿತ್

ಪುಟ 4

ಗೋಡ್ಸೆಯೇ ಗಾಂಧೀಜಿಯನ್ನು ಹಾಡಿ ಹೊಗಳಿದರೆ....?

ಇದು ಕೇವಲ 'ಠ' ಎಂದು ಇತಿಹಾಸದ ತುಸುವಾದರೂ ಜ್ಞಾನವಿರುವ ಯಾರಾದರೂ ಹೇಳಿಯಾರು. ಅದೇ ರೀತಿ ಸ್ವಾತಂತ್ರ್ಯ ಹೋರಾಟದುದ್ದಕ್ಕೂ ಜಮೀನ್ದಾರರ ಮತ್ತು ಆಗಿನ ಇತರ ಆಳುವ ವರ್ಗಗಳ ಪಕ್ಷ ವಹಿಸಿದ ಆರ್.ಎಸ್.ಎಸ್. ನ ಪರಿವಾರಕ್ಕೆ ಸೇರಿದವರು ಈಗ ಅಂತವರ ಸಂಸ್ಥಾನಗಳು ಸ್ವಾತಂತ್ರ್ಯ ಭಾರತದೊಡನೆ ವಿಲೀನಗೊಂಡುದರ ಸ್ವರ್ಣ ಮಹೋತ್ಸವವನ್ನು ಆಚರಿಸಿ ಅಂತಹ ವಿಲೀನಕ್ಕೆ ನಿಜವಾಗಿ ಕಾರಣರಾದವರನ್ನು ತೆಗಳಿದರೆ ಅದಕ್ಕೆ ಏನನ್ನಬೇಕು? ಸೈತಾನ ಧರ್ಮಗ್ರಂಥಗಳನ್ನು ಉದ್ಧರಿಸಿದಂತೆ ಎಂದು ಹೇಳುವುದು ಇದನ್ನೇ ಅಲ್ಲವೇ? ಹಿಟ್ಲರ್‌ನ ಅಭಿಮಾನಿ ಗೋಲ್ವಕ್ಕರ್‌ರವರ ಆರ್.ಎಸ್.ಎಸ್. ಗರಡಿಯಲ್ಲಿ ಬೆಳೆದ ಕೇಂದ್ರ ಗೃಹಮಂತ್ರಿ ಅಡ್ವಾಣಿಯವರು ಆತನ ಕುಖ್ಯಾತ ಪ್ರಚಾರ ಮಂತ್ರಿ ಗೋಬೆಲ್ಸ್‌ನ 'ಆದರ್ಶ'ವನ್ನನುಸರಿಸಿ ಇತಿಹಾಸಕ್ಕೆ ಭಾರೀ ಅಪಚಾರ ಬಗೆಯುತ್ತಿದ್ದರೆ ಬಹುಶಃ ಯಾರೂ ಆಶ್ಚರ್ಯ ಪಡಬೇಕಾಗಿಲ್ಲ.

ಸ್ವತಂತ್ರ ಭಾರತದೊಂದಿಗೆ ಹೈದರಾಬಾದ್ ಕೊನೆಗೂ ಸೆಪ್ಟೆಂಬರ್ 17, 1948 ರಂದು ವಿಲೀನಗೊಂಡಿತು. ಇದರ ಸ್ವರ್ಣ ಮಹೋತ್ಸವದ ಹೆಸರಲ್ಲಿ ಕಳೆದ ಕೆಲವು ದಿನಗಳ ಮುಸ್ಲಿಂ-ವಿರೋಧಿ, ಕಮ್ಯುನಿಸ್ಟ್-ವಿರೋಧಿ ಕೋಮುವಾದಿಗಳ ಅಪಪ್ರಚಾರ ಸೆಪ್ಟೆಂಬರ್ 17 ರಂದು ಕೇಂದ್ರ ಗೃಹಮಂತ್ರಿ ಅಡ್ವಾಣಿಯವರು ಹೈದರಾಬಾದಿಗೆ ಬಂದಾಗ ತಾರಕಕ್ಕೇರಿತು. ಬಿಜೆಪಿ ಏರ್ಪಡಿಸಿದ ಸಮಾರಂಭದಲ್ಲಿ ಅಡ್ವಾಣಿಯವರು ಪ್ರಮಾಣಿತವಲ್ಲದ ಯಾವುದೋ ಒಂದು ಪುಸ್ತಕವನ್ನುದ್ಧರಿಸಿ ನಿಜಾಮನ ಹೈದರಾಬಾದಿನಲ್ಲಿ ರಜಾಕಾರರು ಮತ್ತು ಕಮ್ಯುನಿಸ್ಟರ ನಡುವೆ ಅಪವಿತ್ರ ಮೈತ್ರಿಯಿತ್ತು ಎಂದು ದೊಡ್ಡದಾಗಿ ರೈಲು ಬಿಟ್ಟರು! ಆದರೆ ಹೈದರಾಬಾದನ್ನು ನಿಜಾಮನಿಂದ ವಿಮೋಚನೆಗೊಳಿಸುವಲ್ಲಿ ಆರ್.ಎಸ್.ಎಸ್. ಆಗಲೀ, ಹಿಂದೂ ಮಹಾಸಭಾವಾಗಲೀ ಏನು ಪಾತ್ರವಹಿಸಿತು ಎಂದು ಮಾತ್ರ ಹೇಳಲೇ ಇಲ್ಲ. ಸ್ವಲ್ಪ ನಂತರ ಕಮ್ಯುನಿಸ್ಟರು ಹೈದರಾಬಾದ್ ಸಂಸ್ಥಾನ ಸ್ವತಂತ್ರ ಭಾರತದೊಡನೆ ವಿಲೀನವಾದ ಮೇಲೂ ಕಮ್ಯುನಿಸ್ಟರು ತಮ್ಮ ಹೋರಾಟ ಮುಂದುವರೆಸಿದರು ಎಂದು ತೆಗಳುವ ಭರದಲ್ಲಿ ತಾವು ರೈಲು ಬಿಟ್ಟುದನ್ನು ಬಹುಶಃ ಮರೆತೇ ಬಿಟ್ಟರು.

ಈ ಕಾಲಂಗಳಲ್ಲಿ ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಲೇಖನದಲ್ಲಿ ಹೇಳಿರುವಂತೆ ಹೈದರಾಬಾದ್ ಸಂಸ್ಥಾನವನ್ನು ನಿಜಾಮಶಾಹಿಯಿಂದ ವಿಮೋಚನೆಗೊಳಿಸುವಲ್ಲಿ ಕಮ್ಯುನಿಸ್ಟರು ವಹಿಸಿದ ಪಾತ್ರ ಇತಿಹಾಸ ಪ್ರಸಿದ್ಧ. ನಿಜಾಮನ ಆಳ್ವಿಕೆಯಲ್ಲಿದ್ದ ಹೈದರಾಬಾದ್ ಸಂಸ್ಥಾನದಲ್ಲಿ ತೆಲುಗು, ಕನ್ನಡ ಮತ್ತು ಮರಾಠಿ ಭಾಷಿಕ ಪ್ರದೇಶಗಳಿದ್ದವು. ವಿವಿಧ ಪ್ರದೇಶಗಳಲ್ಲಿ, ವಿವಿಧ ಭಾಷೆಗಳನ್ನಾಡುತ್ತಿದ್ದ ಲಕ್ಷಾಂತರ ಜನ ನಿಜಾಮನ ಪಾಳೆಯಗಾರೀ ಆಳ್ವಿಕೆಯ ವಿರುದ್ಧ ಐಕ್ಯ ಹೋರಾಟಗಳನ್ನು ನಡೆಸಿದರು. ಅವರು ಭೂಮಿ, ಆಹಾರ ಮತ್ತು ಸಾಂಸ್ಕೃತಿಕ ಸ್ವಾತಂತ್ರ್ಯಕ್ಕಾಗಿ ಮುಖ್ಯವಾಗಿ ಆಂಧ್ರ ಮಹಾಸಭಾದ ನೇತೃತ್ವದಲ್ಲಿ ಹೋರಾಡಿದರು. ಬಿಜೆಪಿಯ ಮಾತೃ ಸಂಸ್ಥೆ ಆರ್.ಎಸ್.ಎಸ್. ಈ ಹೋರಾಟಗಲಲ್ಲಿ ಭಾಗವಹಿಸಿರಲಿಲ್ಲ ಮಾತ್ರವಲ್ಲ, ನಿಜಾಮನ ಪರವಾಗಿದ್ದ ಜಮೀನ್ದಾರರ ಮತ್ತು ಭೂಮಾಲಕರ ಜತೆ ಸೇರಿತ್ತು!

ನಿಜಾಮನ ಹಿಂಸ್ರ ರಜಾಕಾರ್ ಪಡೆಗಳನ್ನು ಎದುರಿಸಿ ಹಿಮ್ಮೆಟ್ಟಿಸಿದ ಈ ಸಶಸ್ತ್ರ ತೆಲಂಗಾಣ ಹೋರಾಟದಲ್ಲಿ ನಾಲ್ಕು ಸಾವಿರ ಕಮ್ಯುನಿಸ್ಟರು ಪ್ರಾಣತೆತ್ತರು. ಇನ್ನೂ ಸಾವಿರಾರು ಜನ ಜೈಲುಗಳಲ್ಲಿ ಚಿತ್ರಹಿಂಸೆ ಅನುಭವಿಸಿದರು. ಇನ್ನೂ ಸಾವಿರಾರು ಮಹಿಳೆಯರು, ಹಿರಿ ವಯಸ್ಸಿನವರು, ಮಕ್ಕಳು ಹಿಂಸಾಚಾರಗಳಿಗೆ ಗುರಿಯಾದರು. ಹೈದರಾಬಾದಿನ ಮುಕ್ದುಂ ಮೊಹಿಯುದ್ದೀನ್‌ರಂತಹ ಮುಖಂಡರು ಹಿಂದುಗಳ ಮತ್ತು ಮುಸಲ್ಮಾನರ ಐಕ್ಯ ಆಂದೋಲನಗಳಿಗೆ ನೇತೃತ್ವ ನೀಡಿದರು.


ಜೀತ ಪದ್ಧತಿಯನ್ನು ನಾಶಮಾಡಿ, ಅವಿದ್ಯಾವಂತ ಗ್ರಾಮೀಣ ಜನಗಳನ್ನು ಕ್ರೂರ ನಿಜಾಮಶಾಹಿಯ ವಿರುದ್ಧ ವೀರಾವೇಶದಿಂದ ಹೋರಾಡುವ ಧೀರರನ್ನಾಗಿ ಮಾಡಿದವರು ಕಮ್ಯುನಿಸ್ಟರು. ಪಾಳೆಯಗಾರಿ ದೊರೆಗಳ ಯಜಮಾನಿಕೆಯನ್ನು ಮುರಿದು ಲಕ್ಷಾಂತರ ಎಕ್ರೆ ಜಮೀನನ್ನು ಬಡ ರೈತರಲ್ಲಿ ಹಂಚಿ ನಿಜಾಮಶಾಹಿಯ ಬೆನ್ನುಮೂಳೆ ಮುರಿದ ಕೀರ್ತಿ ತೆಲಂಗಾಣ ಸಶಸ್ತ್ರ ಹೋರಾಟಕ್ಕೆ ಸಲ್ಲುತ್ತದೆ. ಇದರಿಂದ ನಿಜಾಮ ಶರಣಾಗತನಾಗಿ ಹೈದರಾಬಾದ್ ಸಂಸ್ಥಾನ ಭಾರತದೊಡನೆ ವಿಲೀನಗೊಳ್ಳುವಂತಾಯಿತು. ಇದು ಕೋಮುವಾದಿ ಮನಸ್ಸುಗಳು ಮರೆಮಾಚುವ ಚಾರಿತ್ರಿಕ ಸತ್ಯ. ಅವರ ಉದ್ದೇಶವೂ ಸ್ವಯಂವೇದ್ಯ. ಜಮೀನ್ದಾರರ ವಿರುದ್ಧದ ಹೋರಾಟವನ್ನು ಅವರು ಹೇಗೆ ತಾನೆ ಹೊಗಳಿಯಾರು?

ದೇಶ ಸ್ವಾತಂತ್ರ್ಯಗೊಂಡ ನಂತರ ರಾಜ-ಮಹಾರಾಜರುಗಳ ಆಳ್ವಿಕೆಯಲ್ಲಿದ್ದ ಎಲ್ಲಾ ಸಂಸ್ಥಾನಗಳೂ ಹೊಸ ಸ್ವತಂತ್ರ ಭಾರತ ಸಂಘದೊಡನೆ ವಿಲೀನಗೊಂಡಾಗ ಇಂತಹ ವಿಲೀನವನ್ನು ವಿರೋಧಿಸಿ ನಿಂತವರೆಂದರೆ ಹೈದರಾಬಾದಿನ ನಿಜಾಮ ಮತ್ತು ಕಾಶ್ಮೀರದ ಮಹಾರಾಜ. ನಿಜಾಮನ ವಿರುದ್ಧ ಬಹುಪಾಲು ಜನವಿಭಾಗ - ಹಿಂದುಗಳು, ಮುಸಲ್ಮಾನರು, ಕಾಂಗ್ರೆಸ್ಸಿಗರು, ಕಮ್ಯುನಿಸ್ಟರು, ಇತರ ದೇಶಪ್ರೇಮಿ ಶಕ್ತಿಗಳು ಹೋರಾಡಿದರು (ಈ ಪಟ್ಟಿಯಲ್ಲಿ ಆರ್.ಎಸ್.ಎಸ್. ಇಲ್ಲ ಎಂದು ಬೇರೆ ಹೇಳಬೇಕಾಗಿಲ್ಲ), ಕಾಶ್ಮೀರದಲ್ಲಿ ಶೇಖ್ ಅಬ್ದುಲ್ಲಾ ನೇತೃತ್ವದ ನ್ಯಾಶನಲ್ ಕಾನ್ಫರೆನ್ಸ್ ಮತ್ತಿತರ ದೇಶಪ್ರೇಮಿ ಶಕ್ತಿಗಳು ಹೋರಾಡಿದವು. ಇಲ್ಲಿಯೂ ಆರ್.ಎಸ್.ಎಸ್. ಬೇಲಿಯ ಆಚೆಗೇ ಇತ್ತು. ಬಿಜೆಪಿಯ ಪೂರ್ವಜ ಎನ್ನಬಹುದಾದ 'ಜಮ್ಮು ರಾಜ್ಯ ಪರಿಷದ್' ಎಂಬ ಹಿಂದೂವಾದಿ ಸಂಘಟನೆ ಕಾಶ್ಮೀರ ಮಹಾರಾಜನ ಪರವಾಗಿ ನಿಂತು ಕಾಶ್ಮೀರ ಸ್ವತಂತ್ರವಾಗಿರಬೇಕು ಎಂದಿತು. ಆದರೂ ಜನಗಳ ಹೋರಾಟಗಳ ಒತ್ತಡದಿಂದ ಕಾಶ್ಮೀರ ಭಾರತಕ್ಕೆ ಸೇರ್ಪಡೆಯಾದದ್ದು ಇನ್ನೊಂದು ಐತಿಹಾಸಿಕ ಸಂಗತಿ. ಇಲ್ಲಿಯೂ ಅಡ್ವಾಣಿಯವರ ಸಂಘ ಪರಿವಾರದ ದೇಶ-ವಿರೋಧಿ ಪಾತ್ರವೂ ಒಂದು ಚಾರಿತ್ರಿಕ ಸತ್ಯ. ಈ ಎರಡೂ ವಿಮೋಚಿತ ಸಂಸ್ಥಾನಗಳಲ್ಲಿ ಭೂ ಹಂಚಿಕೆ ಮುಖ್ಯ ಕಾರ್ಯಕ್ರಮವಾಗಿತ್ತು ಎಂಬುದನ್ನು ಸಿಪಿಐ(ಎಂ) ಆಂಧ್ರಪ್ರದೇಶ ಕಾರ್ಯದರ್ಶಿ ಬಿ.ವಿ.ರಾಘವಲು ನೆನಪಿಸುತ್ತಾರೆ. ಸಂಘ ಪರಿವಾರದ ಹೊಲಸು ಪಾತ್ರವನ್ನು ಈ ಹಿನ್ನೆಲೆಯಲ್ಲಿಯೇ ಅರ್ಥ ಮಾಡಿಕೊಳ್ಳಬಹುದು.

ಎಲ್.ಕೆ.ಅಡ್ವಾಣಿಯವರು ಈಗ ಕೇಂದ್ರದ ಗೃಹಮಂತ್ರಿಗಳು. ತಮ್ಮಲ್ಲಿರುವ ಪೋಲೀಸ್ ದಾಖಲೆಗಳ ಆಧಾರದಲ್ಲಿ ಅವರು ನಿಜಾಮನ ಪ್ರಧಾನಿ ಮಹಮದ್ ಖಾಸಿಂ ರಿಜ್ವಿ ದೇಶದಿಂದ ಕಳ್ಳತನದಿಂದ ಹೊರಹೋಗಲು ಅವಕಾಶ ನೀಡಿದವರಾರು ಎಂದು ಬಯಲು ಮಾಡಬಲ್ಲರೇ? ಎಂದು ಕಾಂ. ರಾಘವಲು ಪ್ರಶ್ನಿಸಿದ್ದಾರೆ. ರಾಜರುಗಳು, ಪಾಳೆಯಗಾರಿ ಭೂಮಾಲಕರ ಪಕ್ಷ ವಹಿಸುವ ರಾಜಕೀಯ ಸಂಸ್ಕೃತಿ ಕೇವಲ ಆರ್.ಎಸ್. ಮತ್ತು ಬಿಜೆಪಿಯದ್ದು ಮಾತ್ರ. ಇಂತಹ ಬಿಜೆಪಿಯಿಂದ ಕಮ್ಯುನಿಸ್ಟರಿಗೆ ದೇಶಪ್ರೇಮದ ಸರ್ಟಿಫಿಕೇಟ್ ಬೇಕಿಲ್ಲ ಎಂದು ಅವರು ಖಾರವಾಗಿ ಹೇಳಿದ್ದಾರೆ.

ಇನ್ನೊಂದು ಸಂಗತಿ. ಅಡ್ವಾಣಿಯವರು ಈ ಸಂದರ್ಭದಲ್ಲಿ ಸರ್ದಾರ್ ಪಟೇಲರನ್ನು ಹಾಡಿ ಹೊಗಳಿದ್ದಾರೆ. ಆದರೆ ಇದೇ ಪಟೇಲರು 1950 ರಲ್ಲಿ ಅಯೋಧ್ಯಾ ಪ್ರಶ್ನೆಯನ್ನು ಉಲ್ಬಣಗೊಳಿಸಬಾರದು ಎಂದು ಹೇಳಿದರು. ಅವರ ಈ ಮಾತಿಗೆ ಅಡ್ವಾಣಿಯವರು ಎಷ್ಟು ಬೆಲೆ ಕೊಟ್ಟಿದ್ದಾರೆ ಎಂದೂ ಕಾಂ. ರಾಘವಲು ಪ್ರಶ್ನಿಸಿದ್ದಾರೆ.

ಸ್ವಾವಲಂಬನೆಗೆ ತೊಡಿಸುವರು ಕೋಳ



ಭಾರತೀಯ ಪೇಟೆಂಟ್ ಕಾಯಿದೆ 1970 ನ್ನು ತಿದ್ದುಪಡಿ ಮಾಡಿ ಉತ್ಪನ್ನ ಪೇಟೆಂಟ್ ನೀಡಬೇಕೆಂಬುದು ವಿಶ್ವ ವ್ಯಾಪಾರ ಸಂಸ್ಥೆಯ ಒಪ್ಪಂದದ ಒಂದು ಷರತ್ತು. ಈಗ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಭಾರತ ತನ್ನ ಪೇಟೆಂಟ್ ಕಾಯಿದೆಯ ತಿದ್ದುಪಡಿ ಮಾಡಲೇಬೇಕೆಂಬ ಒತ್ತಡವನ್ನು ವಿಶ್ವ ವ್ಯಾಪಾರ ಸಂಸ್ಥೆಯ ಮೂಲಕ ಹೇರುತ್ತಿದೆ.

ಪ್ರತಿಗಾಮಿ ಹಾಗೂ ಭಾರತದಂತಹ ಅಭಿವೃದ್ಧಿಶೀಲ ದೇಶದ ಸ್ವಾವಲಂಬನೆಗೇ ಕುತ್ತು ತರುವ ತಿದ್ದುಪಡಿ ಇದು. ಆದರೂ ಭಾರತದ ಬಿಜೆಪಿ ನೇತೃತ್ವದ ಸರ್ಕಾರ ಈ ಕಾಯಿದೆಯನ್ನು ತಿದ್ದುಪಡಿ ಮಾಡಿ ವಿಶ್ವವ್ಯಾಪಾರ ಸಂಸ್ಥೆ ಹೇಳಿದ ದಾರಿಗೆ ಬರುವ ವಿಚಾರದಲ್ಲಿದೆಯಂತೆ. ವಿಶ್ವ ವ್ಯಾಪಾರ ಸಂಸ್ಥೆಯಲ್ಲಿ ಈ ವಿಷಯದಲ್ಲಿ ಪ್ರತಿಭಟನೆ ವ್ಯಕ್ತಪಡಿಸಿ ಇತರ ಅಭಿವೃದ್ಧಿಶೀಲ ದೇಶಗಳನ್ನೆಲ್ಲಾ ಒಂದುಗೂಡಿಸಿ ಹೋರಾಡುವ ಕೆಲಸವನ್ನು ಭಾರತ ಮಾಡಬೇಕಾಗಿತ್ತು. ಆದರೆ ಅದಕ್ಕೆ ಬದಲಿಗೆ ಸಾಮಾಜ್ಯಶಾಹಿ ದೇಶಗಳ ಹುನ್ನಾರಗಳಿಗೆ ಮಣಿದು ನಡೆವ ದಾರಿಯನ್ನು ಬಿಜೆಪಿ ಸರ್ಕಾರ ಒಪ್ಪಿಕೊಂಡಿದೆ.

ಸ್ವದೇಶಿ ನೀತಿ ಸ್ವಾವಲಂಬನೆ ಇತ್ಯಾದಿಗಳ ಬಗೆಗೆ ಮಾತನಾಡುವ ಬಿಜೆಪಿ ಸರ್ಕಾರ ಇಂತಹ ಮುಖ್ಯ ವಿಷಯಗಳು ಬಂದಾಗ ಸಾಮ್ರಾಜ್ಯಶಾಹಿಗಳ ಅನುಕೂಲಕ್ಕೆ ತಕ್ಕಂತೆ ವರ್ತಿಸುವ ಧೋರಣೆ ತೋರುತ್ತದೆ. ತನ್ನ ಮಾತು ಮತ್ತು ಕೃತ್ಯಗಳ ನಡುವಿನ ಅಂತರವನ್ನು ಬಿಜೆಪಿ ಅನುಕೂಲಕರವಾಗಿ ಮರೆಯುತ್ತದೆ.

ಸಿಪಿಐ(ಎಂ) ಬಿಜೆಪಿ ಸರ್ಕಾರದ ಈ ತೀರ್ಮಾನವನ್ನು ತೀವ್ರವಾಗಿ ಖಂಡಿಸಿದೆ. ಸಂಸತ್ತು ಅಧಿವೇಶನದಲ್ಲಿಲ್ಲದೇ ಇರುವಾಗ ಇಂತಹ ನಿರ್ಧಾರವನ್ನು ಸರ್ಕಾರ ತೆಗೆದುಕೊಂಡಿರುವುದು ಬಿಜೆಪಿಯ ಗುಟ್ಟಾಗಿ ಕೆಲಸ ಮಾಡುವ ನೀತಿಯನ್ನು ತೆರೆದಿಡುತ್ತದೆ ಎಂದಿದೆ.

ಸಿಪಿಐ(ಎಂ)ನ ಕೇಂದ್ರ ಸಮಿತಿ ಇಂತಹ ತಿದ್ದುಪಡಿಯಿಂದ ಔಷಧ ಮತ್ತು ರಸಾಯನಿಕಗಳ ಉದ್ದಿಮೆಯ ಮೇಲೆ ದೂರಗಾಮಿ ಪರಿಣಾಮಗಳು ಉಂಟಾಗುತ್ತದೆ. ಅಲ್ಲದೆ ಕೃಷಿಯ ಮೇಲೂ ಇದು ಪರಿಣಾಮ ಉಂಟು ಮಾಡುತ್ತದೆ ಎಂದಿದೆ. ಜನತೆಯ ಆರೋಗ್ಯದ ಮೇಲೂ ಪರಿಣಾಮ ಬೀರುವುದಲ್ಲದೆ ದೇಶದ ಆಹಾರ ಭದ್ರತೆಯನ್ನು ಹಾಳುಗೆಡುಹುತ್ತದೆ ಎಂದಿದೆ ಅದು.

ಹೊಸ ಔಷಧಿಗಳು ಜನ ಸಾಮಾನ್ಯರ ಕೈಗೆ ನಿಲುಕದ ವಸ್ತುಗಳಾಗಿ ಬಿಡುತ್ತವೆ. ಹಾಗೂ ದೇಶದ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಗಳಿಗೂ ಇದು ಹೊಡೆತ ನೀಡುತ್ತದೆ ಎಂದು ಅದು ಹೇಳಿದೆ.

ಬಣ್ಣ ಬದಲಿಸಿದ ಐಎಂಎಫ್

ಐಎಂಎಫ್ ಈಗ ಸ್ವಲ್ಪ ತನ್ನ ಬಣ್ಣ ಬದಲಾಯಿಸಿದೆ. ಬಂಡವಾಳದ ಹರಿತದ ಮೇಲಿನ ನಿರ್ಬಂಧಗಳನ್ನು ತೆಗೆದುಹಾಕ ಬೇಕೆಂದು ಮೂರನೇ ಜಗತ್ತಿನ ದೇಶಗಳಿಗೆ ಬೋಧನೆ ಮಾಡುತ್ತಿದ್ದ ಐಎಂಎಫ್ ಈಗ ಬಂಡವಾಳದ ಹರಿಯುವಿಕೆಯ ಮೇಲೆ ಅಲ್ಪಸ್ವಲ್ಪ ನಿರ್ಬಂಧಗಳಿದ್ದರೆ ಕೆಲವು ದೇಶಗಳು ಆರ್ಥಿಕ ಅವಘಡಗಳಿಂದ ಬಚಾವಾಗಬಹುದೆಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

ಬಂಡವಾಳ ಮಾರುಕಟ್ಟೆಯ ಬಗೆಗಿನ ತನ್ನ ವಾರ್ಷಿಕ ವರದಿಯಲ್ಲಿ ಏಶಿಯಾದ ದೇಶಗಳಲ್ಲಿ ಬಿಕ್ಕಟ್ಟು ಉಂಟಾಗುವ ಬಹಳ ಮೊದಲೇ ಬಂಡವಾಳ ಹೊರ ಹರಿದು ಹೋಗಿದ್ದಿರಬಹುದು ಎಂದು ಅದು ಸೂಚಿಸಿದೆ.

ದುರ್ಬಲ ಬ್ಯಾಂಕಿಂಗ್ ವ್ಯವಸ್ಥೆ ಮತ್ತು ಮುಕ್ತ ಬಂಡವಾಳ ಪರಿವರ್ತನೀಯತೆ ಎರಡೂ ಸೇರಿ ಅವಘಡ ನಡೆಯಲು ಅವಕಾಶ ಮಾಡಿಕೊಟ್ಟವು ಎಂದಿದೆ.

ಹಣಕಾಸು ವಲಯದ ಉದಾರೀಕರಣಕ್ಕೆ ಹಲವು ಮಿತಿಗಳಿರುವುದರಿಂದ ಇದನ್ನು ಬಹಳ ವ್ಯವಸ್ಥಿತವಾಗಿ ಬೇರೆಲ್ಲ ಭಾಗಗಳನ್ನು ಅಧ್ಯಯನ ಮಾಡಿ ನಂತರವೇ ಮಾಡಬೇಕು ಎಂಬ ಅಭಿಪ್ರಾಯವನ್ನು ಅದು ವ್ಯಕ್ತಪಡಿಸಿದೆ.

ಏಶಿಯನ್ ಬಿಕ್ಕಟ್ಟುಗಳಿಂದ ಐಎಂಎಫ್ ಕೆಲವು ಪಾಠಗಳನ್ನಾದರೂ ಕಲಿತಿದೆ ಎಂಬುದು ಇದರಿಂದ ಸ್ಪಷ್ಟವಾಗಿದೆ. ಆದರೆ ಈ ಉದಾರೀಕರಣದ ದಾರಿಯೇ ದಿವಾಳಿತನದ್ದು ಎಂದು ಅದು ಒಪ್ಪಿಕೊಂಡಿಲ್ಲ. ಒಪ್ಪಿಕೊಳ್ಳುವುದೂ ಇಲ್ಲ. ಉದಾರೀಕರಣದ ರೀತಿಯಲ್ಲಿ ಕೆಲವು ತಿದ್ದುಪಡಿ ಮಾಡಿಕೊಳ್ಳಬೇಕೆಂಬುದಷ್ಟೇ ಅದರ ಅಭಿಪ್ರಾಯ.

ಏಶಿಯಾದ ಬಿಕ್ಕಟ್ಟುಗಳಿಂದ ಐಎಂಎಫ್ ಸಹ ಕಂಗಾಲಾಗಿದೆ ಎಂಬುದಂತೂ ಇದರಿಂದ ಸ್ಪಷ್ಟವಾಗುತ್ತದೆ.

ಹಣಕಾಸು ಪರಿಸ್ಥಿತಿಯ ಬಗ್ಗೆ ಐಎಂಎಫ್ ಭಯ

ಭಾರತದ ಹಣಕಾಸು ಪರಿಸ್ಥಿತಿಯ ಬಗ್ಗೆಯೂ ಐಎಂಎಫ್ ಆತಂಕಗೊಂಡಿದೆಯಂತೆ. ಇನ್ನೂ ಹೆಚ್ಚಿನ ಉದಾರೀಕರಣವನ್ನು ಬೇಗ ಬೇಗ ಮಾಡಬೇಕೆಂಬ ಒತ್ತಡ ಹೇರುವ ಉದ್ದೇಶದಿಂದ ಇಂತಹ ಆತಂಕವನ್ನು ಅದು ವ್ಯಕ್ತಪಡಿಸಿರುವುದು. ಪರಿಸ್ಥಿತಿಯನ್ನು ಸುಧಾರಿಸಲು ಅದು ಒಂದು ಕಾರ್ಯಕ್ರಮವನ್ನೇ ಸೂಚಿಸಿದೆ. ಈ ಕಾರ್ಯಕ್ರಮದ ಅಂಶಗಳು ಹೀಗಿವೆ.

- ಹಣಕಾಸು ಪರಿಸ್ಥಿತಿ ಹದಗೆಡುವುದನ್ನು ತಡೆಯುವುದು.
- ಖಾಸಗೀಕರಣ, ಅಂತರ್ರಚನಾ ಸೌಲಭ್ಯ, ವಿಮೆ ಮತ್ತು ವಿದೇಶಿ ನೇರ ಹೂಡಿಕೆಗಳನ್ನು ಸುಧಾರಿಸಲು ಹೊಸ ಕ್ರಮಗಳ ಅವಶ್ಯಕತೆ.
- ವ್ಯಾಪಾರ ಉದಾರೀಕರಣವನ್ನು ಸುಂಕಗಳ ಕಡಿತದ ಮೂಲಕ ತೀವ್ರಗೊಳಿ ಸುವುದು.
- ಬಂಡವಾಳ ಖಾತೆಯನ್ನು ತೆರೆಯುವ ಕ್ರಮಗಳನ್ನು ಮುಂದುವರಿಸುವುದು.
- ವಿದೇಶಿ ವಿನಿಮಯ ದರ ನಿರ್ವಹಿಸಲು ಬಡ್ಡಿ ದರಗಳನ್ನು ಒಂದು ಸಾಧನವಾಗಿ ಬಳಸುವುದು.
- ಸಣ್ಣ ಕೈಗಾರಿಕೆಗಳಿಗಿರುವ ಮೀಸಲಾತಿಯನ್ನು ತೆಗೆದು ಹಾಕುವುದು.
- ನಿರ್ಗಮನ ನೀತಿ ಜಾರಿಗೆ ತರುವುದು.
- ಹಣಕಾಸು ವಲಯದ ಸುಧಾರಣೆಗಳನ್ನು ತೀವ್ರಗೊಳಿಸುವುದು.
- ಭಾರತೀಯ ರಿಸರ್ವ್ ಬ್ಯಾಂಕಿಗೆ ಹೆಚ್ಚಿನ ಸ್ವಾಯತ್ತತೆ ನೀಡುವುದು.

ಹೀಗೆ ಐಎಂಎಫ್ ಸೂಚಿಸಿರುವ ಕ್ರಮಗಳೆಲ್ಲವೂ ಹೆಚ್ಚಿನ ಉದಾರೀಕರಣವನ್ನು ಸಾಧಿಸುವವೇ. ದೇಶದ ಕಾರ್ಮಿಕರ, ಜನಸಾಮಾನ್ಯರ ಜೀವನ ಪರಿಸ್ಥಿತಿಯನ್ನು ಇನ್ನೂ ಹದಗೆಡಿಸುವ ಕ್ರಮಗಳೇ ಈ ಫೇಲಿನವು ಹೊರತು ಉತ್ತಮ ಪಡಿಸುವಂತಹವಲ್ಲ.

ಎಷ್ಟೆಂದರೂ ಇದು ಐಎಂಎಫ್ ನ ಮೂಲಭೂತ ಕಾಳಜಿಯಲ್ಲವೇ?

○

ನಿರುದ್ಯೋಗ ಸೃಷ್ಟಿಗೆ ಸರ್ಕಾರದ ಯೋಜನೆ

ತನ್ನ ನೌಕರರ ಸಂಖ್ಯೆಯಲ್ಲಿ ತೀವ್ರ ಕಡಿತ ಮಾಡಲು ಕೇಂದ್ರ ಸರ್ಕಾರ ಒಂದು ಯೋಜನೆ ರೂಪಿಸಿಕೊಂಡಿದೆಯಂತೆ. ಐದನೇ ವೇತನ ಆಯೋಗದ ಶಿಫಾರಸುಗಳ ಪ್ರಕಾರ ವಿವಿಧ ಇಲಾಖೆಗಳಲ್ಲಿ ಉದ್ಯೋಗಗಳ ಕಡಿತ ಮಾಡುವ ಯೋಜನೆಯನ್ನು ಅದು ರೂಪಿಸಿದೆಯಂತೆ.

ಸರ್ಕಾರಿ ನೌಕರರ ಸಂಖ್ಯೆಯನ್ನು ಸರಿಗಾತ್ರಕ್ಕೆ ಇಳಿಸುವ ಮಾತನ್ನು ಅದು ಆಡಿದೆ. ಸರಕಾರದ ಕೆಲವು ಕಾರ್ಯಗಳನ್ನೇ ಬಿಡುವ ವಿಚಾರವನ್ನು ಮಾಡಲಾಗುತ್ತಿದೆಯಂತೆ. ಕೆಲವು ಕಂಪನಿಗಳ ಸೃಷ್ಟಿ, ಕೆಲವು ಸ್ವಾಯತ್ತೀಕರಣಗಳನ್ನು ಅದು ವಿಚಾರ ಮಾಡುತ್ತಿದೆಯಂತೆ.

ಈ ವಿಷಯದಲ್ಲಿ ತಜ್ಞರುಗಳ ಸಲಹೆಗಳನ್ನು ಸರ್ಕಾರ ಪಡೆಯುತ್ತಿದೆಯಂತೆ. ಎಲ್ಲೇ ಹೆಚ್ಚು ನೌಕರರಿದ್ದರೂ ಅವರನ್ನು ಬೇರೆಡೆಗೆ ವರ್ಗಾಯಿಸಲಾಗುವುದಂತೆ. ಇದರ ಅರ್ಥ ಹಲವರನ್ನು ನಗರ ಪ್ರದೇಶಗಳಿಂದ ಗ್ರಾಮೀಣ ಪ್ರದೇಶಗಳಿಗೆ ವರ್ಗಾಯಿಸಲಾಗುವುದಂತೆ.

ಸರ್ಕಾರ ತಜ್ಞ ಅಭಿಪ್ರಾಯ ಕೇಳಿರುವ ಹಲವು ಸಂಸ್ಥೆಗಳು ತೀವ್ರ ಪ್ರಮಾಣದಲ್ಲಿ ನೌಕರಿಗಳ ಸಂಖ್ಯೆ ಕಡಿತ ಮಾಡುವ ಸಲಹೆ ನೀಡಬಹುದೆಂಬ ನಿರೀಕ್ಷೆ ಇದೆಯಂತೆ.

ಜಾಗತೀಕರಣವೆಂದರೆ ಇದಲ್ಲವೇ? ಜಗತ್ತಿನ ಎಲ್ಲೆಡೆ ಆಗುವುದೇ ಭಾರತದೊಳಗೂ ಆಗುವುದು, ಉಳಿದ ಬಂಡವಾಳಶಾಹಿ ದೇಶಗಳಲ್ಲಿ ಉದ್ಯೋಗಗಳ ಕಡಿತ ಉಂಟಾಗುತ್ತಿರುವಾಗ ಭಾರತದಲ್ಲಿ ಮಾತ್ರ ಮಾಡದೇ ಇರಲು ಸಾಧ್ಯವೇ?

ಉದಾರೀಕರಣ, ಜಾಗತೀಕರಣಗಳಿಗೆ ನಿರುದ್ಯೋಗೀಕರಣ ಎಂಬ ಹೆಸರನ್ನು ಸುಲಭವಾಗಿ ನೀಡಿಬಿಡಬಹುದಲ್ಲವೇ?

ಒಂದು ಕೋಟಿಗೂ ಹೆಚ್ಚು ನಿರುದ್ಯೋಗಗಳ ಸೃಷ್ಟಿ

ಇದು ಏಶಿಯಾದ ಬಿಕ್ಕಟ್ಟಿನಿಂದ ಉಂಟಾಗಬಹುದೆಂಬುದು ಅಂತರ್ರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಅಭಿಪ್ರಾಯ. ಏಶಿಯಾದ ಹಣಕಾಸು ಬಿಕ್ಕಟ್ಟಿನಿಂದಾಗಿ ಒಂದು ಕೋಟಿಗೂ ಮಿಕ್ಕಿ ಉದ್ಯೋಗಗಳ ಹಾನಿ ಉಂಟಾಗುತ್ತದೆಯಂತೆ.

ಸ್ಪರ್ಧಾತ್ಮಕ ಕರೆನ್ಸಿ ಅಪಮೌಲ್ಯೀಕರಣ ಉದ್ಯೋಗಗಳ ಮೇಲೆ ತೀವ್ರತರಹದ ಪರಿಣಾಮ ಉಂಟು ಮಾಡುತ್ತದೆ ಎಂದಿದೆ ಅದು. ಈ ವರದಿಯ ಪ್ರಕಾರ ಜಗತ್ತಿನ ಕಾರ್ಮಿಕ ಶಕ್ತಿಯ ಮೂರನೇ ಒಂದು ಭಾಗದಷ್ಟು ನಿರುದ್ಯೋಗಿಗಳಾಗುತ್ತಾರೆ.

ಏಶಿಯಾದ ಹಣಕಾಸು ಬಿಕ್ಕಟ್ಟು ಸಾಮಾಜಿಕ ಕಾಳಜಿಗಳನ್ನು ನಿರ್ಲಕ್ಷಿಸಿದರೆ ಏನಾಗುತ್ತದೆ ಎಂಬುದನ್ನು ತೋರಿಸಿಕೊಟ್ಟಿದೆ ಎಂದು ಅದು ಹೇಳಿದೆ. ಜಾಗತೀಕರಣ ಮಾರುಕಟ್ಟೆ ಶಕ್ತಿಗಳ ಒತ್ತಡದಿಂದಾಗಿ ನಡೆಯುತ್ತಿರುವುದರಿಂದ ಸಾಮಾಜಿಕ ಕಾಳಜಿಗಳು ಹಿಂದಕ್ಕೆ ತಳ್ಳಲ್ಪಟ್ಟಿವೆ ಎಂದು ಅದು ಅಭಿಪ್ರಾಯ ಪಟ್ಟಿದೆ.

ಜಾಗತಿಕ ವ್ಯಾಪಾರದ ಪ್ರಮಾಣ ಹೆಚ್ಚುವುದರಿಂದ ಮಾತ್ರ ಹೂಡಿಕೆ ಹೆಚ್ಚಾಗುತ್ತದೆ ಎಂಬ ಅಭಿಪ್ರಾಯ ತಪ್ಪು ಎಂಬುದನ್ನು ಏಶಿಯಾದ ಹಣಕಾಸು ಬಿಕ್ಕಟ್ಟು ತೋರಿಸಿಕೊಟ್ಟಿದೆ ಎಂಬ ಅಭಿಪ್ರಾಯ ಅದರದ್ದು.

ಏಶಿಯಾದ ಬಿಕ್ಕಟ್ಟು ಉಂಟಾಗುವವರೆಗೆ ಆರ್ಥಿಕ ಪುನರುಜ್ಜೀವನದ ಲಕ್ಷಣಗಳು ಕಂಡು ಬಂದು ಈ ಬಗ್ಗೆ ಭ್ರಮೆಗಳನ್ನುಂಟುಮಾಡಿದ್ದವು. ಈಗ ಈ ಬಿಕ್ಕಟ್ಟಿನಿಂದಾಗಿ ಭ್ರಮನಿರಸನವಾಗಿದೆ ಎಂದು ಅದು ಹೇಳಿದೆ.

ಈರುಳ್ಳಿ ಬಿಕ್ಕಟ್ಟು?

ಉದಾರೀಕರಣದಡಿ ಇಂತಹ ಹಲವು ಬಿಕ್ಕಟ್ಟುಗಳು ದಿನನಿತ್ಯ ಬರತೊಡಗಿವೆ. ರಫ್ತಿಗಾಗಿ ಬೆಳೆದ ಕೋಲಾರದ ಈರುಳ್ಳಿ ಕೇಳುವವರಿಲ್ಲದೆ ಕೊಳೆತು ಹೋದದ್ದು ಒಂದು ಕಡೆಯಾದರೆ ಜನ ಸಾಮಾನ್ಯರ ಆಹಾರದ ಮುಖ್ಯ ಅಂಶವಾಗಿ ಹೋಗಿರುವ ಈರುಳ್ಳಿ ಈಗ ಮಾರುಕಟ್ಟೆಯಲ್ಲಿ ಲಭ್ಯವಿಲ್ಲ. ಲಭ್ಯವಿರುವಲ್ಲಿ ಅದರ ಬೆಲೆ ವಿಪರೀತ.

ಈಗ ಕೇಂದ್ರ ಸರ್ಕಾರ ದುಬಾಯಿಯಿಂದ ಈರುಳ್ಳಿ ಆಮದು ಮಾಡಿಕೊಳ್ಳುವ ತರಾತುರಿಯಲ್ಲಿದೆ. ಈರುಳ್ಳಿಯೊಂದೇ ಅಲ್ಲ, ಟೊಮಾಟೋ, ಬೇಳೆಯ ವಿಷಯದಲ್ಲಿ ಇದೇ ಆಗುತ್ತಿರುವುದು. ಒಂದು ಸಾರಿ ಮಾರುಕಟ್ಟೆಯಲ್ಲಿ ಮಹಾಪೂರ ಮತ್ತೊಮ್ಮೆ ಬರಗಾಲ.

ಹಿಂದೆ ಆಲೂಗಡ್ಡೆಯ ವಿಷಯದಲ್ಲೂ ಹೀಗೆಯೇ ಆಯಿತು.

ಯೋಜನೆಯನ್ನೆಲ್ಲಾ ಬಿಟ್ಟುಕೊಟ್ಟಿರುವುದರಿಂದ ಮಾರುಕಟ್ಟೆ ಶಕ್ತಿಗಳು ಈ ಬೆಳೆಗಳನ್ನು ತಮ್ಮ ಹತೋಟಿಗೆ ತೆಗೆದುಕೊಂಡಿವೆ. ಆದ್ದರಿಂದ ಮಹಾಪೂರ ಮತ್ತೂ ಬರಗಾಲಗಳು ದಿನ ನಿತ್ಯದ ಮಾತುಗಳಾಗುತ್ತಿವೆ. ಆಹಾರ ಧಾನ್ಯಗಳ ವಿಷಯದಲ್ಲೂ ಇದು ನಿಜವಾಗುವ ದಿನ ಬಹುಶಃ ದೂರವಿಲ್ಲ.

ಮಹಿಳಾ ಸಂಘಟನೆಯ ಸದಸ್ಯತ್ವ ಚಳುವಳಿ

ಗುಲ್ಬರ್ಗ : ಸೆ. 23 ರಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಗುಲ್ಬರ್ಗಾ ನಗರ ಸಮಿತಿ ತಾರಫೈಲ್ ಬಡಾವಣೆಯಲ್ಲಿ ಸದಸ್ಯತ್ವ ಚಳುವಳಿಯ ಉದ್ಘಾಟನೆ ಕಾರ್ಯಕ್ರಮ ಹಮ್ಮಿಕೊಂಡಿತ್ತು. ಬಡ ಮಹಿಳೆಯೊಬ್ಬಳಿಗೆ ಸಂಘಟನೆಯ ಸದಸ್ಯತ್ವ ಕೊಡುವ ಮೂಲಕ ಎಸ್. ಸತ್ಯ ಕಾರ್ಯಕ್ರಮ ಉದ್ಘಾಟಿಸಿದರು. ಎಲ್ಲಾ ಮಹಿಳೆಯರು ಸಂಘಟನೆಯೆಂಬ ಕುಟುಂಬದೊಳಗೆ ಸದಸ್ಯರಾಗಬೇಕು. ತನ್ಮೂಲಕ ಮಹಿಳಾ ಶಕ್ತಿಯನ್ನು ಒಗ್ಗೂಡಿಸಬೇಕು. ಆಗ ಮಹಿಳೆ ತನ್ನ ಹಕ್ಕುಗಳಿಗಾಗಿ ದನಿಯೆತ್ತಲು ಸಾಧ್ಯವಾಗುತ್ತದೆ. ಓಣಿಯಿಂದ-ಓಣಿಗೆ, ಊರಿನಿಂದ-ಊರಿಗೆ ಹೀಗೆ ಸಂಘಟನೆಯು ಬೆಳೆಯುತ್ತಾ ಒಟ್ಟು ಮಹಿಳೆಯರ ಮನಸ್ಸಿನ ಮಾತಾಗಬೇಕು. ಹೋರಾಟದ ಸಾವಿರಾರು ಚಳುವಳಿಯ ಸಮುದ್ರವಾಗಬೇಕಿದೆ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಡಾ|| ನಾಗಾಬಾಯಿ ಬುಳ್ಳಾ ಶೋಷಣಾ ಸಮಾಜದಲ್ಲಿ ಮಹಿಳೆ ಯರು ಅಸದಳ ಕಷ್ಟ-ದೌರ್ಜನ್ಯಗಳಿಗೆ ಬಲಿಯಾಗುತ್ತಿ ದ್ದಾಳೆ. ಮೂಢ ನಂಬಿಕೆ, ಕಂದಾಚಾರ, ಅನಕ್ಷರತೆ, ಬಡಮಹಿಳೆಯರ ಬದುಕಿನ ಸುತ್ತ ಬೇಲಿಯಾಗುತ್ತಿದೆ. ವೈಜ್ಞಾನಿಕ ಚಿಂತನೆಯ ದಿಕ್ಕಿಗೆ ಪಯಣಿಸುವ ಮತ್ತು ಸಮಗ್ರ ಬದಲಾವಣೆಗಾಗಿ ಕೆಲಸ ಮಾಡುವ ಅವಕಾಶ ಜೆ.ಎಂ.ಎಸ್. ಒದಗಿಸಿಕೊಟ್ಟಿದೆ. ಎಲ್ಲಾ ಮಹಿಳೆಯರು ಈ ಸಂಘಟನೆಗೆ ಸದಸ್ಯರಾಗಬೇಕೆಂದು ಕರೆಯಿತ್ತರು.

ಮುಖ್ಯ ಅತಿಥಿಯಾಗಿದ್ದ ನೀಲಾ. ಕೆ. ಗುಲ್ಬರ್ಗಾ ನಗರದ ಮಹಿಳೆಯರು ಕಳೆದೆರಡು ವರ್ಷಗಳಿಂದ ನಿರಂತರವಾಗಿ ಹೋರಾಟದ ಹಾದಿ ತುಳಿದಿ ದ್ದಾರೆ. ಸಮಾನ ಕೂಲಿಗಾಗಿ, ರಾಜಕೀಯ ದಲ್ಲಿ ಮೀಸಲಾತಿಗಾಗಿ, ಮಹಿಳಾ ಶೌಚಾಲಯ ಕ್ಕಾಗಿ, ರೇಷನ್ ಕಾರ್ಡ್‌ಗಾಗಿ ಹೀಗೆ ಹಲ ವಾರು ಪ್ರಮುಖ ಬೇಡಿಕೆಗಳನ್ನು ಕೈಗೆತ್ತಿ ಕೊಂಡು ಅವಿರತ ಶ್ರಮಿಸುವ ಹೊಣೆ ಹೊತ್ತು ನಡೆಯುತ್ತಿದ್ದಾರೆ. ಗುಲ್ಬರ್ಗಾ ನಗರದ ರಸ್ತೆಗಳು, ಕುಡಿವ ನೀರು, ರೇಷನ್ ಕಾರ್ಡ್ ವ್ಯವಸ್ಥೆ ಹದಗೆಟ್ಟಿದೆ. ತಾರಫೈಲ್‌ಗೆ ಕೆಳಸೇತುವೆ ಕಟ್ಟುವ ವಿಚಾರದಲ್ಲಿ ಸರಕಾರ ಹಿಂದೆ ಬಿದ್ದಿದೆ. ವರದಕ್ಷಿಣೆ ಕಿರುಕುಳಕ್ಕೆ ಅಸಂಖ್ಯಾತ ಮಹಿಳೆಯರು ಬಲಿಯಾಗುತ್ತಿದ್ದಾರೆ. ಶಾಲೆಯ ಮುಖವೇ ಗೊತ್ತಿರದ ಯುವತಿ ಯರ ಭವಿಷ್ಯ ನೆನಪಿಸಿಕೊಂಡರೆ ಕರುಳು ಕಿತ್ತುಬರುತ್ತದೆ. ರಕ್ತ ಹೀನತೆ ಹೆಂಗಸರಲ್ಲಿ ಮಕ್ಕಳಲ್ಲಿ ಸರ್ವೇ ಸಾಮಾನ್ಯ ವಾಗಿದೆ. ಈ ಎಲ್ಲಾ ಪ್ರಶ್ನೆಗಳನ್ನು ಸವಾಲುಗಳನ್ನು ಕೈಗೆತ್ತಿ ಕೊಳ್ಳುತ್ತಲೇ ಜೆ.ಎಂ.ಎಸ್. ಇನ್ನೂ ಬೆಳೆಯ ಬೇಕಾಗಿದೆ. ಒಂದು ದೀಪದಿಂದ ನೂರು ದೀಪ ಬೆಳಗಲಿ. ಒಬ್ಬ ಸದಸ್ಯ ನೂರು ಸದಸ್ಯತ್ವವನ್ನು ಮಾಡಿಸಲಿ ಎಂದು ನೀಲಾ.ಕೆ ಹೇಳಿದರು.

ಜಿಲ್ಲಾ ಸಹಕಾರ್ಯದರ್ಶಿ ಗಂಗಮ್ಮ ಬಿರಾದಾರ, ಎಸ್.ಎಫ್.ಐ. ಜಿಲ್ಲಾ ಅಧ್ಯಕ್ಷ ಜೈಲಾಲ ತೋಟದಮನಿ, ಸಿ.ಐ.ಟಿ.ಯು ಮುಖಂಡ ದುರ್ಗಪ್ಪ, ತಾರಫೈಲ್ ಎಸ್.ಎಫ್.ಐ. ಘಟಕದ ಅಧ್ಯಕ್ಷ ದುರ್ಗಪ್ಪ ಹಿರೇನೂರ, ಕಾರ್ಯದರ್ಶಿ ಬಸವಲಿಂಗಪ್ಪ ಇವರು ಸಭೆಯನ್ನುದ್ದೇಶಿಸಿ ಮಾತನಾಡಿದರು. ಸಭೆಯ ಅಧ್ಯಕ್ಷತೆ ಮರಮ್ಮ ಮಾಚನೂರು ವಹಿಸಿದ್ದರು. ನಿರ್ವಹಣೆ ಮತ್ತು ಪ್ರಸ್ತಾವನೆ ನಗರ ಸಮಿತಿಯ ಕಾರ್ಯದರ್ಶಿ ಮರುಳಮ್ಮ ಮಾಡಿದರು. ಅಧ್ಯಕ್ಷೆ ಅಮೀನಾಬೇಗಂ, ನಿಂಗಮ್ಮ ಮೈನಾಬಾಯಿ, ನಂದಾ, ಸಂಗಮ್ಮ ಇವರು ವೇದಿಕೆ ಮೇಲೆ ಉಪಸ್ಥಿತ ರಿದ್ದರು. ಪ್ರಾರಂಭದಲ್ಲಿ ಧ್ವಜಾರೋಹಣ ತಾರಫೈಲ್‌ನ ಹಿರಿಯ ಮಹಿಳೆ ಜೆ.ಎಂ.ಎಸ್. ಮುಖಂಡೆ ಲಕ್ಷ್ಮೀಬಾಯಿ ಇವರು ನೆರವೇರಿಸಿದರು. ತಾರಫೈಲ್‌ನ ಎಸ್.ಎಫ್.ಐ. ಘಟಕದಿಂದ ಮಾಲಾರ್ಪಣೆ ಮಾಡಿದರು. 400 ಕ್ಕೂ ಹೆಚ್ಚು ಮಹಿಳೆಯರು ಸಭೆಯಲ್ಲಿ ಭಾಗವಹಿಸಿದರು. ಕಾರ್ಯಕ್ರಮದ ತರುವಾಯ 10 ಗುಂಪುಗಳು ಸದಸ್ಯತ್ವ ನೊಂದಾವಣೆಗಾಗಿ ಕ್ಷೇತ್ರ ಕಾರ್ಯಕ್ಕೆ ತೆರಳಿದರು.

ಡಿ.ವೈ.ಎಫ್.ಐ.ಘಟಕ ಉದ್ಘಾಟನೆ

ಮಂಡ್ಯ: ಸೆ. 22 ರಂದು ಜಿಲ್ಲೆಯ ಮಳವಳ್ಳಿ ಟೌನ್ ಪೇಟೆ ಒಕ್ಕಲಗೇರಿ ಡಿವೈಎಫ್ಐ ಘಟಕವನ್ನು ರಾಜ್ಯ ಕಾರ್ಯದರ್ಶಿಯ ಎಸ್.ವೈ. ಗುರುಶಾಂತ್ ಬೋರ್ಡ್ ಅನಾವರಣ ಮಾಡುವುದರ ಮುಖಾಂತರ ಉದ್ಘಾಟನೆನ ನೇರವೇರಿಸಿ ಮಾತನಾಡುತ್ತಾ, ದೇಶಪ್ರೇಮಿಗಳು ಕಂಡಂತಹ ಕನಸು ನನಸಾಗಲಿಲ್ಲ, ನಿರುದ್ಯೋಗ ಹೆಚ್ಚಾಗುತ್ತಿದೆ, ರೈತ ಕಾರ್ಮಿಕರ ಸಮಸ್ಯೆಗಳು ಉಲ್ಬಣ ಗೊಳ್ಳುತ್ತಿವೆ, ಜೀವನ ಬಹಳ ಕಷ್ಟಕರ ವಾಗಿದೆ. ಇಂತಹ ಸ್ಥಿತಿಯಲ್ಲಿ ಯುವಜನರು ಸಂಘಟಿತರಾಗಿ ಮೂಲಭೂತ ಸಮಸ್ಯೆಗಳಿಗೆ ಹೋರಾಟ ಮಾಡಬೇಕಾಗಿದೆ ಎಂದರು. ಮುಖ್ಯ ಅತಿಥಿಗಳಾದ ಮಾಜಿ ಪುರಸಭಾಧ್ಯಕ್ಷ ಎಂ.ಹೆಚ್.ಕೆಂಪಯ್ಯ ಮಾತನಾಡುತ್ತಾ ಯುವಕರಲ್ಲಿ ಸೋಮಾರಿತನ ಹೆಚ್ಚುತ್ತಿದೆ. ಒಳ್ಳೆಯ ವಿಚಾರಗಳಿಗೆ ಸ್ಪಂದಿಸದೇ ಕೆಟ್ಟ ವಿಚಾರಗಳಿಗೆ ಕೈಹಾಕುತ್ತಿದ್ದಾರೆ. ಅದನ್ನು ಕೈಬಿಡಬೇಕೆಂದರು. ಮತ್ತೊಬ್ಬ ಮಾಜಿ ಪುರಸಭಾಧ್ಯಕ್ಷ ನಂಜುಂಡಯ್ಯ ಮತ್ತು ಡಿ.ವೈ.ಎಫ್.ಐ. ತಾಲ್ಲೂಕು ಕಾರ್ಯದರ್ಶಿ ಎನ್.ಎಲ್. ಭರತ್‌ರಾಜ್, ಡಿ.ವೈ.ಎಫ್.ಐ. ಜಿಲ್ಲಾ ಸಂಚಾಲಕರಾದ ಪುಟ್ಟಮಾದಯ್ಯ, ಎಸ್.ಎಫ್.ಐ. ಜಿಲ್ಲಾ ಅಧ್ಯಕ್ಷ ಟಿ.ಎಲ್. ಕೃಷ್ಣೇಗೌಡ ಮಾತನಾಡಿದರು. ವೇದಿಕೆಯಲ್ಲಿ ಪಿ.ಎಲ್.ಡಿ. ಬಾಂಕ್ ಮಾಜಿ ಅಧ್ಯಕ್ಷ ಚಿಕ್ಕರಾಜು, ಡಾ|| ರಾಜ್ ಅಭಿಮಾನಿಗಳ ಸಂಘದ ಅಧ್ಯಕ್ಷ ನಂಜಯ್ಯ, ಪುರಸಭಾ ಸದಸ್ಯರಾದ ಗೌರಮ್ಮ, ವಿಶ್ವೇಶ್ವರಯ್ಯ ಯುವಕ ಸಂಘದ ಅಧ್ಯಕ್ಷ ಚಿಕ್ಕಮರಿ ಕೋಟಿ, ಡಿ.ವೈ.ಎಫ್.ಐ. ಮುಸ್ಲಿಂ ಬ್ಲಾಕ್ ಅಧ್ಯಕ್ಷ ಆದಿಲ್‌ಪಾಷಾ, ಮಹಾನಂದಿ ಪರ್ತಕರ್ತ ಮಲ್ಲಿಕಾರ್ಜುನಸ್ವಾಮಿ, ಆಂದೋಲನ ಪತ್ರಕರ್ತ ಮಹೇಶ್‌ರವರು ಉಪಸ್ಥಿತರಿದ್ದರು. ಸಭೆಯ ಅಧ್ಯಕ್ಷತೆಯನ್ನು ಡಿ.ವೈ.ಎಫ್.ಐ. ಘಟಕ ಅಧ್ಯಕ್ಷ ಪುಟ್ಟಸ್ವಾಮಿ ವಹಿಸಿದ್ದರು. ಸ್ವಾಗತವನ್ನು ಪಿ.ಸ್ವಾಮಿ, ನಿರೂಪಣೆಯನ್ನು ಜಯಚಂದ್ರ, ವಂದನೆಯನ್ನು ಎಂ.ಪಿ.ಮಧು ನೆರವೇರಿಸಿದರು. ಬಿ.ಜಿ.ವಿ.ಎಸ್. ಜಿಲ್ಲಾ ಅಧ್ಯಕ್ಷರಾದ ಎಸ್. ರೇವಣ್ಣ ಪವಾಡಗಳ ರಹಸ್ಯ ಬಯಲು ಕಾರ್ಯಕ್ರಮ ನಡೆಸಿಕೊಟ್ಟರು. ಸಮಾರಂಭದಲ್ಲಿ ಡಿ.ವೈ.ಎಫ್.ಐ., ವಿಶ್ವೇಶ್ವರಯ್ಯ ಯುವಕ ಸಂಘ, ವಿನಾಯಕ ಯುವಕ ಸಂಘದ ಹಾಗೂ ಸ್ಥಳೀಯ ಯುವ ಜನರು ನೂರಾರು ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಪದಾಧಿಕಾರಿಗಳು:

ಸಂಚಾಲಕರಾಗಿ - ಜಯಚಂದ್ರ, ಅಧ್ಯಕ್ಷರಾಗಿ - ಹೆಚ್.ಪಿ.ಪುಟ್ಟಸ್ವಾಮಿ, ಉಪಾಧ್ಯಕ್ಷರಾಗಿ - ನಾಗರಾಜು, ಕಾರ್ಯದರ್ಶಿ - ಎಂ.ಪಿ.ಮದು, ಖಜಾಂಚಿಯಾಗಿ - ಶಿವರಾಜ್

"ಪಕ್ಷದ ಯಶಸ್ವಿ ಅಧ್ಯಯನ ಶಿಬಿರ"

ಮಂಡ್ಯ: ಪಕ್ಷದ ಮಂಡ್ಯಜಿಲ್ಲಾ ಕಾರ್ಯಕರ್ತರ ಅಧ್ಯಯನ ಶಿಬಿರವು ದಿ 5-6 ಸೆ. 98 ರಂದು ಯಶಸ್ವಿಯಾಗಿ ನಡೆಯಿತು.

ಮಳವಳ್ಳಿ ತಾ|| ಶಿಂಷಾಪುರದಲ್ಲಿ ನಡೆದ ಈ ಶಿಬಿರದಲ್ಲಿ 50 ಪ್ರತಿನಿಧಿಗಳು ಭಾಗವಹಿಸಿದ್ದರು.

ಕಾರ್ಯಕರ್ತರಿಗೆ ತರಬೇತಿ ನೀಡಲು ಹಮ್ಮಿಕೊಂಡಿದ್ದ ಈ ಶಿಬಿರದಲ್ಲಿ "ಕಮ್ಯುನಿಸ್ಟ್ ಪ್ರಣಾಳಿಕೆ" ಮತ್ತು "ಜನಸಾಮಾನ್ಯರ ನಡುವೆ ಪಕ್ಷದ ಕೆಲಸ" ಎಂಬ ವಿಷಯದ ಬಗ್ಗೆ ಕಾಂ|| ಪ್ರಕಾಶ್ ಕೆ., "ಕೋಮುವಾದ, ಫ್ಯಾಸಿಸಂ ಮತ್ತು ಆರ್.ಎಸ್.ಎಸ್." ಬಗ್ಗೆ ಕಾಂ|| ಜಿ.ಎನ್. ನಾಗರಾಜ್, "ಪಕ್ಷದ ಕಾರ್ಯಕ್ರಮ ಹಾಗೂ ಸಮಿತಿಗಳ ಕಾರ್ಯನಿರ್ವಹಣೆ" ಕುರಿತು ಕಾಂ|| ಜಿ.ಸಿ. ಬಯ್ಯಾರೆಡ್ಡಿ ಉಪನ್ಯಾಸ ನೀಡಿದರು.


ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆ ರಚನೆ

ತುಮಕೂರು: ಕೇಂದ್ರ ಸರ್ಕಾರದ ಜನವಿರೋಧಿ ನೀತಿಗಳನ್ನು ಹಿಮ್ಮೆಟ್ಟಿಸಲು ಹಾಗೂ ಉದಾರೀಕರಣ, ಜಾಗತೀಕರಣದ ಭಾಗವಾಗಿ ಸಾರ್ವಜನಿಕ ವಲಯ ಉದ್ಯಮಗಳ ಖಾಸಗೀಕರಣ ವಿರೋಧಿಸಲು ರಾಷ್ಟಮಟ್ಟದ ಸುಮಾರು 50 ಕ್ಕೂ ಹೆಚ್ಚು ವಿದ್ಯಾರ್ಥಿಯುವಜನ ಕಾರ್ಮಿಕರ ನೌಕರರ, ಮಹಿಳಾ ಸಂಘಟನೆಗಳನ್ನು ಒಳಗೊಂಡ ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆಯ ಜಿಲ್ಲಾ ಘಟಕವನ್ನು ಸ್ಥಾಪಿಸಲಾಗಿದೆ.

ಸೆ.19 ರಂದು ನಡೆದ ಸಭೆಯಲ್ಲಿ ಎ.ಐ.ಟಿ.ಯು.ಸಿ., ಸಿ.ಐ.ಟಿ.ಯು., ಎಸ್.ಎಫ್.ಐ. ವಿಮಾನೌಕರ ಸಂಘ, ಬ್ಯಾಂಕ್ ನೌಕರ ಸಂಘ, ಎ.ಐ.ಬಿ.ಇ.ಎ., ಬಿ.ಇ.ಎಫ್.ಐ., ಎ.ಟಿ.ಬಿ.ಓ.ಸಿ., ಪಿಯರ್‌ಲೆಸ್ ನೌಕರರ ಸಂಘ, ಬೀಡಿಕಾರ್ಮಿಕರ ಸಂಘ, ಅಂಗನವಾಡಿ ಕಾರ್ಮಿಕರ ಸಂಘ, ಪಿ ಮತ್ತು ಟಿ ನೌಕರರ ಸಂಘ, ಜಿ.ಐ.ಸಿ. ನೌಕರರ ಸಂಘ ಮತ್ತಿತರ ಪ್ರಮುಖ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಈ ಸಭೆಯ ಪ್ರಾರಂಭದಲ್ಲಿ ಎ.ಐ.ಪಿ.ಎಸ್.ಓ. ನ ರಾಜ್ಯ ಮುಖಂಡ ಶಾಮಾಚಾರ್, ಕೇರಳದ ಎಡಚಳುವಳಿಯ ಮುಖಂಡ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಚಡಯನ್ ಗೋವಿಂದನ್, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಹಾಗೂ ಸ್ವಾತಂತ್ರ ಹೋರಾಟಗಾರರು ಆದ ಪಿ. ರಾಮಚಂದ್ರರಾವ್ ಅವರಿಗೆ 1 ನಿಮಿಷ ಮೌನ ಆಚರಿಸುವ ಮೂಲಕ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಸಭೆಯ ಪ್ರಾರಂಭದಲ್ಲಿ ಐ.ಸಿ.ಇ.ಯು. ಜಿ.ಕೆ. ಗಂಗಾಧರ್ ಸ್ವಾಗತಿಸಿದರು ಸಿ.ಐ.ಟಿ.ಯು.ನ ಸೈಯದ್ ಮುಜೀಬ್ ಎನ್.ಪಿ.ಎಂ. ಬಗ್ಗೆ ವಿವರಿಸಿ. ಕೊನೆಯಲ್ಲಿ ಎ.ಐ.ಟಿ.ಯು.ಸಿ ನ ಶಿವಕುಮಾರ್ ವಂದಿಸಿದರು. ಈ ಸಭೆಯ ಅಧ್ಯಕ್ಷತೆಯನ್ನು ಎ.ಐ.ಬಿ.ಓ.ಎ. ಸತ್ಯನಾರಾಯಣ ವಹಿಸಿದ್ದರು. ಈ ಸಭೆಯಲ್ಲಿ ಎ.ಐ.ಟಿ.ಯು.ಸಿ. ಶಿವಣ್ಣ, ರೇವಣ್ಣ, ಸಿ.ಐ.ಟಿ.ಯು.ನ ದಸ್ತಗೀರ್, ಅಂಗನವಾಡಿಯ ಅಲ್ಲಾಭಕಾಶ್, ರಂಗಮಣಿ ಮತ್ತು ಬಿ.ಇ.ಎಫ್.ಐ.ನ ಕೆ.ಬಿ. ಮಹಾದೇವಪ್ಪ, ಪಿ ಅಂಡ್ ಟಿ ಹನುಮಂತ ರಾಯ, ರಾಜ್‌ಕುಮಾರ್ ಎ.ಐ.ಬಿ.ಇ.ಎ. ನ ಕಾರ್ಯದರ್ಶಿ ಕಾಂ|| ಹೆಬ್ಬರ್ ಎಸ್.ಎಫ್.ಐ ಅಶೋಕ್ ಕುಮಾರ್ ಮುಂತಾದವರು ಭಾಗವಹಿಸಿದ್ದರು.

ಸಾ.ಸಂ. ವೇದಿಕೆ ಜಿಲ್ಲೆಯ ಪಧಾಧಿಕಾರಿಗಳು: ಸಂಚಾಲಕರಾಗಿ ಐ.ಸಿ.ಇ.ಯು.ನ ಕಾ|| ಜಿ.ಕೆ.ಗಂಗಾಧರ್, ಸಹಸಂಚಾಲಕರಾಗಿ ಸಿ.ಐ.ಟಿ.ಯು.ನ ಕಾಂ|| ಸೈಯದ್ ಮುಜೀಬ್, ಎ.ಐ.ಟಿ.ಯು.ಸಿ. ಕಾಂ|| ಶಿವಕುಮಾರ್, ಅಂಗನವಾಡಿ ನೌಕರ ಸಂಘದ ಕಾಂ|| ಸಿ. ರಂಗಮಣಿ ಪಿ ಅಂಡ್ ಟಿ ನ ಕಾಂ|| ರಾಜ ಕುಮಾರ್ ಹಾಗೂ ಬ್ಯಾಂಕ್ ನೌಕರರ ಸಂಘದ ಕಾಂ|| ಎಂ.ವಿ. ವೆಂಕಟೇಶ್ ಹಾಗೂ ಖಜಾಂಚಿಯಾಗಿ ಎ.ಐ.ಬಿ.ಇ.ಎ.ನ ಕಾಂ|| ಹೆಬ್ಬರ್ ಇವರನ್ನು ಸರ್ವಾನು ಮತದಿಂದ ಆರಿಸಲಾಯಿತು.



ಹರಿಹರ: ಕೆಳಸ್ತರದ ದುಡಿಯುವ ವರ್ಗದ ದನಿಯಾಗಿ, ವಿದ್ಯಾರ್ಥಿ-ಯುವಜನರ, ಮಹಿಳೆಯರ ಮತ್ತು ಇತರ ಜನ ವಿಭಾಗಗಳ ಹೋರಾಟಗಳಲ್ಲಿ ಮುಂಚೂಣಿ ಪಾತ್ರ ವಹಿಸಿ ತಮ್ಮ ಅಂತಿಮ ಉಸಿರಿನವರೆಗೂ ದುಡಿದ ಅಪರೂಪದ ಆದರ್ಶ ಕಮ್ಯುನಿಸ್ಟ್ ಎನ್ನಿಸಿ ಕೊಂಡವರು ಪಿ. ರಾಮಚಂದ್ರ ರಾವ್ ಎಂದು ಸಿ.ಐ.ಟಿ.ಯು. ಜಿಲ್ಲಾ ಅಧ್ಯಕ್ಷರಾದ ನಿತ್ಯಾನಂದ ಸ್ವಾಮಿ ಸೆ. 27ರಂದು ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿದರು.

ಅಧ್ಯಾಪಕರಾಗಿ ಪ್ರೀತಿಯ ಮಾಸ್ಟು ಎನಿಸಿದ ರಾಮಚಂದ್ರರಾಯರ ಅಧ್ಯಯನ ಶೀಲತೆ, ರೈತ ಕಾರ್ಮಿಕ ಚಳುವಳಿಯಲ್ಲಿನ ಅವರ ಸಮರಶೀಲತೆ, ಶಾಸಕರಾಗಿದ್ದಾಗ ಅವರ ಕ್ರಿಯಾಶೀಲತೆಯ ಬಗ್ಗೆ ಸಭೆಯನ್ನು ದ್ದೇಶಿಸಿ ಮಾತನಾಡಿದ ವಿಮಾನೌಕರರ ಸಂಘದ ಕೆ.ಎಲ್. ಭಟ್, ಮೈಸೂರು ಕಿರ್ಲೋಸ್ಕರ್ ಎಂಪ್ಲಾಯೀಸ್ ಯೂನಿಯನ್ನಿನ ಸಿ.ಎಂ. ಜಯಾ ನಂದ್, ಜೋಷಿ, ವೈ.ಬಿ. ರೋಬಡೆ, ಆರ್.ಬಿ. ಅಂಗಡಿ, ಹರಿಹರ ಪಾಲಿಫೈಬರ್ಸ್ ಎಂಪ್ಲಾಯೀಸ್ ಯೂನಿಯನ್ ಆರ್.ಸಿ. ಉನ್ನಿತನ್, ಜೆ. ಮಲ್ಲಿಕಾರ್ಜುನ್ ಸ್ವಾಮಿ, ಬೀಡಿ ಕಾರ್ಮಿಕರ ಸಂಘದ ಹೊನ್ನೂರು ಸಾಬ್, ಡಿ.ವೈ.ಎಫ್.ಐ.ನ ಕೆ. ಮಹಂತೇಶ್, ಸಿ.ಐ.ಟಿ.ಯು.ವಿನ ಎ.ಎಸ್. ಮೂರ್ತಿ ಮತ್ತು ರಾಮ್ಕೊ ಇಂಡಸ್ಟ್ರೀಸ್ ವರ್ಕರ್ಸ್ ಯೂನಿಯನ್ ಕೆ. ಬಸವನ ಗೌಡರು ಮಾತನಾಡಿ ತಮ್ಮ ಶ್ರದ್ಧಾಂಜಲಿ ಸಲ್ಲಿಸಿದರು.

ಬೆಳ್ತಂಗಡಿ : ಸಿ.ಪಿ.ಐ(ಎಂ) ಬೆಳ್ತಂಗಡಿ ತಾಲ್ಲೂಕು ಸಮಿತಿ ಇತ್ತೀಚೆಗೆ ಸಭೆ ಸೇರಿ ಪಿ.ಆರ್. ದುಡಿಯುವ ಜನತೆಯ ಏಳಿಗೆಯ ಕಮ್ಯುನಿಸ್ಟ್ ಸಿದ್ಧಾಂತದ ರೂಪವಾಗಿದ್ದರು ಎಂದು ತನ್ನ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿತು.

ರೈತ, ಕಾರ್ಮಿಕರ ಹಿತಕ್ಕಾಗಿ ಕಮ್ಯುನಿಸ್ಟ್ ಸಿದ್ಧಾಂತದಡಿ ಪಿ.ಆರ್. ತೋರಿಸಿಕೊಟ್ಟ ದಾರಿಯಲ್ಲಿ ದುಡಿಯುವ ನಿರ್ಣಯವನ್ನು ಸಭೆಯು ಕೈಗೊಂಡಿತು.

ಬಿಜಾಪುರ : ವಾತ್ಸಲ್ಯಮಯಿಯಾಗಿದ್ದ ರಾಮಚಂದ್ರ ರಾವ್ ಸಾಮಾನ್ಯ ಕಾರ್ಯ ಕರ್ತರ ಮಟ್ಟಕ್ಕೆ ಇಳಿದು ಅವರನ್ನು ಎತ್ತರಕ್ಕೆ ಬೆಳೆಸಲು ಪ್ರಯತ್ನಿಸುತ್ತಿದ್ದರು ಎಂದು. ಬಿಜಾಪುರ ಸಿ.ಪಿ.ಐ(ಎಂ) ಜಿಲ್ಲಾ ಸಮಿತಿ ತನ್ನ ಶ್ರದ್ಧಾಂಜಲಿ ಸಭೆಯಲ್ಲಿ ಶೋಕತಪ್ತ ಶ್ರದ್ಧಾಂಜಲಿಯೊಂದಿಗೆ ಕೊಂಡಾಡಿತು.

ಕಾಮ್ರೇಡ್ ಎನ್.ಕೆ. ಉಪಾಧ್ಯಾಯರು ಸಭೆಯಲ್ಲಿ ಮಾತನಾಡಿ ಪಿ.ಆರ್. ನಮಗೆಲ್ಲ ಸ್ಫೂರ್ತಿದಾಯಕರಾಗಿದ್ದರು. ಅವರ ಉದ್ದೇಶಗಳನ್ನು ಹಳ್ಳಿ ಹಳ್ಳಿಗೂ ಕೊಂಡೊಯ್ಯೋಣ ಎಂದರು.

ಸಭೆಯಲ್ಲಿ ಸಿ.ಆರ್. ಭಟ್, ಭೀಮಸಿ ಕಲಾದಗಿ. ಅಣ್ಣರಾಯಿ ಈಳೇಗಾರ, ಎನ್.ಎಲ್.ನಧಾಪ್, ಸುರೇಖಾ ರಜಪೂತ, ವಿ.ಎಂ. ಸೊನ್ನದ ಮುಂತಾದವರು ಮಾತನಾಡಿದರು.

ಶಿವಮೊಗ್ಗ: ಜಾತ್ಯಾತೀತ, ಪ್ರಜಾಪ್ರಭುತ್ವ ಚಳುವಳಿ ಪಿ.ಆರ್. ನಿಧನದಿಂದ ಅಪಾರ ನಷ್ಟ ಅನುಭವಿಸಿದೆ ಎಂದು ಶಿವಮೊಗ್ಗ ಜಿಲ್ಲಾ ಸಿ.ಪಿ.ಐ.(ಎಂ) ಸಮಿತಿ ತನ್ನ ಶ್ರದ್ಧಾಂಜಲಿ ಸಲ್ಲಿಸಿದೆ.

ಸೆ. 18ರಂದು ನಡೆದ ಸಭೆಯಲ್ಲಿ ಎಸ್.ಬಿ. ಶಿವಶಂಕರ್, ಜೀವ ವಿಮಾ ನೌಕರರ ಸಂಘದ ಕೆ.ಎಲ್. ರಾವ್, ವೇದವ್ಯಾಸ್ ಮೊದಲಾದವರು ಮಾತನಾಡಿದರು.

ಸಿ.ಪಿ.ಐ(ಎಂ), ಸಿ.ಐ.ಟಿ.ಯು, ಜೆ.ಎಂ.ಎಸ್. ಡಿ.ವೈ.ಎಫ್.ಐ, ಜೀವ ವಿಮಾ ನೌಕರರ ಸಂಘ, ಪೋಸ್ಟಲ್ ಹಾಗೂ ವಿವಿಧ ಸಂಘಟನೆಗಳ ಕಾರ್ಯಕರ್ತರು ಸಭೆಯಲ್ಲಿ ಭಾಗವಹಿಸಿದ್ದರು.

ತೆಂಕನಿಡಿಯೂರು : ಉಡುಪಿ ತಾಲ್ಲೂಕಿನ ತೆಂಕನಿಡಿಯೂರು ಡಿ.ವೈ.ಎಫ್.ಐ. ಘಟಕವು, ಪಿ. ರಾಮಚಂದ್ರ ರಾವ್ ಬೀಡಿ ಕಾರ್ಮಿಕರಿಗಾಗಿ ಸರ್ಕಾರದ ವಿರುದ್ಧ ಹೋರಾಡಿ ಬೀಡಿ ಕಾರ್ಮಿಕರಿಗೆ ಬೆಲೆ ಏರಿಕೆಗನುಗುಣವಾಗಿ ತುಟ್ಟಿಭತ್ಯೆ ಕೊಡಿಸುವಲ್ಲಿ ಮಹತ್ವದ ಪಾತ್ರವಹಿಸಿದ್ದರು ಎಂದು ಶ್ರದ್ಧಾಂಜಲಿ ಸಭೆಯಲ್ಲಿ ಬಣ್ಣಿಸಿ ಪಿ.ಆರ್. ನಿಧನ ಕಾರ್ಮಿಕರಿಗೆ ತುಂಬಲಾರದ ನಷ್ಟ ಎಂದಿದೆ.

ಕೆ.ಜಿ.ಎಫ್. : ಸೆ. 19 ರಂದು ಸಿ.ಪಿ.ಐ.(ಎಂ) ಬಂಗಾರಪೇಟೆ ತಾಲ್ಲೂಕು ಸಮಿತಿಯ ಆಶ್ರಯದಲ್ಲಿ ಕೆ.ಜಿ.ಎಫ್.ನ ರಾಬರ್ಟ್‌ಸನ್ ಪೇಟೆಯಲ್ಲಿ ಅಗಲಿದ ರಾಮಚಂದ್ರರಾವ್ ರವರಿಗೆ ಶ್ರದ್ಧಾಂಜಲಿ ಸಭೆಯನ್ನು ಏರ್ಪಡಿಸಲಾಗಿತ್ತು. ತಾಲ್ಲೂಕಿನ ಪಕ್ಷದ ಸದಸ್ಯರು, ಹಿತೈಷಿಗಳು ಈ ಸಭೆಯಲ್ಲಿ ಭಾಗವಹಿಸಿದ್ದರು.

ಬಂಗಾರಪೇಟೆ ತಾಲ್ಲೂಕು ಸಮಿತಿ ಸದಸ್ಯ ಏಕಾಂಬರಂರವರು ಸ್ವಾಗತಿಸಿದರು. ಟಿ.ಎಸ್. ಮಣಿಯವರು ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಸಮಿತಿ ಸದಸ್ಯ ಪಿ. ಶ್ರೀನಿವಾಸ್‌ರವರು ಮಾತಾಡಿ ಕಾಂ|| ಪಿ.ಆರ್.ರವರು ನಡೆಸಿದ ಹೋರಾಟಗಳು ಮುಖ್ಯವಾಗಿ ದ.ಕ. ರೈತರ ಭೂಸುಧಾರಣಾ ಹೋರಾಟ ಹಾಗೂ ಅವರ ನಿರಂತರ ಅಧ್ಯಯನ ಗುಣವನ್ನು ಸ್ಮರಿಸಿದರು. ಪಕ್ಷವನ್ನು ಹಲವಾರು ಅಡ್ಡಿ ಆತಂಕಗಳ ನಡುವೆಯೂ ಬೆಳೆಸಿಕೊಂಡು ಹೋದು ದನ್ನು ನೆನಪಿಸಿದರು.

ಹಿರಿಯ ಮುಖಂಡ ಎಸ್. ಸುವರಿದಾಸ್ ರವರು ಮಾತನಾಡಿ ಕಾಂ|| ಪಿ.ಆರ್.ರವರು 70ರ ದಶಕದಲ್ಲಿ ಮುಖ್ಯವಾಗಿ ದ.ಕ. ಜಿಲ್ಲೆಯಲ್ಲಿ ಕಠಿಣವಾದ ಪರಿಸ್ಥಿತಿಯಲ್ಲೂ ಗೊಂದಲಕ್ಕೆ ಎಡೆ ಇಲ್ಲದಂತೆ ಪಕ್ಷಕ್ಕೆ ಮುಂದಾಳತ್ವ ನೀಡಿದುದನ್ನು ಸ್ಮರಿಸಿದರು.

ಸಮುದಾಯದ ಅಚ್ಯುತರವರು ಮಾಸ್ಟರೊಂದಿಗೆ ಒಡನಾಟದಲ್ಲಿ ಚಿರಸ್ಮರಣೀಯವಾದ ಕೆಲವು ಘಟನೆಗಳನ್ನು ಸ್ಮರಿಸಿದರು.

ಜಿಲ್ಲಾ ಸಮಿತಿ ಸದಸ್ಯ ಜಿ. ಅರ್ಜುನನ್‌ರವರು ಮಾತನಾಡಿ ನಮ್ಮ ರಾಜ್ಯದ ಹಿರಿಯ ಮುಖಂಡರಲ್ಲೊಬ್ಬರೂ, ನಮ್ಮ ಕಮ್ಯುನಿಸ್ಟ್ ಕುಟುಂಬದ ಹಿರಿಯರಂತಿದ್ದ ಪಿ.ಆರ್. ಅಗಲಿರುವುದು ನಮಗೆಲ್ಲಾ ದೊಡ್ಡ ನಷ್ಟವೆಂದರು. ಪಕ್ಷವನ್ನು ಕಟ್ಟುವ ಹೊಣೆ ನಮ್ಮ ಮೇಲಿದೆಯೆಂದರು.

ರಾಜ್ಯ ಸಮಿತಿ ಸದಸ್ಯ ಟಿ.ಎಸ್. ಮಣಿಯವರು ಮಾತಾಡಿ ಸರಳ, ವಿನಯಶೀಲರಾದ ಪಿ.ಆರ್. ಯುವ ಸಂಗಾತಿಗಳ ಬೆನ್ನು ತಟ್ಟುತ್ತಿದ್ದರು. ಪಿ.ಆರ್. ಸಾವು ನಮ್ಮ ರಾಜ್ಯದ ಪಕ್ಷಕ್ಕೆ ತುಂಬಲಾರದ ನಷ್ಟವೆಂದರು.

ಶ್ರದ್ಧಾಂಜಲಿ ಅರ್ಪಿಸಿ ಮಾತಾಡಿದ ಎಲ್ಲಾ ಸಂಗಾತಿಗಳೂ ಕಾಂ|| ಪಿ.ಆರ್. ಬಿಟ್ಟು ಹೋಗಿರುವ ಕೆಲಸವನ್ನು ನಾವು ನಿರಂತರವಾಗಿ ಮಾಡಿಕೊಂಡು ಹೋಗುವುದೇ ಅವರಿಗೆ ನಾವು ನಿಜವಾಗಿ ಅರ್ಪಿಸುವ ಶ್ರದ್ಧಾಂಜಲಿ ಎಂದರು.

ತಾಲ್ಲೂಕು ಸಮಿತಿ ಸದಸ್ಯ ಆದಿಶೇಷನ್ ವಂದನಾರ್ಪಣೆ ಮಾಡಿದರು.

ಧಾರವಾಡ: ಸಿಪಿಐ(ಎಂ) ಜಿಲ್ಲಾ ಸಮಿತಿಯು ಸೆ.18 ರಂದು ಸಭೆ ಸೇರಿ ಅಗಲಿದ ಚೇತನ ಪಿ.ಆರ್.ಗೆ ಶ್ರದ್ಧಾಂಜಲಿ ಸಲ್ಲಿಸಿತು.

ಪಿ.ಆರ್.ರಾವ್ ರವರ ಸಾವು ಪಕ್ಷಕ್ಕೆ ಹಾಗೂ ಸಾಮೂಹಿಕ ಸಂಘಟನೆಗಳಿಗೆ ತೀವ್ರ ಆಘಾತ ಉಂಟುಮಾಡಿದೆ ಎಂದು ತನ್ನ ಶ್ರದ್ಧಾಂಜಲಿಯಲ್ಲಿ ತಿಳಿಸಿದೆ.

ಸಭೆಯಲ್ಲಿ ಎಂ.ಬಿ.ಕಟ್ಟಿ, ಡಿ.ಜಿ. ಗೋಂದಕರ, ಕೃಷ್ಣಪ್ರಭು, ವಿ.ಎಂ. ಜೋಷಿ, ಪಿ.ಎನ್.ಕಾಮತ್, ಕೆ.ಪಿ.ಜೋಶಿ, ಎನ್.ಜಿ. ಪತ್ತಾರು ಮುಂತಾದವರು ಪಾಲ್ಗೊಂಡಿದ್ದರು.

ಉಡುಪಿ: ತಾಲೂಕಿನ ಶಿರ್ವಾ ಸಿಪಿಐ(ಎಂ) ಶಾಖೆಯು ಸೆ.19 ರಂದು ಸಭೆ ಸೇರಿ ರಾಜ್ಯ ಹಿರಿಯ ಸ್ವಾತಂತ್ರ್ಯ ಹೋರಾಟಗಾರರನ್ನು ಕಳೆದುಕೊಂಡು ಬಡವಾಯಿತು ಎಂದು ಶ್ರದ್ಧಾಂಜಲಿ ಅರ್ಪಿಸಿತು. ಸಭೆಯು ಪಿ.ಆರ್.ರ ಆದರ್ಶ, ತ್ಯಾಗ ಮತ್ತು ಜನಸಾಮಾನ್ಯರ ಬಗ್ಗೆ ಅವರಿಗಿದ್ದ ಕಳಕಳಿಯನ್ನು ನೆನಪಿಸಿಕೊಂಡಿತು.

ರಾಮದುರ್ಗ: ಸಿಪಿಐ(ಎಂ) ಬೆಳಗಾವಿ ಪ್ರಾದೇಶಿಕ ಸಮಿತಿಯು ಪಿ.ಆರ್. ರಾವ್ ರ ನಿಧನ ಕಮ್ಯುನಿಸ್ಟ್ ಚಳುವಳಿಗೆ ಹಾಗೂ ದುಡಿಯುವ ವರ್ಗಕ್ಕೆ ತುಂಬಲಾರದ ನಷ್ಟವೆಂದು ತನ್ನ ಶೋಕ ಸಂದೇಶದಲ್ಲಿ ಉಲ್ಲೇಖಿಸಿದೆ.

ಬೀದರ್: ರಾಮಚಂದ್ರರಾವ್ ರೈತ, ಕಾರ್ಮಿಕ, ಕೃಷಿ ಕೂಲಿಕಾರರ ನೇತಾರರಾಗಿದ್ದು ಅವರ ನಿಧನದಿಂದ ವರ್ಗ ಹೋರಾಟಕ್ಕೆ ದೊಡ್ಡ ನಷ್ಟವಾಗಿದೆ ಎಂದು ಬೀದರ್ ಸಿಪಿಐ(ಎಂ) ಸಮಿತಿ ತನ್ನ ಶ್ರದ್ಧಾಂಜಲಿ ಸಲ್ಲಿಸಿದೆ.

ವಿಮಾ ನೌಕರರ ಸಂಘಗಳ ಶ್ರದ್ಧಾಂಜಲಿ

ಬೆಂಗಳೂರು: ವಿಮಾ ನೌಕರರ ವಿಭಾ I ಮತ್ತು II ಘಟಕವು ಪಿ.ಆರ್. ನಿಧನಕ್ಕೆ ದಿಗ್ಭ್ರಮೆ ವ್ಯಕ್ತಪಡಿಸಿ ಪಿ.ಆರ್. ನಿಧನದಿಂದ ರಾಜ್ಯ ಒಬ್ಬ ತತ್ವಶಾಸ್ತ್ರಜ್ಞ ಹಾಗೂ ಪ್ರಜಾಸತ್ತಾತ್ಮಕ ಚಳುವಳಿಯ ಒಂದು ಪ್ರಮುಖ ಕೊಂಡಿಯನ್ನು ಕಳೆದುಕೊಂಡಂತಾಯಿತು ಎಂದಿದೆ.

ಪಿ.ರಾಮಚಂದ್ರರಾವ್ ವಿಮಾ ಖಾಸಗೀಕರಣದ ವಿರುದ್ಧದ ಹೋರಾಟದಲ್ಲಿ ಅಗ್ರಗಣ್ಯರಾಗಿದ್ದರು ಎಂದು ತೀವ್ರ ಸಂತಾಪ ವ್ಯಕ್ತಪಡಿಸಿದೆ.

ಲೋಕಶಕ್ತಿ ಶ್ರದ್ಧಾಂಜಲಿ

ಮಾಸ್ಟ ನಿಧನಕ್ಕೆ ಲೋಕಶಕ್ತಿ ಪಕ್ಷವು ತೀವ್ರ ಶೋಕ ವ್ಯಕ್ತಪಡಿಸಿದೆ.

'ಕಾಮ್ರೇಡ್ ಪಿ.ರಾಮಚಂದ್ರರಾವ್ ಕಾರ್ಮಿಕ ಮುಖಂಡರಾಗಿ ದುಡಿಯುವ ವರ್ಗದ ಮತ್ತು ಜನಸಾಮಾನ್ಯರ ಸಮಸ್ಯೆಗಳ ಕುರಿತು ಅವಿರತ ಹೋರಾಟ ನಡೆಸಿದ ಜನತೆಯ ನಿಜವಾದ ಆತ್ಮೀಯ ಮಿತ್ರರಾಗಿದ್ದರು" ಎಂದು ಪಕ್ಷವು ತನ್ನ ಸಂತಾಪ ಸಂದೇಶದಲ್ಲಿ ಕೊಂಡಾಡಿದೆ. ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ರಾಮಕೃಷ್ಣ ನಾಯಕ್, ಮಂಗಳೂರು ಜಿಲ್ಲಾ ಅಧ್ಯಕ್ಷ ನಝೀರ್ ಉಳ್ಳಾಲ, ಡಾ|| ಎ.ಎಂ.ಶೆಟ್ಟಿ, ನಗರ ಯುವ ಲೋಕಶಕ್ತಿ ಅಧ್ಯಕ್ಷ ಯಶವಂತ ಬಂಗೇರ, ಮಂಗಳೂರು ತಾಲೂಕು ಅಧ್ಯಕ್ಷ ಡಾ. ಮಂಜಯ್ಯ ಇನ್ನಿತರರು ಸಂತಾಪ ವ್ಯಕ್ತಪಡಿಸಿದ್ದಾರೆ.



ಹದಿನಾರನೇ ಮಹಾಧಿವೇಶನದತ್ತ

ಸಿ.ಪಿ.ಐ.(ಎಂ)ನ ಹದಿನಾರನೇ ಮಹಾಧಿವೇಶನ ಕಲ್ಕತ್ತೆಯಲ್ಲಿ ಅಕ್ಟೋಬರ್ ೫ ರಿಂದ ೧೧ ರವರೆಗೆ ನಡೆಯುತ್ತಿದೆ. ದೇಶದ ಪ್ರಸ್ತುತ ರಾಜಕೀಯದಲ್ಲಿ, ಭಾರತದ ಒಟ್ಟು ಪ್ರಜಾಪ್ರಭುತ್ವ ಆಂದೋಲನದಲ್ಲಿ ಇದರ ಮಹತ್ವವೇನು? ೩೪ ವರ್ಷಗಳ ಹಿಂದೆ ಇದೇ ನಗರದಲ್ಲಿ ಭಾರತದ ಕಮ್ಯುನಿಸ್ಟ್ ಪಕ್ಷವನ್ನು ಮರುಸಂಘಟಿಸಿ ನಂತರ ಈ ಪಕ್ಷದ ಸದಸ್ಯ ಬಲ ಏಳುವರೆ ಪಟ್ಟು ಹೆಚ್ಚಿದೆ. ಪಕ್ಷದ ಪ್ರತಿಷ್ಠೆ, ಪ್ರಭಾವವೂ ಅಪಾರವಾಗಿ ಹೆಚ್ಚಿದೆ. ಈ ಮೂರುವರೆ ದಶಕಗಳ ಅನುಭವದಿಂದ ಪಕ್ಷ ಸಾಕಷ್ಟು ಪಾಠವನ್ನು ಕಲಿತಿದೆ. ಸಿ.ಪಿ.ಐ.(ಎಂ)ನ ರಾಜಕೀಯ ನಿಲುವು ಸಂಪೂರ್ಣವಾಗಿ ಸರಿಯೆಂದು ಸಿದ್ಧವಾಗಿದೆ. ಈಗ ಬೇಕಾಗಿರುವುದು ದೌರ್ಬಲ್ಯಗಳನ್ನು, ನ್ಯೂನತೆಗಳನ್ನು ಶೀಘ್ರವಾಗಿ ನಿವಾರಿಸಿಕೊಂಡು ಪಕ್ಷ ಮತ್ತು ಆ ಮೂಲಕ ಪ್ರಜಾಪ್ರಭುತ್ವ ಆಂದೋಲನ ತ್ವರಿತವಾಗಿ ಮುನ್ನಡೆಯುವಂತೆ ಮಾಡುವುದು. ಈ ಮುನ್ನಡೆಗೆ ಸೂಕ್ತ ಮಾರ್ಗದರ್ಶನ ಹಾಗೂ ದಿಕ್ಕು ನೀಡಲು ನಾವೆಲ್ಲಾ ಹದಿನಾರನೇ ಮಹಾಧಿವೇಶನದತ್ತ ನೋಡುತ್ತಿದ್ದೇವೆ ಎನ್ನುತ್ತಾರೆ ಸಿ.ಪಿ.ಐ.(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಷನ್ ಸಿಂಗ್ ಸುರ್ಜಿತ್.

ಪ್ರಜಾಪ್ರಭುತ್ವ ಆಂದೋಲನದ ತ್ವರಿತ ಮುನ್ನಡೆಗಾಗಿ

ಚಾರಿತ್ರಿಕ ಹಿನ್ನೆಲೆ : ವಿಶ್ವದಲ್ಲಿ ವರ್ಗ ಬಲಾಬಲ

ಸಿ.ಪಿ.ಐ.(ಎಂ)ನ ಹದಿನಾರನೇ ಮಹಾಧಿವೇಶನ ವಿಶ್ವದ ಕಾರ್ಮಿಕ ವರ್ಗ ತನ್ನ ವಿಕಾಸದ ಅತ್ಯಂತ ನಿರ್ಣಾಯಕ ಘಟ್ಟಗಳಲ್ಲಿ ಒಂದರ ಮೂಲಕ ಹಾದು ಹೋಗುತ್ತಿರುವ ಸಂದರ್ಭದಲ್ಲಿ, ವರ್ಗ ಬಲಾಬಲ ತಾತ್ಕಾಲಿಕವಾಗಿಯಾದರೂ ಸಾಮ್ರಾಜ್ಯಶಾಹಿಯ ಪರವಾಗಿ ವ್ಯತ್ಯಸ್ತಗೊಂಡಿರುವ ಸಂದರ್ಭದಲ್ಲಿ ನಡೆಯುತ್ತಿದೆ.

150 ವರ್ಷಗಳ ಹಿಂದೆ 1848ರಲ್ಲಿ ಮಾರ್ಕ್ಸ್ ಮತ್ತು ಎಂಗೆಲ್ಸ್ ಕಮ್ಯುನಿಸ್ಟ್ ಪ್ರಣಾಳಿಕೆಯನ್ನು ರಚಿಸಿದಾಗ ಪರಿಸ್ಥಿತಿ ಹೀಗಿರಲಿಲ್ಲ. ಕಾರ್ಮಿಕ ವರ್ಗ ಒಂದು ರಾಜಕೀಯ ಶಕ್ತಿಯಾಗಿ ಮೂಡಿ ಬಂದ ಸಮಯವದು. **ವೈಜ್ಞಾನಿಕ ಸಮಾಜವಾದದ** ಪ್ರತಿಪಾದನೆ, **ಮೊದಲ ಅಂತರ್‍ರಾಷ್ಟ್ರೀಯ (1864-1872)**ದ ರಚನೆ, **ಪ್ಯಾರಿಸ್ ಕಮ್ಯೂನ್**, ನಂತರ 1889ರಲ್ಲಿ **ಎರಡನೇ ಅಂತರ್‍ರಾಷ್ಟ್ರೀಯ**ದ ರಚನೆ, ಈ ನಡುವೆ ತಾತ್ಕಾಲಿಕ ಹಿನ್ನಡೆಗಳ ನಡುವೆಯೂ ಶ್ರಮಜೀವಿ ವರ್ಗದ ರಾಜಕೀಯ ಮುನ್ನಡೆ ಸಾಧಿಸುತ್ತಲೇ ಇತ್ತು.

20ನೇ ಶತಮಾನದಲ್ಲೂ, ಬಂಡವಾಳ ಶಾಹಿ ಸಾಮ್ರಾಜ್ಯಶಾಹಿ ಹಂತ ತಲುಪಿದಾಗಲೂ ಈ ಮುನ್ನಡೆ ಮುಂದುವರೆಯಿತು. 1905ರ ರಶ್ಯನ್ ಕ್ರಾಂತಿಯ ಸೋಲು, ರಶ್ಯನ್ ಸೋಶಿಯಲ್ ಡೆಮಾಕ್ರಾಟಿಕ್ ಪಕ್ಷ ಬೋಲ್ಶವಿಕ್ ಮತ್ತು ಮೆನ್ಶವಿಕ್ ಎಂದು ಹೋಳಾದ್ದು, ಮೊದಲ ಮಹಾಯುದ್ಧದಲ್ಲಿ ಯುರೋಪಿನ ಸಮಾಜವಾದಿ ಪಕ್ಷಗಳು ತಂತಮ್ಮ ಬಂಡವಾಳಶಾಹಿ ಆಳರಸರ ಪಕ್ಷ ವಹಿಸಿದ್ದು, ಇತ್ಯಾದಿಗಳ ನಡುವೆಯೂ ಸಾಮ್ರಾಜ್ಯಶಾಹಿಯು ಬಂಡವಾಳ ಶಾಹಿಯ ಅತ್ಯುನ್ನತ ಘಟ್ಟ, ಒಂದು ಸಾಮಾಜಿಕ ಕ್ರಾಂತಿಯ ಹಿಂದಿನ ಘಟ್ಟ ಎಂಬ ಲೆನಿನ್ ವಿಶ್ಲೇಷಣೆಯ ಸೈದ್ಧಾಂತಿಕ ಆಧಾರದಲ್ಲಿ, ಕಾರ್ಮಿಕ ವರ್ಗ ರಾಜಕೀಯ ಮುನ್ನಡೆ ಸಾಧಿಸಿತು - 1917ರ ಮಹಾನ್ ಸಮಾಜ ವಾದಿ ಕ್ರಾಂತಿ ವಿಶ್ವ ಇತಿಹಾಸದಲ್ಲಿ ಹೊಸ ಯುಗವನ್ನೇ ಆರಂಭಿಸಿತು.

ಹಲವು ಸಂಕಷ್ಟಗಳ ನಡುವೆಯೂ ಲೆನಿನ್ ನೇತೃತ್ವದಲ್ಲಿ ಹೊಸ ರೀತಿಯ ಪ್ರಭುತ್ವವೊಂದರ ಸ್ಥಾಪನೆ, ಝಾರ್‌ನ ಗುಲಾಮಿಕೆಯಲ್ಲಿದ್ದ ಹಲವು ಜನ ಸಮೂಹಗಳು ಸೇರಿಕೊಂಡು ರಚಿಸಿಕೊಂಡ ಸೋವಿಯತ್ ಒಕ್ಕೂಟ, ನಂತರ ಎರಡು ದಶಕಗಳ ಕಾಲ, ವಿಶೇಷವಾಗಿ ಬಂಡವಾಳ ಶಾಹಿಯ 1929-33ರ ಮಹಾ ಬಿಕ್ಕಟ್ಟಿನ ಅವಧಿಯಲ್ಲಿ ಸಮಾಜವಾದದ ಹಿರಿಮೆಯನ್ನು ಸಾಬೀತುಪಡಿಸಿದವು. ಇದು ಭಾರತವೂ ಸೇರಿದಂತೆ ವಿಶ್ವಾದ್ಯಂತ ಪ್ರಗತಿಪರ ಜನಗಳ, ಪಕ್ಷಗಳ ಗಮನ ಸೆಳೆಯಿತು, ವಿಶ್ವಾದ್ಯಂತ ರಾಷ್ಟ್ರೀಯ ವಿಮೋಚನಾ ಆಂದೋಲನಗಳಿಗೆ ಒತ್ತಾಸೆ ನೀಡಿತು. 1918ರಲ್ಲಿ ಲೆನಿನ್ ನೇತೃತ್ವದಲ್ಲಿ ರಚನೆಗೊಂಡ **ತೃತೀಯ ಅಂತರ್‍ರಾಷ್ಟ್ರೀಯ** ಹೇಗೆ ವಸಾಹತುಗಳಲ್ಲಿ ರಾಷ್ಟ್ರೀಯ ವಿಮೋಚನಾ ಆಂದೋಲನಗಳು, ಬಂಡವಾಳಶಾಹಿ ದೇಶಗಳಲ್ಲಿನ ಕಾರ್ಮಿಕ ಆಂದೋಲನಗಳು ಮತ್ತು ಸೋವಿಯತ್ ಒಕ್ಕೂಟದಲ್ಲಿನ ಸಮಾಜವಾದಿ ವ್ಯವಸ್ಥೆ ವಿಶ್ವ ಕ್ರಾಂತಿಕಾರಿ ಆಂದೋಲನದ ಮೂರು ಅಂಗಗಳು ಎಂಬುದನ್ನು ವಿಶ್ಲೇಷಿಸಿತು.

ನಂತರ ಬಂತು ಫ್ಯಾಸಿಸಂ - ಬಿಕ್ಕಟ್ಟಿನಿಂದ ತತ್ತರಿಸುತ್ತಿದ್ದ ಬಂಡವಾಳಶಾಹಿ ಕೆಲವು ದೇಶಗಳಲ್ಲಿ ಅಂಗೀಕರಿಸಿದ ಈ ಬರ್ಬರ ಸರ್ವಾಧಿಕಾರದ ವಿರುದ್ಧ ಹೋರಾಟವೂ ಆರಂಭವಾಯಿತು. ಎರಡನೇ ಮಹಾಯುದ್ಧದಲ್ಲಿ ಇದು ತಾರಕಕ್ಕೇರಿತು. ಅಪಾರ ಕಷ್ಟ-ನಷ್ಟಗಳ ನಡುವೆಯೂ ಈ ಯುದ್ಧ ಸಕಾರಾತ್ಮಕ ದಿಸೆಯಲ್ಲಿ ಕೊನೆಗೊಂಡಿತು. ಹಿಟ್ಲರನ ನಾಝೀ ಪಡೆಗಳು ಮೇ 1945ರಲ್ಲಿ ಕೆಂಪು ಸೇನೆಗೆ ಶರಣಾದವು. 2 ಕೋಟಿ ಜನಗಳ ಬಲಿದಾನ ನೀಡಿ ಸೋವಿಯತ್ ಒಕ್ಕೂಟ ಫ್ಯಾಸಿಸಂನ ಪಿಡುಗಿನಿಂದ ವಿಶ್ವವನ್ನು ರಕ್ಷಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿತು.

ಈ ಘಟನೆ ವಿಶ್ವದ ನಕಾಶೆಯನ್ನೇ ಬದಲಿಸಿತು. ಮಧ್ಯ ಮತ್ತು ಪೂರ್ವ ಯುರೋಪಿನ ಹಲವು ದೇಶಗಳಲ್ಲಿ ಕ್ರಾಂತಿಗಳು ನಡೆದವು. ಕೊರಿಯಾದಲ್ಲಿ (1945), ಚೀಣಾದಲ್ಲಿ(1949) ಕ್ಯೂಬಾದಲ್ಲಿ (1959) ಹಾಗೂ ನಂತರ ವಿಯಾಟ್ನಾಂನಲ್ಲಿ ಕ್ರಾಂತಿಗಳು ನಡೆದವು. ವಿಯಾಟ್ನಾಮೀಯರು ಮೂರು ದಶಕಗಳ ಕಾಲ ಮೊದಲು ಫ್ರೆಂಚ್, ನಂತರ ಅಮೇರಿಕನ್ ಸಾಮ್ರಾಜ್ಯ ಶಾಹಿಯ ವಿರುದ್ಧ ನಡೆಸಿದ ಹೋರಾಟ ಒಂದು ಮಹಾಗಾಥೆಯೇ ಸರಿ. ಈ ಅವಧಿಯಲ್ಲಿ ಕಮ್ಯುನಿಸ್ಟ್ ಪಕ್ಷಗಳ ಬಲ ಹಲವು ದೇಶಗಳಲ್ಲಿ ಬೆಳೆಯಿತು. ಫ್ಯಾಸಿಸ್ಟ್ - ವಿರೋಧಿ ಹೋರಾಟದ ಯಶಸ್ಸು ವಸಾಹತುಶಾಹಿ ವಿರೋಧಿ ಆಂದೋಲನಕ್ಕೂ ದೊಡ್ಡ ಸ್ಫೂರ್ತಿ ನೀಡಿತು. ಸಮಾಜವಾದಿ ದೇಶಗಳ ನೇರ ಬೆಂಬಲದಿಂದ ಭಾರತವೂ ಸೇರಿದಂತೆ ಹಲವಾರು ದೇಶಗಳು ನೇರ ಸಾಮ್ರಾಜ್ಯಶಾಹಿ ನೊಗವನ್ನು ಕಿತ್ತೊಗೆದು ಸ್ವತಂತ್ರ್ಯವಾದವು.

150 ವರ್ಷಗಳ ಹಿಂದೆ ಮೂಡಿ, ಬೆಳೆಯುತ್ತಾ ಬಂದ ಕಾರ್ಮಿಕ ವರ್ಗದ ರಾಜಕೀಯ ಕಳೆದ ಒಂದು ದಶಕದಲ್ಲಿ ದುಃಖಕರ ಹಿನ್ನಡೆ ಕಂಡಿದೆ. ಆದರೆ ಕಳೆದ ಆರು ವರ್ಷಗಳ ಬೆಳವಣಿಗೆಗಳು ಸಾಮ್ರಾಜ್ಯಶಾಹಿಯ ಈ ಉಚ್ಛ್ರಾಯ ಸ್ಥಿತಿ ಬಹಳ ಕಾಲವೇನೂ ಮುಂದುವರಿಯಲಾರದು ಎಂಬುದನ್ನು ತೋರಿಸುತ್ತಿವೆ.

ಆದರೆ ಕಳೆದ ಒಂದು ದಶಕದಲ್ಲಿ ಕ್ರಾಂತಿಕಾರಿ ಬದಲಾವಣೆಗಳ ಈ ಪ್ರಕ್ರಿಯೆ ತೀವ್ರ ದುಃಖಕರ ಹಿನ್ನಡೆ ಅನುಭವಿಸಿದೆ. ಹಲವು ಪೂರ್ವ ಯುರೋಪಿನ ದೇಶಗಳಲ್ಲಿ ಸಮಾಜವಾದಿ ವ್ಯವಸ್ಥೆಯನ್ನು ಕಳಚಿ ಹಾಕಲಾಯಿತು. ಅಂತಿಮವಾಗಿ ಸೋವಿಯೆತ್ ಒಕ್ಕೂಟವೂ 1992ರ ಆರಂಭದಲ್ಲಿ ವಿಧ್ಯುಕ್ತವಾಗಿ ಮುರಿದು ಹೋಯಿತು. ಈ ಪ್ರಕ್ರಿಯೆಯನ್ನು ನಮ್ಮ ಹದಿನಾಲ್ಕನೇ ಮಹಾಧಿವೇಶನ ಅಂಗೀಕರಿಸಿದ ಸೈದ್ಧಾಂತಿಕ ನಿರ್ಣಯ ವಿಶ್ಲೇಷಿಸಿದೆ. ಇಲ್ಲಿ ಈ ಬಗ್ಗೆ ಇಷ್ಟೇ ಹೇಳಬಹುದು - ಇದು ತಾತ್ಕಾಲಿಕವಾಗಿ ವರ್ಗ ಬಲಾಬಲವನ್ನು ಸಾಮ್ರಾಜ್ಯ ಶಾಹಿಗಳ ಪರವಾಗಿ ಬದಲಿಸಿತು. ಈ ಘಟ್ಟ ಇನ್ನೂ ಮುಂದುವರೆದಿದೆ. ಆದರೆ ಕಳೆದ ಸುಮಾರು 6 ವರ್ಷಗಳ ಬೆಳವಣಿಗೆಗಳನ್ನು ಹಿಂದಿರುಗಿ ನೋಡಿದರೆ ಸಾಮ್ರಾಜ್ಯ ಶಾಹಿಯ ಈ ಉಚ್ಛ್ರಾಯ ಸ್ಥಿತಿ ಬಹಳ ಕಾಲವೇನೂ ಮುಂದುವರಿಯಲಾರದು ಎಂದು ಹೇಳಲು ಸಾಕಷ್ಟು ಆಧಾರಗಳು ಸಿಗುತ್ತವೆ. ಹಿಂದೆ ಹಲವು ಸಂದರ್ಭಗಳಲ್ಲಿ ಕಂಡು ಬಂದಂತೆ ಈ ಬಾರಿಯೂ ಕ್ರಾಂತಿಕಾರಿ ಶಕ್ತಿಗಳು ಬೇಗನೆ ಅಥವಾ ಸ್ವಲ್ಪ ವಿಳಂಬದಿಂದಲಾದರೂ ಮತ್ತೆ ತಲೆ ಎತ್ತಿ ಮುನ್ನಡೆಯುತ್ತವೆ ಎಂದು ಹೇಳಬಹುದು.

ಹೋರಾಟದ ಮೂಸೆಯಲ್ಲಿ ಹುಟ್ಟಿ ಬೆಳೆದ ಪಕ್ಷ

ನಮ್ಮ ದೇಶದಲ್ಲೂ ನಮ್ಮ ಪಕ್ಷವನ್ನು ಈ ಎಲ್ಲಾ ಬೆಳವಣಿಗೆಗಳು ತಟ್ಟದಿರಲಿಲ್ಲ. ಮಹಾನ್ ಅಕ್ಟೋಬರ್ ಕ್ರಾಂತಿಯ ನೇರ ಸ್ಫೂರ್ತಿಯಿಂದ ಅಕ್ಟೋಬರ್ 1920ರಲ್ಲಿ ತಾಷ್ಕೆಂಟಿನಲ್ಲಿ ಒಂದು ಸಣ್ಣ ಗುಂಪಾಗಿ ಆರಂಭವಾದ ನಮ್ಮ ಪಕ್ಷ ಹೋರಾಟಗಳ ಮೂಲಕ ಹುಟ್ಟಿ ಹಲವು ಏಳು-ಬೀಳುಗಳನ್ನು ಕಂಡು ಬೆಳೆದಿರುವ ಪಕ್ಷ. ಮೊದಲ ದಶಕದಲ್ಲೇ ಅದು ಬ್ರಿಟಿಶ್ ಸಾಮ್ರಾಜ್ಯ ಶಾಹಿಯ ಭೀಕರ ದಮನ ಎದುರಿಸಬೇಕಾಯಿತು. ಹಲವಾರು ಕಮ್ಯುನಿಸ್ಟರನ್ನು ಬಂಧಿಸಿ ಪೇಶಾವರ್, ಕಾನ್ಪುರ ಮತ್ತು ಮೀರತ್ ಬೋಲ್ಶವಿಕ್ ಪಿತೂರಿ ಮೊಕದ್ದಮೆಗಳನ್ನು ಹೇರಲಾಯಿತು.

ಈ ಎಲ್ಲಾ ಸಂಕಷ್ಟಗಳ ನಡುವೆಯೂ ಸಂಖ್ಯಾಬಲದಲ್ಲಿ ಬಹಳ ಸಣ್ಣದಿದ್ದರೂ ಪಕ್ಷದ ಸಂದೇಶ ದೇಶದ ಮೂಲೆ-ಮೂಲೆಗೂ ಹರಡಿತು. ಅದು ರಾಷ್ಟ್ರೀಯ ರಂಗದಲ್ಲೂ ಒಂದು ಮಹತ್ವದ ಪಾತ್ರ ವಹಿಸಿತು. ಇವುಗಳಲ್ಲಿ ಮುಖ್ಯವಾದದ್ದು ಸಂಪೂರ್ಣ ಸ್ವಾತಂತ್ರ್ಯದ ಘೋಷಣೆ, ಕಾಂಗ್ರೆಸ್‌ನ ಗಯಾ, ಅಹ್ಮದಾಬಾದ್ ಮತ್ತು ಮದ್ರಾಸ್ ಅಧಿವೇಶನಗಳಲ್ಲಿ ಪಕ್ಷ ಹಾಕಿದ ಸತತ ಒತ್ತಡಗಳ ಪರಿಣಾಮವಾಗಿ ಕೊನೆಗೂ 1930ರಲ್ಲಿ ಕಾಂಗ್ರೆಸ್ ಪಕ್ಷ ಈ ಘೋಷಣೆಯನ್ನು ಅಂಗೀಕರಿಸಿತು. 1933ರಲ್ಲಿ ಮೀರತ್ ಬಂಧಿಗಳ ಬಿಡುಗಡೆಯ ನಂತರ ಒಂದು ಏಕೀಕೃತ ಕಮ್ಯುನಿಸ್ಟ್ ಮುಖಂಡತ್ವ ರೂಪಗೊಂಡ ಮೇಲೆ ರಾಷ್ಟ್ರೀಯ ವಿಮೋಚನಾ ಆಂದೋಲನದಲ್ಲಿ ಪಕ್ಷ ತನ್ನ ಪಾತ್ರ ವಹಿಸಲು ಸಾಧ್ಯವಾಯಿತು.

ಪಕ್ಷ ಆಗಾಗ ತಪ್ಪುಗಳನ್ನೂ ಮಾಡಿತು. ಇವುಗಳಲ್ಲಿ ಕೆಲವು ಗಂಭೀರ ತಪ್ಪುಗಳು ಕೂಡಾ. ಕೆಲವೊಮ್ಮೆ ಪ್ರವಾಹದ ವಿರುದ್ಧವೂ ಈಜಬೇಕಾಗಿ ಬಂತು. ಆದರೆ ಎರಡನೇ ಮಹಾಯುದ್ಧ ನಂತರದ ಉತ್ಕ್ರಾಂತಿಯಲ್ಲಿ ಅದು ಮಹತ್ವದ ಪಾತ್ರ ವಹಿಸಿತು. ಬಂಗಾಳದ ತೆಭಾಗಾ, ಸುರ್ಮಾ ಕಣಿವೆ ಹೋರಾಟ, ಬಿಹಾರದ ಬಖಶ್ತ್ ಆಂದೋಲನ, ಸಂಯುಕ್ತ ಪ್ರಾಂತ್ಯ, ಮಧ್ಯ ಪ್ರಾಂತ್ಯ, ರಾಜಸ್ತಾನ, ಪಂಜಾಬ್‌ಗಳಲ್ಲಿನ ರೈತ ಹೋರಾಟಗಳು, ಕೇರಳದ ಪುನ್ನಪ್ರಾ-ವಾಯಲಾರ್, ಕಯ್ಯೂರು ಹೋರಾಟಗಳು ಇವೆಲ್ಲಕ್ಕೆ ಕಿರೀಟವಿಟ್ಟಂತೆ ನಿಜಾಮಗಿರಿಯ ಬುಡವನ್ನೇ ಅಲುಗಾಡಿಸಿದ ತೆಲಂಗಾಣ ಸಶಸ್ತ್ರ ರೈತ ಸಮರ-ಇವೆಲ್ಲಾ ಕರ್ಷಕ ಕ್ರಾಂತಿಯ ಪ್ರಶ್ನೆಯನ್ನು ಮುಂಚೂಣಿಗೆ ತಂದವು. 1946ರ ರಿನ್ ನಾವಿಕರ ಬಂಡಾಯದಲ್ಲಿ ಹಾಗೂ ಅದರ ಮೊದಲಿನ ಆಝಾದ್ ಹಿಂದ್ ಸೇನೆಯ ಬಂಧಿಗಳ ಬಿಡುಗಡೆಯ ಆಂದೋಲನದಲ್ಲಿ ಪಕ್ಷ ಶ್ಲಾಘನಾರ್ಹ ಪಾತ್ರ ವಹಿಸಿತು.

ಈ ರೀತಿ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಪಾತ್ರವಹಿಸಿದರೂ ಹಲವು ತ್ಯಾಗ-ಬಲಿದಾನಗಳನ್ನು ನೀಡಿದರೂ ಕೊರಿಯಾ, ವಿಯಾಟ್ನಾಂಗಳಲ್ಲಾದಂತೆ ರಾಷ್ಟ್ರೀಯ ಆಂದೋಲನದ ಮುಖಂಡತ್ವವನ್ನು ವಹಿಸಲು ನಮ್ಮ ಪಕ್ಷಕ್ಕೆ ಸಾಧ್ಯವಾಗಲಿಲ್ಲ. ಈ ಮುಖಂಡತ್ವ ರಾಜಕೀಯವಾಗಿ ಬಂಡವಾಳಶಾಹಿ, ಭೂಮಾಲಕ ವರ್ಗಗಳನ್ನು ಪ್ರತಿನಿಧಿಸಿದವರ ಕೈಗಳಲ್ಲೇ ಉಳಿಯಿತು. ಈಗ ಪ್ರಭುತ್ವ ಅಧಿಕಾರವೂ ಅವರ ಕೈಯಲ್ಲೇ ಇದೆ. ನಮ್ಮ ಪಕ್ಷದ ಪ್ರಭಾವ ಈಗಲೂ ಸುಮಾರಾಗಿ ಕೇರಳ, ಬಂಗಾಳ, ತ್ರಿಪುರಾ ಹಾಗೂ ಈ ರಾಜ್ಯಗಳ ಹೊರಗಿರುವ ಕೆಲವು ಕೇಂದ್ರಗಳಿಗಷ್ಟೇ ಸೀಮಿತವಾಗಿದೆ. ಇತರ ಪ್ರದೇಶಗಳಲ್ಲಿ ಪಕ್ಷದ ವಿಸ್ತರಣೆ ನಿರೀಕ್ಷಿತ ಪ್ರಮಾಣದಲ್ಲಿಲ್ಲ.

ಸ್ವಾತಂತ್ರ್ಯ ದೊರೆತ ಕೂಡಲೇ ಪಕ್ಷ ಇನ್ನೊಂದು ಸವಾಲನ್ನು ಎದುರಿಸಬೇಕಾಯಿತು - ಈ ಬಾರಿಯದು ಆಂತರಿಕ ಸವಾಲು. 1948-51ರ ಅತಿ -ಎಡ ಪಂಥೀಯ ಮಾರ್ಗಚ್ಯುತಿಯನ್ನು ಮೀರಿ ನಿಲ್ಲುವಷ್ಟರಲ್ಲೇ ಪಕ್ಷ ಹೆಚ್ಚುತ್ತಿದ್ದ ಪರಿಷ್ಕರಣವಾದದ ಪ್ರವೃತ್ತಿಯನ್ನು ಎದುರಿಸಬೇಕಾಯಿತು. ದೇಶದ ಒಳಗೆ, ಹೊರಗೆ, ಅಂತರ್‍ರಾಷ್ಟ್ರೀಯ ಆಂದೋಲನದಲ್ಲಿನ ಬೆಳವಣಿಗೆಗಳೂ ಈ ಪರಿಷ್ಕರಣವಾದೀ ಬೆದರಿಕೆಯನ್ನು ಉಲ್ಬಣಗೊಳಿಸಿದವು.

ಈ ಆಂತರಿಕ ಹೋರಾಟ ಕೊನೆಗೆ ಪಕ್ಷದ ವಿಭಜನೆಯಲ್ಲಿ ಹಾಗೂ ಮರುಸಂಘಟನೆಯಲ್ಲಿ ಪರ್ಯವಸಾನವಾಯಿತು. 1964ರಲ್ಲಿ ಕಲ್ಕತ್ತೆಯಲ್ಲಿ ನಡೆದ ಏಳನೇ ಮಹಾಧಿವೇಶನದಲ್ಲಿ ಇದು ನಡೆಯಿತು. ಆಗ ಕಮ್ಯುನಿಸ್ಟ್ ಪಕ್ಷದ 1.76 ಲಕ್ಷ ಸದಸ್ಯರಲ್ಲಿ 1.04 ಲಕ್ಷ ಸದಸ್ಯರು ಸಿ.ಪಿ.ಐ.(ಎಂ) ಸೇರಿದರು. ಏಳನೇ ಮಹಾಧಿವೇಶನ ಒಂದು ಕ್ರಾಂತಿಕಾರಿ ಪಾರ್ಟಿ ಕಾರ್ಯಕ್ರಮವನ್ನು ಮುಂದಿಟ್ಟು, ಕೆಲವು ಪರಿಷ್ಕರಣವಾದೀ ಪ್ರವೃತ್ತಿಗಳಿಂದ ಪಕ್ಷವನ್ನು ಮುಕ್ತಿಗೊಳಿಸಿ ದೇಶದ ಕ್ರಾಂತಿಕಾರಿ ಆಂದೋಲನಕ್ಕೆ ಒಂದು ಹೊಸ ದಿಕ್ಕು ನೀಡಿತು.

ಇದರ ಪರಿಣಾಮವಾಗಿ ಪಕ್ಷದ ಬಲ ಮತ್ತು ಪ್ರಭಾವ ನಿರಂತರವಾಗಿ ಹೆಚ್ಚುತ್ತಾ ಬಂದಿದೆ. ಈ ನಡುವೆ 1967ರಲ್ಲಿ ಎಡ-ದುಸ್ಸಾಹಸವಾದಿಗಳು ಪಕ್ಷದಿಂದ ಹೊರಹೋಗಿ ಒಂದು ಹಿನ್ನಡೆಯಾದರೂ ಪಕ್ಷದ ಪ್ರಭಾವ ಬೆಳೆಯುತ್ತಲೇ ಹೋಯಿತು. ನವಂಬರ್ 1962ರಲ್ಲಿ ಪಕ್ಷ ಸರಕಾರದ ದಮನವನ್ನು ಎದುರಿಸಬೇಕಾಯಿತು. ಮತ್ತೆ 1965ರಲ್ಲಿ ಇನ್ನೊಂದು ಸುತ್ತಿನ ದಮನಚಕ್ರವನ್ನು ಎದುರಿಸಬೇಕಾಯಿತು. ಆದರೆ ಪಕ್ಷ ತನ್ನ ಸರಿಯಾದ ನಿಲುವಿನಿಂದ ಸ್ವಲ್ಪವೂ ವಿಚಲಿತಗೊಳ್ಳಲಿಲ್ಲ. 1971-77ರಲ್ಲಿ ಪಕ್ಷ ಪಶ್ಚಿಮ ಬಂಗಾಳದಲ್ಲಿ, ಕೇರಳದಲ್ಲೂ ಅರೆ-ಫ್ಯಾಸಿಸ್ಟ್ ಭಯೋತ್ಪಾದನೆಯನ್ನು ಎದುರಿಸಿತು. ಪಕ್ಷದ ಸಾವಿರಾರು ಸದಸ್ಯರು, ಹಿತೈಷಿಗಳನ್ನು ಈ ಅರೆ-ಫ್ಯಾಸಿಸ್ಟ್ ಭಯೋತ್ಪಾದಕ ಆಡಳಿತಗಳು ಬಲಿತೆಗೆದು ಕೊಂಡವು. ಆದರೂ ಇಂದು ಪಕ್ಷದ ಸದಸ್ಯತ್ವ 7.5 ಲಕ್ಷವನ್ನು ಮೀರಿದೆ. ಇದರಲ್ಲಿ 85000 ಏಪ್ರಿಲ್ 1995ರಲ್ಲಿ ನಡೆದ ಹದಿನೈದನೇ ಮಹಾಧಿವೇಶನದ ನಂತರ ಸೇರಿದವರು. ಪಕ್ಷದ ನೇತೃತ್ವದಲ್ಲಿನ ಸಾಮೂಹಿಕ ಸಂಘಟನೆಗಳ ಸದಸ್ಯ ಬಲವಂತೂ ಕೋಟಿ ಗಟ್ಟಲೆ.

1975-77ರ ತುರ್ತು ಪರಿಸ್ಥಿತಿ ಹಾಗೂ ಕಾಂಗ್ರೆಸ್ ಪಕ್ಷದ ಸರ್ವಾಧಿಕಾರ ಶಾಹಿಯ ವಿವಿಧ ಸ್ವರೂಪಗಳ ವಿರುದ್ಧ ಪಕ್ಷದ ಹೋರಾಟಗಳು ಅದರ ಪ್ರತಿಷ್ಠೆಯನ್ನು ಇನ್ನಷ್ಟು ಹೆಚ್ಚಿಸಿವೆ ಹಾಗೂ ಪ್ರಭಾವವನ್ನು ಇನ್ನಷ್ಟು ವಿಸ್ತಾರಗೊಳಿಸಿವೆ. ಇಂದಿನ ಪಕ್ಷದ ಸದಸ್ಯರಲ್ಲಿ ಬಹುಪಾಲು 1977ರ ನಂತರ ಸೇರಿದವರು.

ಕಲ್ಕತ್ತಾದಲ್ಲಿ ನಡೆದ ಏಳನೇ ಮಹಾಧಿವೇಶನದಲ್ಲಿ 1964ರಲ್ಲಿ ಕಮ್ಯುನಿಸ್ಟ್ ಪಕ್ಷದ ಮರುಸಂಘಟನೆಯಾದಾಗ ಇದ್ದ ಸದಸ್ಯ ಸಂಖ್ಯೆ ಸುಮಾರು ಒಂದು ಲಕ್ಷ. ಅದೀಗ 7.5 ಲಕ್ಷವನ್ನು ಮೀರಿದೆ. ಇದರಲ್ಲಿ ಬಹಳಷ್ಟು ಮಂದಿ 1977 ರ ನಂತರ ಪಕ್ಷಕ್ಕೆ ಬಂದವರು. ಏಪ್ರಿಲ್ 1995ರಲ್ಲಿ ನಡೆದ 15ನೇ ಮಹಾಧಿವೇಶನದ ನಂತರ 85 ಸಾವಿರ ಹೊಸ ಸದಸ್ಯರು ಪಕ್ಷವನ್ನು ಸೇರಿದರು.

ನಿಜ, ಬೆಳವಣಿಗೆಯೊಂದಿಗೆ ಸಮಸ್ಯೆಗಳೂ ಬಂದಿವೆ. ಡಿಸೆಂಬರ್ 1978 ರಷ್ಟು ಹಿಂದೆಯೇ ಸಂಘಟನೆ ಕುರಿತ ಸಾಲ್ಕಿಯಾ ಪ್ಲೀನಂ ಇದರತ್ತ ಗಮನ ಸೆಳೆದಿತ್ತು. ಪಕ್ಷದ ಕಾರ್ಯಕರ್ತರನ್ನು ಪಾಳೆಯಗಾರಿ, ಅರೆ-ಪಾಳೆಯಗಾರಿ, ಬೂರ್ಜ್ವಾ ಮತ್ತಿತರ ಅನ್ಯವರ್ಗ ಸಿದ್ಧಾಂತಗಳ ವಿರುದ್ಧ ದೊಡ್ಡ ಪ್ರಮಾಣದಲ್ಲಿ ಹೋರಾಡಲು ಸೈದ್ಧಾಂತಿಕವಾಗಿ ಸಜ್ಜುಗೊಳಿಸಬೇಕು ಎಂದು ಆ ಪ್ಲೀನಂ ಒತ್ತಿ ಹೇಳಿತ್ತು. ಪ್ಲೀನಂನ ನಿರ್ಣಯ ಒಂದು ಸಾಮೂಹಿಕ ಕ್ರಾಂತಿಕಾರಿ ಪಕ್ಷ ಕಟ್ಟುವ ಘೋಷಣೆ ನೀಡಿತು. ಇದರರ್ಥ ನಾವು ನಮ್ಮ ಪಕ್ಷದ ಸಾಮೂಹಿಕ ನೆಲೆಯನ್ನು ವಿಸ್ತರಿಸಬೇಕು, ಅದೇ ವೇಳೆಗೆ ಅದರ ಕ್ರಾಂತಿಕಾರಿ ಸ್ವರೂಪವನ್ನು ಉಳಿಸಿ, ಬಲಿಷ್ಠಗೊಳಿಸುವ ಕೆಲಸವನ್ನೂ ಮಾಡಬೇಕು. ಇವೆರಡರಲ್ಲಿ ಒಂದನ್ನು ಬಿಟ್ಟು ಇನ್ನೊಂದನ್ನು ಮಾಡಲು ಸಾಧ್ಯವಿಲ್ಲ.

ಸಾಲ್ಕಿಯಾ ಪ್ಲೀನಂ ನಮಗೆ ವಿಧಿಸಿದ ಕರ್ತವ್ಯಗಳನ್ನು ನಾವಿನ್ನೂ ಪೂರ್ಣವಾಗಿ ಈಡೇರಿಸಿಲ್ಲ ಎಂದು ಬೇರೆ ಹೇಳಬೇಕಾಗಿಲ್ಲ. ಈ ದಿಕ್ಕಿನಲ್ಲಿ ಮಾಡಬೇಕಾದ್ದು ಬಹಳವಿದೆ. ಇಷ್ಟೇ ಅಲ್ಲ, ಕೋಮುವಾದಿ ಶಕ್ತಿಗಳ ಹೆಚ್ಚುತ್ತಿರುವ ಪ್ರಭಾವ ಹಾಗೂ ಪಶ್ಚಿಮದಿಂದ ಬರುತ್ತಿರುವ ಅವನತಿಶೀಲ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಈ ಕೆಲಸ ಇಂದು ಇನ್ನಷ್ಟು ಮಹತ್ವ ಪಡೆದಿದೆ.

ಬದಲಾದ ಪ್ರಸ್ತುತ ಸನ್ನಿವೇಶ

ನಮ್ಮ ಏಳನೇ ಮಹಾಧಿವೇಶನದ ನಂತರದ ಅವಧಿಯಲ್ಲಿ ಕಾಂಗ್ರೆಸ್ ಪಕ್ಷದ ಪ್ರಭಾವ ನಿರಂತರವಾಗಿ ಇಳಿಮುಖ ಗೊಳ್ಳುತ್ತಾ ಬಂದಿದೆ. ಆದರೆ ಇದು ಚರಮ ಬಿಂದು ತಲುಪಲು ಮೂವತ್ತು ವರುಷಗಳೇ ಹಿಡಿದವು. 1957ರಲ್ಲಿ ಕೇರಳದಲ್ಲಿ ಕಮ್ಯುನಿಸ್ಟ್ ಪಕ್ಷದ ವಿಜಯ, 1967ರಲ್ಲಿ ಎರಡು ರಾಜ್ಯಗಳಲ್ಲಿ ಕಾಂಗ್ರೆಸ್ ಅಧಿಕಾರ ಕಳಕೊಂಡಂದಿನಿಂದ ನಡು- ನಡುವೆ ಮತ್ತೆ ಸುಧಾರಿಸಿಕೊಂಡರೂ ಮತ್ತೆ ಅದರ ಪ್ರಭಾವ ಇಳಿಮುಖವಾಗುತ್ತಾ ಹೋಯಿತು. 1977 ಹಾಗೂ 1989ರಲ್ಲಿ ಅದು ಕೇಂದ್ರದಲ್ಲಿ ಅಧಿಕಾರ ಕಳ ಕೊಂಡಿತು. ಆದರೆ ಕಾಂಗ್ರೆಸ್ಸೇತರ ಸರಕಾರಗಳ ಪ್ರಯೋಗ ಆರ್.ಎಸ್. ಎಸ್.ನ ಹೇಗಾದರೂ ಅಧಿಕಾರ ಗ್ರಹಿಸುವ ಪ್ರಯತ್ನಗಳಿಂದಾಗಿ ವಿಫಲ ವಾಯಿತು. ಈ ಎಲ್ಲಾ ಇತಿಹಾಸ ನಮ್ಮ ಜನರಿಗೆ ಚೆನ್ನಾಗಿ ತಿಳಿದಿದೆ. ಈಗ ಸನ್ನಿವೇಶ ಎಂತಹುದೆಂದರೆ ಕಾಂಗ್ರೆಸ್ಸಿನ ಅಧಿಕಾರದ ಗುತ್ತೇದಾರಿಕೆ ಮುರಿದಿದೆ, ಸಮ್ಮಿಶ್ರ ರಾಜಕೀಯದ ಯುಗ ಆರಂಭವಾಗಿದೆ. ಇದು ಇನ್ನೂ ಸ್ವಲ್ಪ ಸಮಯದವರೆಗೆ ಮುಂದು ವರೆಯುವ ಸಂಭವ ಇದೆ.

ಆದರೆ ಈ ಕಥೆಯ ಅತ್ಯಂತ ಬೇಸರದ ಅಂಶವೆಂದರೆ ಕಾಂಗ್ರೆಸ್ಸಿನ ವಿರುದ್ಧ ಬೆಳೆಯುತ್ತಿದ್ದ ಅಸಂತೃಪ್ತಿಯನ್ನು ಪೂರ್ಣವಾಗಿ ಕ್ರೋಢೀ ಕರಿಸುವಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ವಾದಿ ಶಕ್ತಿಗಳು ಅಸಮರ್ಥವಾದವು. ಬಿ.ಜೆ.ಪಿ. ಅದರ ಪೂರ್ಣ ದುರುಪಯೋಗ ಪಡೆಯಿತು. ಅದೀಗ ಲೋಕಸಭೆಯಲ್ಲಿ ಅತೀ ದೊಡ್ಡ ಪಕ್ಷವಾಗಿದೆ. ಈ ಪಕ್ಷದ ಹಿಂದೆ ಇರುವುದು ಆರ್.ಎಸ್.ಎಸ್.ನ ಕೋಮುವಾದಿ ಫ್ಯಾಸಿಸ್ಟ್ ಮಾದರಿಯ ಸಂಘಟನೆ ; ದೇಶದಲ್ಲಿ ಒಂದು ಮತೀಯ ಪ್ರಭುತ್ವವನ್ನು ಸ್ಥಾಪಿಸುವ ಉದ್ದೇಶ ಹೊಂದಿರುವ ಸಂಘಟನೆ.

ಆರ್.ಎಸ್.ಎಸ್. ನೇತೃತ್ವದ ಕೂಟದ ಬಗ್ಗೆ ಸಿ.ಪಿ.ಐ.(ಎಂ) ಬಹಳ ಸಮಯದಿಂದ ಹೇಳುತ್ತಾ ಬಂದಿವೆ. ಡಿಸೆಂಬರ್ 1988ರಲ್ಲಿ ತಿರುವನಂತಪುರ ದಲ್ಲಿ ನಡೆದ ಹದಿಮೂರನೇ ಮಹಾಧಿ ವೇಶನ "ಕಾಂಗ್ರೆಸ್ಸನ್ನು ಸೋಲಿಸು ತ್ತಲೇ ಬಿ.ಜೆ.ಪಿ.ಯನ್ನು ದೂರೀಕರಿಸ ಬೇಕು" ಎಂದು ಕರೆ ನೀಡಿತ್ತು. ಬಿ.ಜೆ.ಪಿ., ಜನತಾ ದಳದೊಂದಿಗೆ ಮೈತ್ರಿ ಮಾಡಿ ಕೊಂಡು ಅಧಿಕಾರಕ್ಕೆ ಬರದಂತೆ ನಮ್ಮ ಪಕ್ಷ ಮತ್ತು ಇತರ ಎಡಪಕ್ಷಗಳು ನೋಡಿ ಕೊಂಡವು. ಹಿಂದಿನಿಂದ ಸರ್ಕಾರ ನಡೆಸುವ ಬಿ.ಜೆ.ಪಿ. ಪ್ರಯತ್ನ ವಿಫಲವಾಯಿತು.

ಆದರೂ ಲೋಕಸಭೆಯಲ್ಲಿ ಅದರ ಬಲ 1985ರಲ್ಲಿ 2 ಇದ್ದದ್ದು, 1989ರಲ್ಲಿ 89 ಆಗಿ, 1991ರಲ್ಲಿ 117ಕ್ಕೇರಿತು. ಮದ್ರಾಸಿನಲ್ಲಿ ನಡೆದ ಸಿ.ಪಿ.ಐ(ಎಂ) 14ನೇ ಮಹಾಧಿವೇಶನ ಈ ಪ್ರವೃತ್ತಿಯನ್ನು ಗಮನಿಸಿ ಕಾಂಗ್ರೆಸ್(ಐ) ಮತ್ತು ಬಿ.ಜೆ.ಪಿ. ಎರಡನ್ನೂ ಸೋಲಿಸುವ ಕರೆ ನೀಡಿತು. ಚಂಡೀಗಢ್‌ನಲ್ಲಿ ನಡೆದ 15ನೇ ಮಹಾಧಿವೇಶನ ಅದನ್ನು ಪುನರುಚ್ಚರಿಸಿತು.

ಮೇ 1996ರ ಲೋಕ ಸಭಾ ಚುನಾವಣೆಗಳ ನಂತರ ಸಿ.ಪಿ.ಐ.(ಎಂ) ಮತ್ತು ಇತರ ಎಡ ಪಕ್ಷಗಳು ಮತ್ತೆ ಕಾರ್ಯಾಚರಣೆಗಿಳಿದು ಹಲವು ಕಾಂಗ್ರೆಸ್ಸೇತರ, ಬಿ.ಜೆ.ಪಿಯೇತರ ಪಕ್ಷಗಳನ್ನು ಒಂದು ವೇದಿಕೆಗೆ ತಂದವು. ಹೀಗೆ ಜನ್ಮ ತಳೆಯಿತು ಸಂಯುಕ್ತ ರಂಗ.

ಬಿ.ಜೆ.ಪಿ. ಒಂದೂವರೆ ಡಝನ್ ಪಕ್ಷಗಳ ನೆರವಿನಿಂದ ಅಧಿಕಾರದ ಗದ್ದುಗೆಯೇರಿರುವುದು ಪ್ರಜಾಪ್ರಭುತ್ವದಲ್ಲಿ ಒಂದು ಪಕ್ಷದ ಸ್ಥಾನದಲ್ಲಿ ಇನ್ನೊಂದು ಪಕ್ಷ ಅಧಿಕಾರಕ್ಕೆ ಬರುವಂತಹ ಸಾಮಾನ್ಯ ವರ್ಗಾವಣೆಯಲ್ಲ. ಇಡೀ ಪ್ರಜಾಪ್ರಭುತ್ವ ಆಂದೋಲನಕ್ಕೊಂದು, ದೇಶದ ಐಕ್ಯತೆಗೆ ಗಂಭೀರ ಅಪಾಯವೊಡ್ಡಿರುವ ವರ್ಗಾವಣೆ. ಕಳೆದ 6 ತಿಂಗಳಲ್ಲಿ ಈ ಬಗ್ಗೆ ಬಹಳಷ್ಟು ಸಂಕೇತಗಳು ದೊರೆತಿವೆ. ಆದ್ದರಿಂದಲೇ ಬಿ.ಜೆ.ಪಿ. ಸರಕಾರವನ್ನು ಸೋಲಿಸುವುದು ಇಂದಿನ ಕೇಂದ್ರ ಕರ್ತವ್ಯ ಎನ್ನುತ್ತಿದೆ ಸಿ.ಪಿ.ಐ.(ಎಂ).

ಕಾಂಗ್ರೆಸ್(ಐ) ಕೂಡಾ ಹೊರಗಿನಿಂದ ಸಂಯುಕ್ತರಂಗ ಸರಕಾರಕ್ಕೆ ಬೆಂಬಲ ನೀಡಬೇಕಾಯಿತು. ಆದರೆ ಸನ್ನಿವೇಶದ ಗಂಭೀರತೆಯನ್ನು ಅರಿಯಲು ವಿಫಲವಾದ ಕಾಂಗ್ರೆಸ್‌ನ ಬ್ಲಾಕ್‌ಮೇಲ್‌ಗೆ ಕೊನೆಗೂ ತಲೆಬಾಗಲು ನಿರಾಕರಿಸಿದ ಸಂಯುಕ್ತರಂಗದ ಸರಕಾರ ಬಿತ್ತು.

ಬಿ.ಜೆ.ಪಿ. ಇದನ್ನು ಪೂರ್ಣವಾಗಿ ಬಳಸಿಕೊಂಡು 1998ರಲ್ಲಿ ತನ್ನ ಬಲವನ್ನು ಇನ್ನಷ್ಟು ಹೆಚ್ಚಿಸಿಕೊಂಡಿತು. ನಿಜ, ಸಂಯುಕ್ತರಂಗದ ಸರಕಾರದ ಆರ್ಥಿಕ ನೀತಿಗಳೂ ಜನಗಳ ಅಸಂತೃಪ್ತಿಯನ್ನು ಬಳಸಿಕೊಳ್ಳಲು ಬಿ.ಜೆ.ಪಿ.ಗೆ ನೆರವಾದವು. ಹಲವು ರಂಗಗಳಲ್ಲಿ 18 ತಿಂಗಳ ಸಂಯುಕ್ತರಂಗ ಸರಕಾರ ಗಮನಾರ್ಹ ಸಾಧನೆ ನಡೆಸಿದರೂ ಜನ ಅದನ್ನೊಂದು ಭಿನ್ನ ಸ್ವರೂಪದ ಪರ್ಯಾಯ ಎಂದು ಗುರುತಿಸಲಿಲ್ಲ. ಕಾಂಗ್ರೆಸ್(ಐ) 1991ರಲ್ಲಿ ಆರಂಭಿಸಿದ್ದ ಜನ ವಿರೋಧಿ ನೀತಿಗಳನ್ನೇ ಸಂಯುಕ್ತರಂಗ ಅನುಸರಿಸದಿದ್ದರೆ ಇಂದು ಅದು ಬಲವಾದ ನೆಲೆ ಹೊಂದಿರುತ್ತಿತ್ತು ಎಂದರೆ ಅತಿಶಯೋಕ್ತಿಯಾಗಲಾರದು. 1998ರಲ್ಲಿ ಎಡ ಪಕ್ಷಗಳು ಮಾತ್ರ ತಮ್ಮ ಬಲವನ್ನು ಸುಮಾರಾಗಿ ಉಳಿಸಿಕೊಂಡವು, ಉಳಿದ ಹಲವು ಸಂಯುಕ್ತರಂಗದ ಅಂಗ ಪಕ್ಷಗಳು ಭಾರೀ ನಷ್ಟ ಅನುಭವಿಸಿದವು.

ಈಗ ಬಿ.ಜೆ.ಪಿ. ಟಿಡಿಪಿಯಲ್ಲದೆ ಇನ್ನೂ ಒಂದೂವರೆ ಡಝನ್ ಪಕ್ಷಗಳ ನೆರವಿನಿಂದ ಅಧಿಕಾರಕ್ಕೇರಿರುವುದರ ಸನ್ನಿವೇಶದಲ್ಲಿ ಮೂಲಭೂತ ಬದಲಾವಣೆ ತಂದಿದೆ. ಏಕೆಂದರೆ ಇದು ಪ್ರಜಾಪ್ರಭುತ್ವ ದಲ್ಲಿ ಒಂದು ಪಕ್ಷ ಹೋಗಿ ಇನ್ನೊಂದು ಪಕ್ಷ ಅಧಿಕಾರಕ್ಕೆ ಬರುವ ಒಂದು ಸಾಮಾನ್ಯ ವರ್ಗಾವಣೆಯಲ್ಲ. ಹಿಂದೆ ಹೇಳಿದಂತೆ ಬಿ.ಜೆ.ಪಿ.ಯ ಹಿಂದಿರುವುದು ಆರ್.ಎಸ್. ಎಸ್. ಅದು ಆಡಳಿತ ಯಂತ್ರದಲ್ಲಿ ಹಲವು ಪ್ರಮಾಣಗಳಲ್ಲಿ ತೂರಿಕೊಳ್ಳುತ್ತಿದೆ. ಇದು ರಾಷ್ಟ್ರೀಯ ಐಕ್ಯತೆಗೆ ಹಾಗೂ ಇಡೀ ಪ್ರಜಾಪ್ರಭುತ್ವ ಆಂದೋಲನಕ್ಕೊಂದು ಗಂಭೀರ ಅಪಾಯ. ಆದ್ದರಿಂದಲೇ ಬಿ.ಜೆ.ಪಿ. ಸರಕಾರವನ್ನು ಸೋಲಿಸುವುದು ಇಂದಿನ ಕೇಂದ್ರ ಕರ್ತವ್ಯ ಎಂದು ಸಿ.ಪಿ.ಐ(ಎಂ) ಹೇಳುತ್ತಿದೆ.

ಬಿ.ಜೆ.ಪಿ. ಮತ್ತು ಅದರ 12 ಮಿತ್ರ ಪಕ್ಷಗಳು ಒಂದು 'ರಾಷ್ಟ್ರೀಯ ಆಡಳಿತ ಅಜೆಂಡಾ' ಅಂಗೀಕರಿಸಿ ಅದರಲ್ಲಿ ಅಯೋಧ್ಯಾ, 370ನೇ ಕಲಮು, ಸಮರೂಪದ ನಾಗರೀಕ ಸಂಹಿತೆಯಂತಹ ವಿವಾದಾತ್ಮಕ ಅಂಶಗಳನ್ನು ಕೈಬಿಟ್ಟಿದ್ದರೂ ವಾಸ್ತವವಾಗಿ ಈ 'ಅಜೆಂಡಾ'ಕ್ಕೆ ಬಿ.ಜೆ.ಪಿ. ಕವಡೆ ಕಿಮ್ಮತ್ತೂ ಕೊಡುತ್ತಿಲ್ಲ ಎಂಬುದು ಕಳೆದ ಆರು ತಿಂಗಳಲ್ಲಿ ಸ್ಪಷ್ಟವಾಗಿದೆ. ಸರ್ವಾಧಿಕಾರ ಶಾಹಿ ಹೇರದೆ ತನ್ನ ಹಿಂದುತ್ವ ಕಣ್ಣೋಟ ವನ್ನು ಹೇರಲು ಸಾಧ್ಯವಿಲ್ಲ ಎಂದು ಬಿ.ಜೆ.ಪಿ. ಈ ದಿಕ್ಕಿನಲ್ಲಿ ಭರದ ಪ್ರಯತ್ನ ನಡೆಸಿದೆ. ಪರಮಾಣು ಸ್ಫೋಟಗಳ ನಂತರ ಸಂಕುಚಿತ ದೇಶಭಕ್ತಿಯ ಅಬ್ಬರದಿಂದ ಹಿಡಿದು ಬಿಹಾರದ ಆರ್.ಜೆ.ಡಿ. ಸರಕಾರದ ವಜಾದ ವರೆಗಿನ ಅದರ ಹಲವು ಕ್ರಮಗಳು ಇದಕ್ಕೆ ಉದಾಹರಣೆ ಗಳು. ಸಂವಿಧಾನದ 356ನೇ ಕಲಮಿನ ಬಗ್ಗೆಯಾಗಲೀ, 'ಸ್ವದೇಶಿ'ಯ ಬಗ್ಗೆ ಯಾಗಲೀ, 'ರಾಷ್ಟ್ರಪ್ರೇಮ'ದ ಬಗ್ಗೆಯಾಗಲೀ ಅದರ ಗೋಸುಂಬೆತನ ಬಟ್ಟಬಯಲಾಗಿದೆ. ಅದೊಂದು 'ನೀತಿಬದ್ಧ ಪಕ್ಷ' ಎಂಬ ಮಾತಿನ ಬಗ್ಗೆ ಹೇಳದಿರುವುದೇ ಉತ್ತಮ.

ಎಲ್ಲಕ್ಕೂ ಮಿಗಿಲಾಗಿ ಈ ಆರು ತಿಂಗಳಲ್ಲಿ ಬಡಜನರಿಗೆ ಕನಿಷ್ಟ ಅಗತ್ಯ ಆಹಾರವನ್ನೂ ಬಿ.ಜೆ.ಪಿ. ಸರಕಾರ ವಂಚಿಸಿದೆ. ವ್ಯಾಪಾರಸ್ಥರು, ಮಧ್ಯಸ್ಥಿಕೆ ದಾರರಿಗೆ ಮಾತ್ರ ಸುಗ್ಗಿಯೋ ಸುಗ್ಗಿ. ಸೌರಾಷ್ಟ್ರದ ತೈಲರಾಜರುಗಳು ಹೇಳುತ್ತಿದ್ದಾರಂತೆ - ರಾಜ್ಯ ಬಿ.ಜೆ.ಪಿ. ಸರಕಾರ ಕಡ್ಲೆಕಾಯಿ ಎಣ್ಣೆ ಬೆಲೆಗಳನ್ನು ಇಳಿಸುವಂತೆ ಹೇಳಲು ಸಾಧ್ಯವೇ ಇಲ್ಲ, ಏಕೆಂದರೆ ಇದಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಅದರ ಮುಖಂಡರಿಗೆ ತೆತ್ತಿದ್ದೇವೆ! ಬಿ.ಜೆ.ಪಿ. ಆಳ್ವಿಕೆಯ ರಾಜ್ಯಗಳಲ್ಲಿ ಕಾನೂನನ್ನಂತೂ ಆರ್.ಎಸ್.ಎಸ್.ನ ಸಂಘಟನೆಗಳು ತಮ್ಮ ಕೈಗೇ ತಗೊಂಡಿವೆ; ಅಲ್ಪ ಸಂಖ್ಯಾತರ ಮೇಲೆ ಧಾಳಿ ನಡೆಸಿವೆ.

ಮೂರನೇ ಪರ್ಯಾಯದ ಘೋಷಣೆ

ಇಂತಹ ಸನ್ನಿವೇಶದಿಂದಾಗಿಯೇ ಸಿ.ಪಿ.ಐ.(ಎಂ) ಮೂರನೇ ಪರ್ಯಾಯವನ್ನು ಕಟ್ಟುವ ಕರೆ ನೀಡಿದೆ. ಸಂಯುಕ್ತ ರಂಗ ಒಂದು ತೀವ್ರ ಹೊಡೆತ ತಂದಿದೆ ಎಂಬುದು ನಿಜ ಸಂಗತಿ, ಅದನ್ನು ಮರೆಮಾಚಬೇಕಾಗಿಲ್ಲ. ಆದರೂ ಮೂರನೇ ಪರ್ಯಾಯದ ಘೋಷಣೆ ಈಗಲೂ ಅರ್ಥಕಳಕೊಂಡಿಲ್ಲ. 16ನೇ ಮಹಾಧಿವೇಶನದ ಕರಡು ರಾಜಕೀಯ ನಿರ್ಣಯ ಹೇಳಿರುವಂತೆ(ಪರಿಚ್ಛೇದ 3.16) *"ಮೂರನೇ ಪರ್ಯಾಯವನ್ನು ಬೆಸೆಯುವ ಕೆಲಸ ಒಂದು ಸತತ ಹೋರಾಟ. ಕೆಲವೊಂದು ಜಾತ್ಯಾತೀತ ಬಂಡವಾಳಶಾಹಿ ಪಕ್ಷಗಳು ಇದರಲ್ಲಿ ಬರಬಹುದು, ಹೋಗಬಹುದು"*. ನಿಜ, ಹಲವು ತೊಂದರೆಗಳಿವೆ, ಕಲ್ಲು-ಮುಳ್ಳಿನ ಹಾದಿಯದು. ಆದರೂ 'ಈ ಘೋಷಣೆಯಿಲ್ಲದೆ ದೇಶದ ಹಾಗೂ ಜನಗಳ ತಕ್ಷಣದ ಸಮಸ್ಯೆಗಳಿಂದ ಕೋಮುವಾದ ಮತ್ತು ಉದಾರೀಕರಣ ವನ್ನು ಪ್ರತಿರೋಧಿಸಲು ಸಾಧ್ಯವಿಲ್ಲ.

ಈ ಮೂರನೇ ಪರ್ಯಾಯ ಬೆಸೆಯುವಲ್ಲಿ ಎಡಐಕ್ಯತೆಯನ್ನು ಸುದೃಢಗೊಳಿಸುವುದೂ ಅನಿವಾರ್ಯ. ಮಹಾಧಿವೇಶನದ ಕರಡು ನಿರ್ಣಯ ಈ ಬಗ್ಗೆ ಹಲವು ಕ್ರಮಗಳನ್ನು ಸೂಚಿಸಿದೆ. ವರ್ಗ ಬಲಾಬಲವನ್ನು ಬದಲಿಸಬೇಕಾದರೆ ಇವು ನಮ್ಮ ಪರಮ ಕರ್ತವ್ಯವಾಗಬೇಕು.

ಅದೇ ವೇಳೆಗೆ ನಮ್ಮ ಪಕ್ಷವನ್ನು ಬಲಗೊಳಿಸಿ, ಸುದಕ್ಷಗೊಳಿಸದೆ ಈ ಕಾರ್ಯಭಾರಗಳನ್ನು ನಿರ್ವಹಿಸುವುದು ಸಾಧ್ಯವಿಲ್ಲ. ಇದು ಸುಲಭವಾದ ಕೆಲಸವೇನಲ್ಲ. ಈ ಮೇಲೆ ಹೇಳಿದಂತೆ ನಮ್ಮ ಬಲ, ಪ್ರಭಾವ ಅಗಾಧ ಪ್ರಮಾಣದಲ್ಲಿ ಬೆಳೆದಿದ್ದರೂ ನಮ್ಮ ಕಾರ್ಯಕರ್ತರನ್ನು ಸೈದ್ಧಾಂತಿಕವಾಗಿ ಸಜ್ಜುಗೊಳಿಸುವ ಕೆಲಸ ಆಗಬೇಕಾಗಿದೆ. ಪಾರ್ಲಿಮೆಂಟರಿಸಂ ಅಂದರೆ ಶಾಸಕೀಯ ಕೆಲಸಗಳಿಗೇ ಪ್ರಾಧಾನ್ಯತೆ, ಗುಂಪುಗಾರಿಕೆ, ಸ್ವಂತದ ಉನ್ನತಿಗೇ ಪ್ರಾಧಾನ್ಯತೆ ಮುಂತಾದ ಅನ್ಯ ವರ್ಗದ ಪ್ರವೃತ್ತಿಗಳು ಪಕ್ಷದೊಳಗೆ ನುಸುಳಿಸಿ ಒಳಗಿಂದಲೇ ಪಕ್ಷವನ್ನು ಕೊರೆಯುತ್ತಿವೆ. ಕೆಲವೆಡೆ ಪ್ರಜಾಸತ್ತಾತ್ಮಕ ಕೇಂದ್ರವಾದದ ಮೂಲಭೂತ ನೀತಿಯನ್ನೇ ಪ್ರಶ್ನಿಸಲಾಗುತ್ತಿದೆ. ಇವನ್ನೆಲ್ಲಾ ಮೂಲೋತ್ಪಾಟನೆ ಮಾಡಬೇಕಾಗಿದೆ. ಇದಕ್ಕಾಗಿಯೇ ಸರಿಪಡಿಕೆ ಆಂದೋಲನವನ್ನು ಪಕ್ಷ ಆರಂಭಿಸಿದೆ. ಅದನ್ನು ಮುಂದುವರೆಸ ಬೇಕು.

ಇನ್ನೊಂದು ಅಂಶ-ಅಷ್ಟೇ ಮಹತ್ವ ಪೂರ್ಣವಾದುದು. ಏಳನೇ ಮಹಾಧಿವೇಶನದ ನಂತರದ 34 ವರ್ಷಗಳಲ್ಲಿ ನಮ್ಮ ಪಕ್ಷದ ಹಲವು ಹೋರಾಟಗಳು ನಮ್ಮ ಪ್ರತಿಷ್ಠೆಯನ್ನು

ಪುಟ 8 ಕ್ಕೆ

ಕೇಂದ್ರ ಸಮಿತಿ ಹೇಳಿಕೆ

ಸೆಪ್ಟೆಂಬರ್ 18 ರಿಂದ 20 ರ ವರೆಗೆ ನವದೆಹಲಿಯಲ್ಲಿ ಸಿಪಿಐ(ಎಂ)ನ ಕೇಂದ್ರ ಸಮಿತಿ ಸಭೆ ನಡೆಯಿತು. ಈ ಸಭೆಯ ನಂತರ ನೀಡಿದ ಹೇಳಿಕೆಯನ್ನು ಈ ಮುಂದೆ ಕೊಡಲಾಗಿದೆ.

ಬಿಹಾರ: 356ನೇ ಕಲಮಿನ ಬಳಕೆ ನಿಲ್ಲಬೇಕು.

ಬಿಹಾರದ ರಾಬ್ಡಿ ದೇವಿ ಸರಕಾರವನ್ನು ವಜಾ ಮಾಡಿ ರಾಷ್ಟ್ರಪತಿ ಆಳ್ವಿಕೆಯನ್ನು ಹೇರಲು ಸಂವಿಧಾನದ 356ನೇ ಕಲಮನ್ನು ಪ್ರಯೋಗಿಸುವ ಬಿಜೆಪಿ ನೇತೃತ್ವದ ಸರಕಾರದ ಪ್ರಯತ್ನಗಳನ್ನು ಕೇಂದ್ರ ಸಮಿತಿ ಬಲವಾಗಿ ಖಂಡಿಸಿತು. ಬಿಹಾರದ ರಾಜ್ಯಪಾಲರಾಗಿರುವ ಹಾಗೂ ಆರ್.ಎಸ್.ಎಸ್. ನ ಹಿರಿಯ ಮುಖಂಡರೂ ಆಗಿರುವ ಎಸ್.ಎಸ್.ಭಂಡಾರಿಯವರನ್ನು ಇದಕ್ಕೊಂದು ಸಾಧನವಾಗಿ ಬಳಸುತ್ತಿರುವುದು ಅತ್ಯಂತ ಪ್ರಜಾಪ್ರಭುತ್ವ-ವಿರೋಧಿ ಹಾಗೂ ಅಪಾಯಕಾರಿ ಆಟ. ಕೇಂದ್ರಕ್ಕೆ ರಾಜ್ಯಪಾಲರ ವರದಿ ಬರುವ ಎಷ್ಟೋ ಮೊದಲೇ ಪ್ರಧಾನಮಂತ್ರಿಗಳು ಬಿಹಾರ ಸರಕಾರವನ್ನು ವಜಾ ಮಾಡುವ ಕೇಂದ್ರದ ನಿರ್ಣಯವನ್ನು ಪ್ರಕಟಪಡಿಸಿದ್ದರು ಎಂದು ನೆನಪಿಸಿರುವ ಸಿಪಿಐ(ಎಂ) ಕೇಂದ್ರ ಸಮಿತಿ ಸುಪ್ರೀಂ ಕೋರ್ಟ್ ಬೊಮ್ಮಾಯಿ ತೀರ್ಪಿನಲ್ಲಿ ವಿಶದಪಡಿಸಿದ ಸಾಂವಿಧಾನಿಕ ವಿಧಿ-ವಿಧಾನಗಳನ್ನು ಬಹಿರಂಗವಾಗಿ ಉಲ್ಲಂಘಿಸಲೂ ಬಿಜೆಪಿ ಹೇಸುತ್ತಿಲ್ಲ ಎಂದು ಟೀಕಿಸಿದೆ.

ರಾಷ್ಟ್ರಪತಿಗಳು ಮಧ್ಯಪ್ರವೇಶಿಸಿ ಸಂವಿಧಾನದ ಈ ನಗ್ನ ಉಲ್ಲಂಘನೆಯನ್ನು ನಿಲ್ಲಿಸಬೇಕು ಎಂದು ಕೇಂದ್ರ ಸಮಿತಿ ಮನವಿ ಮಾಡಿತ್ತು.

ಬಿಹಾರದ ವಿಭಜನೆ ಮಾಡಹೊರಟಿರುವ ವನಾಂಚಲ ಮಸೂದೆಯನ್ನು ಬೆಂಬಲಿಸದಿರಲು ಬಿಹಾರ ರಾಜ್ಯ ಸಮಿತಿ ತಳೆದ ನಿಲುವನ್ನು ಕೇಂದ್ರ ಸಮಿತಿ ಅನುಮೋದಿಸಿತು. ಬಿಜೆಪಿ ಸರಕಾರ ಹೊಸ ರಾಜ್ಯಗಳನ್ನು ರಚಿಸುವ ಹಿಂದಿರುವ ಉದ್ದೇಶವೆಂದರೆ ರಾಜ್ಯಗಳ ಹಕ್ಕುಗಳನ್ನು ದುರ್ಬಲಗೊಳಿಸುವುದು ಹಾಗೂ ರಾಜ್ಯಗಳ ರಚನೆಯ ಭಾಷಾವಾರು ನೀತಿಯ ಉಲ್ಲಂಘನೆ ಎಂಬ ತನ್ನ ನಿಲುವನ್ನು ಕೇಂದ್ರ ಸಮಿತಿ ಪುನರುಚ್ಚರಿಸಿತು.

ನಿಲ್ಲದ ಬೆಲೆಯೇರಿಕೆ

ಹದಗೆಡುತ್ತಿರುವ ಆರ್ಥಿಕ ಪರಿಸ್ಥಿತಿಯ ಬಗ್ಗೆ ಕೇಂದ್ರ ಸಮಿತಿ ಆತಂಕ ವ್ಯಕ್ತಪಡಿಸಿತು. ಕೈಗಾರಿಕಾ ವಲಯದಲ್ಲಿ ಹಿಂಜರಿತ ಕಾಣುತ್ತಿದೆ, ರಫ್ತು ಇಳಿಮುಖವಾಗುತ್ತಿದೆ, ಹಣದುಬ್ಬರ ಏರುತ್ತಿದೆ, ಜೀವನಾವಶ್ಯಕ ಸರಕುಗಳ ಬೆಲೆಗಳು ನಿರಂತರವಾಗಿ ಏರುತ್ತಲೇ ಇವೆ. ಅತ್ತ ವಾಜಪೇಯಿ ಸರಕಾರ ದೊಡ್ಡ ವ್ಯಾಪಾರಸ್ಥರು ಮತ್ತು ಕಾಳಸಂತೆಕೋರರ ಪರವಾಗಿ ಬಹಿರಂಗ ಪಕ್ಷಪಾತವನ್ನು ತೋರಿಸುತ್ತಿದೆ. ಸಾಸಿವೆ ಎಣ್ಣೆ ಹಾಗೂ ಇತರ ಖಾದ್ಯ ತೈಲಗಳ ಕಲಬೆರಕೆಯಿಂದಾಗಿ ರಾಜಧಾನಿಯಲ್ಲಿ ಹಲವಾರು ಸಾವುಗಳು ಸಂಭವಿಸಿರುವ ಆಘಾತಕಾರಿ ಹಗರಣ ಬಿಜೆಪಿ ಮತ್ತು ನೀತಿಬಾಹಿರ ವ್ಯಾಪಾರಸ್ಥರ ನಡುವಿನ ಕೂಟಕ್ಕೆ ಒಂದು ಉದಾಹರಣೆ ಎಂದು ಸಿಪಿಐ(ಎಂ) ಸಮಿತಿ ಹೇಳಿದೆ.

ನಾಲ್ಕು ಲಾಭದಾಯಕ ಸಾರ್ವಜನಿಕ ವಲಯದ ಕಂಪನಿಗಳಲ್ಲಿನ ಶೇರುಗಳನ್ನು ಮಾರಾಟ ಮಾಡುವುದನ್ನು ಈ ತಿಂಗಳಿಂದಲೇ ಆರಂಭಿಸಲಾಗುವುದು ಎಂಬ ಹಣಕಾಸು ಮಂತ್ರಿ ಯಶವಂತ ಸಿನ್ಹಾರ ಪ್ರಕಟಣೆಯನ್ನು ಕೇಂದ್ರ ಸಮಿತಿ ಬಲವಾಗಿ ಖಂಡಿಸಿತು. ಸಾರ್ವಜನಿಕ ವಲಯವನ್ನು ಕಳಚಿ ಹಾಕುವ ಅವರ ಭರದ ಪ್ರಯತ್ನವನ್ನು ಕಾರ್ಮಿಕ ವರ್ಗ ಮತ್ತು ಎಲ್ಲಾ ಪ್ರಜಾಪ್ರಭುತ್ವವಾದಿ ಶಕ್ತಿಗಳು ಪ್ರತಿರೋಧಿಸುತ್ತವೆ, ಅದರ ವಿರುದ್ಧ ನಿರಂತರ ಹೋರಾಡುತ್ತವೆ ಎಂದೂ ಕೇಂದ್ರ ಸಮಿತಿ ಬಿಜೆಪಿ ಸರಕಾರವನ್ನು ಎಚ್ಚರಿಸಿತು. ಈ ಸಂಬಂಧದಲ್ಲಿ ಡಿಸೆಂಬರ್ 11 ಹಾಗೂ 12 ರಂದು ಸಾರ್ವಜನಿಕ ವಲಯದ ಮುಷ್ಕರ ಹಾಗೂ ಡಿಸೆಂಬರ್ 12 ರಂದು ಎಲ್ಲಾ ವಿಭಾಗಗಳ ಸಾರ್ವತ್ರಿಕ ಮುಷ್ಕರಕ್ಕೆ ಸಂಪೂರ್ಣ ಬೆಂಬಲ ನೀಡಲು ಕೇಂದ್ರ ಸಮಿತಿ ನಿರ್ಧರಿಸಿತು. ಈ ಪ್ರತಿಭಟನಾ ಕಾರ್ಯಾಚರಣೆಯನ್ನು ಸೇರಿಕೊಳ್ಳುವಂತೆ ಎಲ್ಲಾ ಜನವಿಭಾಗಗಳನ್ನು ಅಣಿನೆರಸಿ ಈ ಕರೆಯನ್ನು ಯಶಸ್ವಿಗೊಳಿಸಬೇಕು ಎಂದು ಕೇಂದ್ರ ಸಮಿತಿ ಕರೆ ನೀಡಿತು.

ಸಾರ್ವಜನಿಕ ವಲಯವನ್ನು ಖಾಸಗೀಕರಿಸುವ ಪ್ರಯತ್ನದೊಂದಿಗೆ ವಾಜಪೇಯಿ ಸರಕಾರ ದೊಡ್ಡ ವ್ಯಾಪಾರಸ್ಥರೊಂದಿಗೆ ಸಂಪೂರ್ಣವಾಗಿ ಮೈತ್ರಿ ಮಾಡಿಕೊಳ್ಳುತ್ತಿದೆ. ದೊಡ್ಡ ವ್ಯಾಪಾರಸ್ಥರ ಪ್ರತಿನಿಧಿಗಳಿರುವ ಒಂದು ವ್ಯಾಪಾರ ಮತ್ತು ಉದ್ದಿಮೆ ಮಂಡಳಿಯನ್ನು ಪ್ರಧಾನಮಂತ್ರಿಗಳು ರಚಿಸಿದ್ದಾರೆ. ಉದ್ದಿಮೆ ಮತ್ತು ಸರಕಾರದ ನಡುವೆ ಪಾಲುದಾರಿಕೆಯ ಹೆಸರಿನಲ್ಲಿ ಈ ಮಂಡಳಿಗೆ ದೊಡ್ಡ ವ್ಯಾಪಾರಸ್ಥರ ನೇತೃತ್ವದ ಉಪ ಸಮಿತಿಗಳಿಗೆ ಸರ್ಕಾರಿ ಅಧಿಕಾರಿಗಳನ್ನು ಸೇರಿಸಿಕೊಳ್ಳಲೂ ಮುಕ್ತ ಅವಕಾಶ ನೀಡಲಾಗಿದೆ. ಹೀಗೆ ಸರಕಾರೀ ಯಂತ್ರವನ್ನು ದೊಡ್ಡ ವ್ಯಾಪಾರಿ ಗುಂಪುಗಳಿಗೆ ಅಡಿಯಾಳಾಗಿಸುವುದು ಕಾನೂನುಬಾಹಿರ ಹಾಗೂ ಸಂಸದೀಯ ಪ್ರಜಾಪ್ರಭುತ್ವ ಆಡಳಿತ ವ್ಯವಸ್ಥೆಗೆ ಹಾನಿಕಾರಕ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ.

ವಿಶ್ವಾದ್ಯಂತ ಹಣಕಾಸು ಮಾರುಕಟ್ಟೆಗಳನ್ನು ಹಾಗೂ ಬಂಡವಾಳಶಾಹಿ ವ್ಯವಸ್ಥೆಯನ್ನು ತಟ್ಟುತ್ತಿರುವ ಬಿಕ್ಕಟ್ಟು ಭಾರತೀಯ ಆರ್ಥಿಕದ ಮೇಲೂ ಪ್ರತಿಕೂಲ ಪರಿಣಾಮ ಬೀರಿದೆ. ಭಾರತದಲ್ಲಿ ಐಎಂಎಫ್ - ವಿಶ್ವಬ್ಯಾಂಕ್ ಹೇರಿದ ಉದಾರೀಕರಣದ ಧೋರಣೆಗಳನ್ನು ಪ್ರತಿಪಾದಿಸುತ್ತಿದ್ದವರೆಲ್ಲಾ ಈ ಧೋರಣೆಗಳು ಒಂದಾದ ಮೇಲೊಂದರಂತೆ ಹಲವು ದೇಶಗಳಲ್ಲಿ ಹಾನಿಯುಂಟುಮಾಡುತ್ತಿರುವಾಗ ಇನ್ನೂ ಕುರುಡಾಗಿ ಅದಕ್ಕೆ ಅಂಟಿಕೊಂಡಿದ್ದಾರೆಂಬುದು ಬಯಲಾಗುತ್ತಿದೆ. ರಶ್ಯಾದ ಹಣಕಾಸು ವ್ಯವಸ್ಥೆಯ ಕುಸಿತ ಪೂರ್ವಏಶ್ಯಾದ ಬಿಕ್ಕಟ್ಟಿನ ನಂತರದ ಇತ್ತೀಚಿನ ಉದಾಹರಣೆ ಎಂದು ಕೇಂದ್ರ ಸಮಿತಿ ಹೇಳಿದೆ.

ಸಿಟಿಬಿಟಿ ಮಾತುಕತೆ ನಿಲ್ಲಿಸಿ

ಬಿಜೆಪಿ ಸರಕಾರ ಸಮಗ್ರ ಪರೀಕ್ಷಾ ನಿಷೇಧ ಸಂಧಿಗೆ ಸಹಿ ಹಾಕುವತ್ತ ಸಾಗಬಾರದು ಎಂದು ಕೇಂದ್ರ ಸಮಿತಿ ಬಿಜೆಪಿ ಸರಕಾರವನ್ನು ಎಚ್ಚರಿಸಿದೆ. ಸ್ಟ್ರೋಬ್ ತಾಲ್‌ಬೋಟ್ ಮತ್ತು ಜಸ್ವಂತ್ ಸಿಂಗ್ ನಡುವೆ ಗುಟ್ಟಿನಲ್ಲಿ ನಡೆಯುತ್ತಿರುವ ಮಾತುಕತೆಗಳು, ಅದೇ ರೀತಿ ಅಮೆರಿಕದ ರಾಯಭಾರಿ ಹಾಗೂ ಪಾಕಿಸ್ತಾನದ ವಿದೇಶಾಂಗ ಕಾರ್ಯದರ್ಶಿಯ ನಡುವಿನ ಮಾತುಕತೆಗಳನ್ನು ನೋಡಿದರೆ ಇವೆರಡೂ ದೇಶಗಳು ಸಿಟಿಬಿಟಿಗೆ ಸಹಿ ಹಾಕಿ ಅಮೆರಿಕಾದೊಂದಿಗೆ ರಾಜಿ ಮಾಡಿಕೊಳ್ಳುವ ಹತಾಶ ಪ್ರಯತ್ನ ನಡೆಸುತ್ತಿವೆಯೆಂದೆನಿಸುತ್ತದೆ. ಸಿಟಿಬಿಟಿ ಮತ್ತಿತರ ವಿಷಯಗಳಲ್ಲಿ ಅಮೆರಿಕನ್ ಒತ್ತಡಗಳಿಗೆ ಮಣಿಯುತ್ತ ಇನ್ನೊಂದೆಡೆ ಶಸ್ತ್ರೀಕರಣದ ನೀತಿ ಅನುಸರಿಸುತ್ತಿರುವುದು ಭಾರತದ ಹಿತಾಸಕ್ತಿಗಳಿಗೆ ವಿರುದ್ಧವಾಗುವ ಒಂದು ನೀತಿ ಬಾಹಿರ ನಿಲುವು ಎಂದು ಕೇಂದ್ರ ಸಮಿತಿ ಹೇಳಿದೆ.

ಸೆಪ್ಟೆಂಬರ್ 16 ರ ರ‍್ಯಾಲಿ - ಅಭಿನಂದನೆಗಳು

ಪಕ್ಷ ನವದೆಹಲಿಯಲ್ಲಿ ಸಂಘಟಿಸಿದ್ದ ಸೆಪ್ಟೆಂಬರ್ 16 ರ ರ‍್ಯಾಲಿಗೆ ಉತ್ತಮ ಸ್ಪಂದನ ದೊರೆತಿದೆ ಎಂದು ಗಮನಿಸಿದ ಕೇಂದ್ರ ಸಮಿತಿ ಒಂದು ತಿಂಗಳ ಕಾಲ ಬಿಜೆಪಿ ಸರಕಾರದ ಬೆಲೆಯೇರಿಕೆಯ

ಪುಟ 8 ಕ್ಕೆ

ತ್ರಿಪುರಾದಲ್ಲಿ ಕೇಂದ್ರಾಡಳಿತಕ್ಕೆ ಅಸಂಬದ್ಧ ಬೇಡಿಕೆ

ಬಿಹಾರದಲ್ಲಿ ಕೇಂದ್ರಾಡಳಿತ ಹೇರುವುದಕ್ಕೆ ಸಂಬಂಧಿಸಿದಂತೆ ರಾಷ್ಟ್ರಪತಿ ಹಾಗೂ ಪ್ರತಿಪಕ್ಷಗಳಿಂದ ಮುಖಮೂತಿಗೆ ಇಕ್ಕಿಸಿಕೊಂಡ ಬಿಜೆಪಿ ಮತ್ತದರ ಮಿತ್ರಪಕ್ಷಗಳು ಈ ಪ್ರಕರಣದಿಂದ ಪಾಠ ಕಲಿಯದೆ ತ್ರಿಪುರಾದಲ್ಲಿ ತಮ್ಮ ಪ್ರತಾಪ ತೋರಲು ಹೊರಟಿರುವಂತೆ ಕಾಣುತ್ತದೆ.

ತ್ರಿಪುರಾದಲ್ಲಿ ರಾಷ್ಟ್ರ ಪತಿ ಆಡಳಿತ ಹೇರುವಂತೆ ಹಾಗೂ ರಾಜ್ಯಪಾಲರನ್ನು ಹಿಂದೆ ಕರೆಸುವಂತೆ ಬಿಜೆಪಿಯ ತ್ರಿಪುರ ರಾಜ್ಯ ಘಟಕ ಸೆಪ್ಟೆಂಬರ್ 27 ರಂದು ಒತ್ತಾಯಿಸಿದೆ.

ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿ ಪಾಲನೆಯಲ್ಲಿ ಎಡರಂಗ ಸರಕಾರ ಸಂಪೂರ್ಣ ವಿಫಲವಾಗಿದೆ. ಜನತೆಯ ಜೀವ ಮತ್ತು ಆಸ್ತಿಪಾಸ್ತಿ ರಕ್ಷಣೆ ಮಾಡುವ ಸಲುವಾಗಿ 350 ನೇ ವಿಧಿಯನ್ನು ಜಾರಿಗೆ ತರಬೇಕೆಂಬುದು ಬಿಜೆಪಿಯ ವಾದವಾಗಿದೆ.

ರಾಜ್ಯದಲ್ಲಿ ಮುಂದುವರಿದಿರುವ ಉಗ್ರಗಾಮಿಗಳ ಹಿಂಸಾಚಾರದಿಂದ ಉದ್ಭವಿಸಿರುವ ಪರಿಸ್ಥಿತಿ ಬಗ್ಗೆ ರಾಜ್ಯಪಾಲರು ಉದಾಸೀನ ಮನೋಭಾವ ತಾಳಿದ್ದಾರೆ. ರಾಜ್ಯದಲ್ಲಿನ ಪರಿಸ್ಥಿತಿ ಅಪಾಯಕಾರಿ ಮತ್ತು ಸ್ಫೋಟನಕಾರಿ ಯಾಗಿದೆ ಎಂದು ಬಿಜೆಪಿ ಹೇಳಿದೆ. ಕೇಂದ್ರ ಸರಕಾರ ಮಧ್ಯಪ್ರವೇಶಿಸದಿದ್ದರೆ ಪರಿಸ್ಥಿತಿ ಬಿಗಡಾಯಿಸುತ್ತದೆ ಎಂದೂ ಅದು ಹೇಳಿದೆ. ತ್ರಿಪುರಾ ಉಗ್ರಗಾಮಿಗಳಿಗೆ ಪಾಕಿಸ್ತಾನದ ಐಎಸ್ಐ ಗೂಢಚಾರ ಸಂಸ್ಥೆ ಕುಮ್ಮಕ್ಕು ನೀಡುತ್ತಿದೆ. ಎಂಬುದೂ ರಾಜ್ಯ ಬಿಜೆಪಿ ಆರೋಪವಾಗಿದೆ.

ತ್ರಿಪುರಾದಲ್ಲಿ ರಾಷ್ಟ್ರಪತಿ ಆಡಳಿತ ಹೇರಬೇಕೆಂಬ ಒತ್ತಾಯ ಎಡರಂಗ ಸರಕಾರಗಳ ಪ್ರತಿಷ್ಠೆಗೆ ಹೇಗಾದರೂ ಮಾಡಿ ಮಸಿಬಳಿಯ ಬೇಕೆಂದು ಪ್ರಯತ್ನಿಸುತ್ತಿರುವ ಶಕ್ತಿಗಳ ಹುನ್ನಾರದ ಭಾಗವೇ ಆಗಿದೆ.

ಅತ್ತ ಪಶ್ಚಿಮ ಬಂಗಾಳದಲ್ಲಿ ತಥಾಕಥಿತ ಅಗ್ನಿಕನ್ಯೆ ಮಮತಾ ಬ್ಯಾನರ್ಜಿ ಕೂಡ ರಾಜ್ಯದ ಆಳುವ ಎಡರಂಗವನ್ನು ವಜಾ ಮಾಡುವ ಕನಸು ಕಾಣುತ್ತಿದ್ದಾರೆ. ಮುಂದೆ ಮಮತಾ ಬ್ಯಾನರ್ಜಿಯೇ ರಾಜ್ಯದ ಮುಖ್ಯಮಂತ್ರಿ ಎಂದು ತೃಣಮೂಲ ಕಾಂಗ್ರೆಸ್ಸಿನ ನಾಯಕರೊಬ್ಬರು ಹೇಳಿದ್ದಾರೆ.

ತ್ರಿಪುರಾದಲ್ಲಿ ಉಗ್ರಗಾಮಿಗಳು ಕೆಲವೆಡೆ ಹಾವಳಿ ನಡೆಸುತ್ತಿದ್ದಾರೆಂಬ ಮಂತ್ರಕ್ಕೆ ಇಡೀ ರಾಜ್ಯ ಕೇಂದ್ರಾಡಳಿತಕ್ಕೆ ಒಳಪಡಬೇಕೆಂಬ ಬೇಡಿಕೆಯಲ್ಲಿ ಅರ್ಥವಿಲ್ಲ. ಅಷ್ಟಕ್ಕೂ ರಾಜ್ಯದ ಪರಿಸ್ಥಿತಿ ಹದಗೆಡುವಲ್ಲಿ ಕೇಂದ್ರದ ಪಾಲು ಕೂಡಾ ಇದೆ ಎನ್ನುವುದನ್ನು ಬಿಜೆಪಿ ಅರಿಯಬೇಕು.

ರಾಜ್ಯದ ಬುಡಕಟ್ಟು ಮತ್ತು ಬುಡಕಟ್ಟೇತರ ಜನರ ಮಧ್ಯೆ ವೈರಭಾವ ಹುಟ್ಟಿಸಿ ಹಿಂಸಾಕೃತ್ಯ ನಡೆಸುವ ದುಷ್ಟ ಶಕ್ತಿಗಳ ದಮನಕ್ಕೆ ಕೇಂದ್ರೀಯ ಪಡೆಗಳ ನೆರವು ಬೇಕೇ ಬೇಕು. ಜನಾಂಗೀಯ ಶಾಂತಿ-ಸೌಹಾರ್ದತೆ ಸ್ಥಾಪನೆಗಾಗಿ ಮೊದಲಿನಿಂದಲೂ ಪಣತೊಟ್ಟು ಕೆಲಸ ಮಾಡುತ್ತಾ ಅಪಾರ ತ್ಯಾಗ ಬಲಿದಾನ ಮಾಡುತ್ತಿರುವ ರಾಜ್ಯದ ಎಡರಂಗ ಕೈಕಟ್ಟಿಯೇನೂ ಕುಳಿತಿಲ್ಲ.

ಉಗ್ರಗಾಮಿಗಳ ಹುಟ್ಟಡಗಿಸಲು ತನ್ನಿಂದಾಗುವ ಎಲ್ಲಾ ಪ್ರಯತ್ನಗಳನ್ನು ಅದು ಮಾಡುತ್ತಿದೆ. ಆದರೆ ಕಳೆದ ಲೋಕಸಭೆ ಚುನಾವಣೆಗಳ ವೇಳೆ ರಾಜ್ಯದ ಸೂಕ್ಷ್ಮ ಪ್ರದೇಶಗಳಿಂದ ವಾಪಸು ಕರೆಸಿಕೊಳ್ಳಲಾದ ಕೇಂದ್ರೀಯ ಭದ್ರಾತಾ ಪಡೆಗಳ ತುಕಡಿಗಳನ್ನು ಕೇಂದ್ರ ಸರ್ಕಾರ ಪುನಃ ಅಲ್ಲಿಗೆ ಕಳಿಸಿಲ್ಲ. ಇದರಿಂದ ಭಯೋತ್ಪಾದಕರಿಗೆ ತಮ್ಮ ಕುಕೃತ್ಯಗಳನ್ನು ಎಗ್ಗಿಲ್ಲದಂತೆ ನಡೆಸಲು ಅನುಕೂಲವಾಗಿದೆ. ಮುಗ್ಧ ಜನರು ಬಲಿಯಾಗುತ್ತಿದ್ದಾರೆ ಈ ಹಿನ್ನೆಲೆಯಲ್ಲಿ ರಾಜ್ಯಕ್ಕೆ ಹೆಚ್ಚಿನ ಕೇಂದ್ರೀಯ ಪಡೆಗಳನ್ನು ಕಳಿಸುವಂತೆ ರಾಜ್ಯ ಸರಕಾರ ಅನೇಕಸಲ ಮಾಡಿಕೊಂಡ ಮನವಿಯನ್ನು ಕೇಂದ್ರ ಸರಕಾರ ಅಲಕ್ಷಿಸಿ ತ್ರಿಪುರಾ ಜನತೆಯ ಜೀವದೊಂದಿಗೆ ಚೆಲ್ಲಾಟ ನಡೆಸುತ್ತಿದೆ.

ಪರಿಸ್ಥಿತಿ ಹೀಗಿರುವಾಗ ತ್ರಿಪುರಾದಲ್ಲಿ ರಾಷ್ಟ್ರಪತಿ ಆಡಳಿತ ಹೇರಬೇಕೆಂದು ಒತ್ತಾಯಿಸುವುದು ಯಾವ ನ್ಯಾಯ?

ರಾಜ್ಯ ಸರಕಾರಗಳನ್ನು ವಜಾ ಮಾಡುವ ಪ್ರಸ್ತಾವದ ವಿರುದ್ಧ ಇಡೀದೇಶ ಸೆಟೆದೆದ್ದು ನಿಂತಿದ್ದನ್ನು ಬಿಹಾರಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಕಂಡಿದ್ದೇವೆ. ತ್ರಿಪುರಾದಲ್ಲೇನಾದರೂ ಕೇಂದ್ರಾಡಳಿತ ಹೇರಲು ಮುಂದಾದರೆ ಅದಕ್ಕೂ ಸಂಘಟಿತ ಪ್ರತಿಭಟನೆ ರೂಪುಗೊಳ್ಳುವುದರಲ್ಲಿ ಯಾವುದೇ ಸಂದೇಹವಿಲ್ಲ.

ಮಧ್ಯಪ್ರದೇಶ: ಸಿಪಿಐ(ಎಂ)ನಲ್ಲಿ ವಿಲೀನಕ್ಕೆ ಸಿಪಿಐ ಜಿಲ್ಲಾ ಸಮಿತಿ ನಿರ್ಧಾರ

ಮಧ್ಯಪ್ರದೇಶದಲ್ಲಿನ ಭಾರತ ಕಮ್ಯುನಿಸ್ಟ್ ಪಕ್ಷದ (ಸಿಪಿಐ) ಇಡೀ ಸರ್ಗುಜಾ ಜಿಲ್ಲಾ ಘಟಕ ಸಿಪಿಐ(ಎಂ) ನಲ್ಲಿ ವಿಲೀನಗೊಳ್ಳಲು ನಿರ್ಧರಿಸಿದೆ. ಈ ಘಟಕ ಇಡೀ ರಾಷ್ಟ್ರದಲ್ಲೇ ಸಿಪಿಐನ ಅತ್ಯಂತ ದೊಡ್ಡ ಜಿಲ್ಲಾ ಘಟಕವಾಗಿದೆ.

ಈಚೆಗೆ ನಡೆದ ಸಿಪಿಐ ಸರ್ಗುಜಾ ಜಿಲ್ಲಾ ಮಂಡಳಿ ಸಭೆಯಲ್ಲಿ ವಿಲೀನದ ನಿರ್ಧಾರವನ್ನು ತೆಗೆದುಕೊಳ್ಳಲಾಯಿತು. ಜಿಲ್ಲಾ ಕಾರ್ಯದರ್ಶಿ ಅಶೋಕ ಸಿನ್ಹಾ ಈ ನಿರ್ಧಾರದ ಬಗ್ಗೆ ಎರಡೂ ಪಕ್ಷಗಳ ರಾಜ್ಯ ಹಾಗೂ ಕೇಂದ್ರ ಕಚೇರಿಗಳಿಗೆ ಫ್ಯಾಕ್ಸ್ ಸಂದೇಶಗಳ ಮೂಲಕ ತಿಳಿಸಿದ್ದಾರೆ.

ಸಿಪಿಐ ಜಿಲ್ಲಾ ಮಂಡಳಿಯ ನಿರ್ಧಾರವನ್ನು ಕಿಸಾನ್‌ಸಭಾ ಐಟಕ್, ಕೃಷಿಕೂಲಿಗಾರರ ಸಂಘ ಮತ್ತಿತರ ಸಾಮೂಹಿಕ ಸಂಘಟನೆಗಳ ಪ್ರಾತಿನಿಧಿಗಳು ಹಾಗೂ ಜಿಲ್ಲಾ ಪಂಚಾಯಿತಿ, ತಹಶೀಲ್ ಪರಿಷತ್‌ಗಳು ಮತ್ತಿತರ ಸ್ಥಳೀಯ ಸಂಸ್ಥೆಗಳ ಚುನಾಯಿತ ಸದಸ್ಯರು ಒಪ್ಪಿಕೊಂಡಿದ್ದಾರೆ. ಅವರೆಲ್ಲರು ಸಭೆಯಲ್ಲಿ ಭಾಗವಹಿಸಿದ್ದರು.

ಎಡಶಕ್ತಿಗಳಲ್ಲಿ ಏಕತೆ ಈಗಿನ ಅತಿ ಜರೂರಿನ ಅವಶ್ಯಕತೆಯಾಗಿದೆ ಎಂದು ವಿಲೀನ ನಿರ್ಧಾರವನ್ನು ತಿಳಿಸುವಾಗ ಅಶೋಕ ಸಿನ್ಹಾ ವಿವರಿಸಿದ್ದಾರೆ.

ಮಧ್ಯಪ್ರದೇಶದಲ್ಲಿ ತೀಕ್ಷ್ಣವಾಗಿರುವ ಬಂಡವಾಳಶಾಹಿ ಭೂಮಾಲಿಕ ವ್ಯವಸ್ಥೆಯ ಶೋಷಣೆ ಎಲ್ಲಾ ಮಾನವೀಯ ಮೌಲ್ಯಗಳನ್ನು ತುಳಿದು ಹೊಸಕಿ ಹಾಕುತ್ತಿದೆ. ಕೋಮುವಾದಿ ವೈರಸ್ ಶೋಷಣೆಗೆ ನೆರವು ನೀಡುತ್ತಿದೆ. ಅದು ಸಮಾಜವನ್ನು ರಾಜಕೀಯದ ಸ್ವರೂಪವನ್ನೇ ನಾಶ ಮಾಡುತ್ತಿದೆ ಎಂದು ಸಿನ್ಹಾ ಹೇಳಿದ್ದಾರೆ. ಯೋಜಿತ ರೀತಿಯಲ್ಲಿ ಸಂಘಟಕರಾಗಿ ಒಗ್ಗಟ್ಟಾದರೆ ಮಾತ್ರ ಈ ಪರಿಸ್ಥಿತಿಯ ವಿರುದ್ಧ ಹೋರಾಟ ನಡೆಸಬಹುದು ಎಂದವರು ತಿಳಿಸಿದ್ದಾರೆ.

ಸಿಪಿಐ(ಎಂ) ನಲ್ಲಿ ವಿಲೀನಗೊಳ್ಳುವ ತಮ್ಮ ನಿರ್ಧಾರದಿಂದ ಜಿಲ್ಲೆಯಲ್ಲಿನ ಬುಡಕಟ್ಟು ಜನರು, ಗಣಿ ಕಾರ್ಮಿಕರು ಮತ್ತು ಇತರ ಶೋಷಿತ ಜನರ ಹೋರಾಟಗಳು ತೀಕ್ಷ್ಣಗೊಳ್ಳಬಹುದು ಎಂದು ಸಿನ್ಹಾ ಆಶಾವಾದ ವ್ಯಕ್ತ ಪಡಿಸಿದ್ದಾರೆ.

ಸರ್ಗುಜಾ ಜಿಲ್ಲಾ ಸಮಿತಿಯ ನಿರ್ಧಾರ ತಿಳಿಯುತ್ತಲೇ ಸಿಪಿಐ ರಾಜ್ಯ ನಾಯಕರು ಸಿಪಿಐ(ಎಂ) ವಿರುದ್ಧ ಅಪ ಪ್ರಚಾರದ ದಾಳಿಯನ್ನೇ ಆರಂಭಿಸಿದರು. ರಾಜ್ಯ ಸಿಪಿಐ ಜಂಟಿ ಕಾರ್ಯದರ್ಶಿ ಸಿಪಿಐ(ಎಂ) ಮೇಲೆ ಅತ್ಯಂತ ಅಗ್ಗದ ಹಾಗೂ ಕೀಳುಮಟ್ಟದ ಪ್ರಚಾರವನ್ನು ಹರಿಯಬಿಟ್ಟರು. ಈ ಉದ್ದೇಶಕ್ಕಾಗಿಯೇ ಅವರು ಸುದ್ದಿಗೋಷ್ಠಿಯೊಂದನ್ನು ನಡೆಸಿದರು.

ಸಿಪಿಐ ಕಾರ್ಯಕರ್ತರನ್ನು ಸೆಳೆಯಲು ಸಿಪಿಐ(ಎಂ) ಮುಖಂಡರು ಪ್ರಚೋದನೆ ಒಡ್ಡುತ್ತಿದ್ದಾರೆ ಎಂದು ಅವರು ಆಪಾದಿಸಿದರು. ಮಾಧ್ಯಮಗಳ ವಿರುದ್ಧವೂ ತನ್ನ ಸಿಟ್ಟನ್ನು ಕಾರಿಕೊಂಡ ಜಂಟಿ ಕಾರ್ಯದರ್ಶಿ, ಕೇಂದ್ರ ವಾರ್ತೆ ಮತ್ತು ಪ್ರಸಾರ ಖಾತೆ ಸಚಿವೆ ಸುಷ್ಮಾ ಸ್ವರಾಜ್ (ಬಿಜೆಪಿ)ರಿಗೆ ಪತ್ರಕರ್ತರ ವಿರುದ್ಧ ದೂರು ಸಲ್ಲಿಸುವುದಾಗಿ ಎಚ್ಚರಿಕೆ ನೀಡಿದರು.

ಸಿಪಿಐ ರಾಜ್ಯ ನಾಯಕರು ಇಂಥ ಹೇಳಿಕೆಗಳನ್ನು ನೀಡುತ್ತಿರುವುದು ದುರದೃಷ್ಟಕರ ಎಂದು ಸಿಪಿಐ(ಎಂ) ರಾಜ್ಯ ಸಮಿತಿ ತಿಳಿಸಿದೆ.

ಸಿಪಿಐ ಬಿಡುವಂತೆ ಪ್ರಚೋದಿಸಲು ಅದರ ಯಾವುದೇ ನಾಯಕ ಅಥವಾ ಕಾರ್ಯಕರ್ತರನ್ನು ಸಿಪಿಐ(ಎಂ) ಸಂಪರ್ಕಿಸಿರಲಿಲ್ಲ. ಆ ರೀತಿಯ ಅವಶ್ಯಕತೆ ಯಿದೆ ಎಂದು ಪಕ್ಷ ಭಾವಿಸುವುದಿಲ್ಲ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಬಹದೂರ್ ಸಿಂಗ್ ಧಕಾರ್ ಹೇಳಿದ್ದಾರೆ.

ತಮ್ಮ ಪಕ್ಷ ಮತ್ತು ಅದರ ಕಾರ್ಯವೈಖರಿ ಬಗ್ಗೆ ಸಿಪಿಐ ಕಾರ್ಯಕರ್ತರು ಭ್ರಮ ನಿರಸನಗೊಂಡರೆ ಅದಕ್ಕೆ ಸಿಪಿಐ(ಎಂ) ಯಾವುದೇ ರೀತಿಯಲ್ಲಿ ಹೊಣೆಯಲ್ಲ ಎಂದೂ ಅವರು ಸ್ಪಷ್ಟಪಡಿಸಿದ್ದಾರೆ. ಹೀಗಾಗಿ ಸಿಪಿಐ(ಎಂ) ಅನ್ನು ದೂಷಿಸುವ ಬದಲು ಸಿಪಿಐ ಆತ್ಮಾವಲೋಕನ ಮಾಡಿಕೊಂಡರೆ ಒಳ್ಳೆಯದು ಎಂದು ತಿಳಿಸಿದ್ದಾರೆ.

ವಾಸ್ತವವಾಗಿ ಸಿಪಿಐ ದುರ್ಬಲಗೊಂಡರೆ ಅದರಿಂದ ಸಿಪಿಐ(ಎಂ)ಗೆ ದುಃಖವಾಗುತ್ತದೆ. ಪಂಜಾಬ್ ಉತ್ತರ ಪ್ರದೇಶ ಮತ್ತು ಬಿಹಾರದಲ್ಲಿ ಸಿಪಿಐನ ಅನೇಕ ಹಿರಿಯ ನಾಯಕರು ಪಕ್ಷವನ್ನು ತೊರೆದು ಕಾಂಗ್ರೆಸ್, ಸಮಾಜವಾದಿ ಪಕ್ಷ ಅಥವಾ ಆರ್‌ಜೆಡಿಯನ್ನು ಸೇರಿದ್ದಾರೆ. ಕನಿಷ್ಠ ಪಕ್ಷ ಆಂಧ್ರಪ್ರದೇಶ ಮತ್ತು ಮಧ್ಯಪ್ರದೇಶದಲ್ಲಾದರೂ ಸಿಪಿಐ ಕಾರ್ಯಕರ್ತರು ಮತ್ತು ಮುಖಂಡರು ಬೂರ್ಜ್ವಾ ಭೂಮಾಲಕ ಪಕ್ಷಗಳತ್ತ ಹೋಗದೆ ಈಗಲೂ ಎಡ ಶಕ್ತಿಗಳತ್ತವೇ ವಾಲುತ್ತಿರುವುದು ಸಿಪಿಐ(ಎಂ) ಗೆ ಸಂತಸದ ಸಂಗತಿಯಾಗಿದೆ.

ಸಿಪಿಐ(ಎಂ) ವಿರುದ್ಧ ಹೋರಾಡುವ ಬದಲು ಎಡ ಏಕತೆ, ಜಂಟಿ ಹೋರಾಟ ಮತ್ತು ಆಂದೋಳನಗಳನ್ನು ಒಳಪಡಿಸಲು ಸಿಪಿಐ ರಾಜ್ಯ ನಾಯಕತ್ವ ಗಮನವನ್ನು ಕೇಂದ್ರೀಕರಿಸಬೇಕು ಎಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಮನವಿ ಮಾಡಿದೆ. ಸಿಪಿಐ ಅನ್ನು ಒಡೆಯಲು ಅಥವಾ ದುರ್ಬಲಗೊಳಿಸಲು ಪಕ್ಷ ಪ್ರಯತ್ನಿಸುವುದಿಲ್ಲ ಅಂಥ ಅಗತ್ಯವೂ ಇಲ್ಲ ಎಂದು ಸಿಪಿಐ(ಎಂ) ಹೇಳಿಕೆಯೊಂದರಲ್ಲಿ ಸ್ಪಷ್ಟಪಡಿಸಿದೆ. ಅಷ್ಟಾಗಿಯೂ ಸಿಪಿಐ ನಾಯಕರ ಕಾರ್ಯವೈಖರಿಯೇ ಪಕ್ಷ ದುರ್ಬಲಗೊಳ್ಳಲು ಕಾರಣವಾದರೆ ಅದಕ್ಕಾಗಿ ಬೇಸರಪಡುವುದನ್ನು ಬಿಟ್ಟರೆ ಬೇರೇನನ್ನೂ ಮಾಡಲಾಗದು ಎಂದು ಸಿಪಿಐ(ಎಂ) ಹೇಳಿದೆ.

ಮಹಾರಾಷ್ಟ್ರ ಮುಖ್ಯಮಂತ್ರಿ ಅಳಿಯನಿಗಾಗಿ ನಿಯಮ ಉಲ್ಲಂಘನೆ

ಪುಣೆಯಲ್ಲಿ ಶಾಲೆಯೊಂದಕ್ಕಾಗಿ ಮೀಸಲಿಟ್ಟಿದ್ದ ಜಾಗವೊಂದನ್ನು ವಸತಿ ಹಾಗೂ ವಾಣಿಜ್ಯ ಸಮುಚ್ಚಯದ ನಿರ್ಮಾಣಕ್ಕಾಗಿ ಮಹಾರಾಷ್ಟ್ರ ಮುಖ್ಯ ಮಂತ್ರಿ ಮನೋಹರ ಜೋಷಿ ಅವರ ಅಳಿಯ ಗಿರೀಶ್ ವ್ಯಾಸ್ ಅವರಿಗೆ ಮಂಜೂರು ಮಾಡುವಲ್ಲಿ ಕಾನೂನನ್ನು ಉಲ್ಲಂಘಿಸಲಾಗಿದೆ.

ಮುಂಬಯಿ ಹೈಕೋರ್ಟ್ ಸೆಪ್ಟೆಂಬರ್ 25 ರಂದು ಈ ಟಿಪ್ಪಣಿಯನ್ನು ಮಾಡಿದೆ.

ಮುಖ್ಯಮಂತ್ರಿಯ ಅಳಿಯನ ಮಾಲಿಕತ್ವದ ನಿರ್ಮಾಣ ಸಂಸ್ಥೆಗೆ ಅನುಕೂಲ ಮಾಡಿಕೊಡುವುದಕ್ಕಾಗಿ ಅಭಿವೃದ್ಧಿ ನಿಯಂತ್ರಣ ನಿಯಮಗಳು ಮತ್ತಿತರ ನಿಯಮಗಳನ್ನು ಉಲ್ಲಂಘಿಸಲಾಗಿದೆ ಎಂದು ಆರೋಪಿಸಿ ಪುಣೆ ನಗರ ಪಾಲಿಕೆಯ ಒಬ್ಬ ಸದಸ್ಯರು ಮತ್ತು ಒಬ್ಬ ಪತ್ರಕರ್ತರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

ಈ ವಿಚಾರವಾಗಿ ಕೆಲವು ಸಂಚಿಕೆಗಳ ಹಿಂದೆಯೇ ಐಕ್ಯರಂಗ ಇದೇ ಅಂಕಣದಲ್ಲಿ ಬರೆದು ಈ ಜಮೀನಿನ ಮಂಜುರಾತಿಯಲ್ಲಿ ಪಕ್ಷಪಾತ ನಡೆದಿದೆ ಎಂದು ತಿಳಿಸಿತ್ತು. ಇದೀಗ ನ್ಯಾಯಾಲಯವೂ ಈ ಆಪಾದನೆ ಸರಿಯಾದುದು ಎಂದು ಹೇಳಿದೆ.

ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು, ನಿರ್ಮಾಣವಾದ ಕಟ್ಟಡವನ್ನು ಕೆಡವಬೇಕು ಹಾಗೂ ಜಮೀನನ್ನು ಶಾಲೆಗೇ ಮರಳಿ ನೀಡಬೇಕು ಎಂದು ಅರ್ಜಿದಾರರ ವಕೀಲರು ನ್ಯಾಯಾಲಯವನ್ನು ಕೋರಿದ್ದಾರೆ.

ಕ್ರಿಶ್ಚಿಯನ್ ಕೋಮಿನ ಮೇಲೆ ಮತ್ತೆ ಧಾಳಿಗಳು

ವಿಶೇಷವಾಗಿ ಬಿಜೆಪಿ ನೇತೃತ್ವದ ಸರಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಮೇಲೆ ಅಲ್ಪ ಸಂಖ್ಯಾತರು ಮತ್ತು ದಲಿತರ ಮೇಲಿನ ದೌರ್ಜನ್ಯಗಳು ಹೆಚ್ಚುತ್ತಿವೆ. ಕ್ರೈಸ್ತರು ದಾಳಿಯ ಗುರಿಯಾಗುತ್ತಿರುವುದು ಒಂದು ಗಮನಾರ್ಹ ಬೆಳವಣಿಗೆಯಾಗಿದೆ.

ಈ ಸಂಬಂಧ ಮಧ್ಯಪ್ರದೇಶದಿಂದ ಎರಡು ಕಳವಳಕಾರಿ ಪ್ರಕರಣಗಳು ವರದಿಯಾಗಿವೆ.

ಆ ರಾಜ್ಯದ ಝಬುವಾ ಜಿಲ್ಲೆಯಲ್ಲಿ ಸೆಪ್ಟೆಂಬರ್ 23 ರಂದು ನಾಲ್ಕು ಕ್ರೈಸ್ತ ಸನ್ಯಾಸಿನಿ(ನನ್)ಗಳ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಿದೆ.

ತುರ್ತು ವೈದ್ಯಕೀಯ ನೆರವು ಬೇಕೆಂದು ಕೇಳಿ ಆಶ್ರಮವೊಂದನ್ನು ಪ್ರವೇಶಿಸಿದ ಕೆಲವು ಯುವಕರು ಅಲ್ಲಿನ ನಾಲ್ಕು ಸನ್ಯಾಸಿಯರ ಮೇಲೆ ಅತ್ಯಾಚಾರ ನಡೆಸಿದರು. ಇದು ಒಂದೆಡೆ ಅತ್ಯಾಚಾರದ ಪ್ರಕರಣವೂ ಹೌದು. ಇನ್ನೊಂದೆಡೆ ಅಲ್ಪ ಸಂಖ್ಯಾತರ ಮೇಲಿನ ಹಲ್ಲೆಯೂ ಹೌದು.

ಈ ಹೇಯ ಅತ್ಯಾಚಾರದ ಆಘಾತದಿಂದ ಇನ್ನೂ ಚೇತರಿಸಿಕೊಳ್ಳುವ ಮುನ್ನವೇ ಅಂದರೆ ಕೇವಲ ಮೂರೇ ದಿನಗಳಲ್ಲಿ (ಸೆ.27) ಝಬೂವಾ ಜಿಲ್ಲೆಯ ಜಮಾಲಿಯಲ್ಲಿರುವ ಮಿಷನರಿ ಕೇಂದ್ರವೊಂದರ ಮೇಲೆ ಆಕ್ರಮಣ ಎಸಗಲಾಗಿದೆ.

ಕೇಂದ್ರ ಮತ್ತು ಫಾದರ್ ಎಡ್ವರ್ಡ್ ಅವರ ಮನೆಯ ಬಾಗಿಲನ್ನು ಮುರಿಯಲು ಯತ್ನಿಸಿದ ದುಷ್ಕರ್ಮಿಗಳು ಕಲ್ಲುಗಳನ್ನು ತೂರಿದರು. ಹಾಗೂ ದೂರವಾಣಿ ಮತ್ತು ವಿದ್ಯುತ್ ಸಂಪರ್ಕಗಳನ್ನು ಕಡಿದು ಹಾಕಿದರು.

ಪ್ರತಿಭಟನೆ:

ಝಬುವಾ ಜಿಲ್ಲೆಯ ನವಪಾರಾ ಗ್ರಾಮದಲ್ಲಿ ಸೆ.23 ರಂದು ನಾಲ್ಕು ದಾದಿಯರ ಮೇಲೆ ನಡೆದ ಸಾಮೂಹಿಕ ಅತ್ಯಾಚಾರವನ್ನು ಪ್ರತಿಭಟಿಸಿ ಸಾವಿರಾರು ಜನರು ಸೆ.27 ರಂದು ಇಂದೋರ್‌ನಲ್ಲಿ ಮೆರವಣಿಗೆ ನಡೆಸಿದರು.

ಪ್ರತಿಭಟನಕಾರರಲ್ಲಿ ದಾದಿಯರು, ಪಾದ್ರಿಗಳು ಮಿಷನರಿ ಶಾಲೆಗಳ ವಿದ್ಯಾರ್ಥಿಗಳು ಮೊದಲಾದವರಿದ್ದರು.

ಈ ನಡುವೆ ಅತ್ಯಾಚಾರ ಪ್ರಕರಣದ ಬಗ್ಗೆ ರಾಷ್ಟ್ರೀಯ ಮಾನವ ಹಕ್ಕು ಆಯೋಗ ಮತ್ತು ರಾಷ್ಟ್ರೀಯ ಮಹಿಳಾ ಆಯೋಗಗಳಿಗೆ ಅಲ್ಪಸಂಖ್ಯಾತರ ರಾಷ್ಟ್ರೀಯ ಆಯೋಗ ಒಂದು ದೂರನ್ನು ಸಲ್ಲಿಸಿದೆ.

ಇಂಥ ಆಘಾತಕಾರಿ ಅಪರಾಧಗಳು ದೇಶಕ್ಕೆ ಕಳಂಕವಾಗಿದೆ. ನಾವು ನಾಚಿಕೆಯಿಂದ ತಲೆತಗ್ಗಿಸುವಂತೆ ಮಾಡುತ್ತದೆ ಎಂದು ಆಯೋಗದ ಅಧ್ಯಕ್ಷ ತಾಹಿರ್ ಮಹಮೂದ್ ಹೇಳಿದ್ದಾರೆ.

ಗಾಯದ ಮೇಲೆ ಬರೆ:

ಅಲ್ಪ ಸಂಖ್ಯಾತರ ಮೇಲಿನ ಹಲ್ಲೆಗಳನ್ನು ಸಮರ್ಥಿಸಿಕೊಳ್ಳುವಂಥ ಅಮಾನವೀಯ ಪ್ರವೃತ್ತಿ, ಹಲ್ಲೆಗಳಿಗಿಂತಲೂ ಆಘಾತಕಾರಿ ಯಾಗಿದೆ. ಗಾಯದ ಮೇಲೆ ಬರೆ ಎಳೆಯುವಂತ ಇಂಥ ಪ್ರವೃತ್ತಿ ವಿಶ್ವಹಿಂದೂ ಪರಿಷತ್ (ವಿಎಸ್‌ಪಿ) ನಿಂದ ವ್ಯಕ್ತವಾಗಿದೆ.

ಹಿಂದೂ ಕೋಮುವಾದಿ ಶಕ್ತಿಗಳ ಫ್ಯಾಸಿಸ್ಟ್ ಧೋರಣೆ ಇದರಿಂದ ಬಹಿರಂಗಗೊಂಡಿದೆ.

ಝಬುವಾ ಮತ್ತು ಭಾಗಪತ್‌ನಲ್ಲಿನ ಕ್ರೈಸ್ತ ಮಿಷನರಿಗಳ ಮೇಲಿನ ಹಿಂಸಾಚಾರದ ಪ್ರಕರಣಗಳು ರಾಷ್ಟ್ರವಿರೋಧಿ ಶಕ್ತಿಗಳ ವಿರುದ್ಧದ ಹಿಂದೂ ಯುವಕರ ಆಕ್ರೋಶದ ಪರಿಣಾಮವಾಗಿದೆ ಎಂದು ವಿಹೆಚ್‌ಪಿ ಹೇಳಿದೆ. ಹಲ್ಲೆಗಳನ್ನು ಪ್ರಬಲವಾಗಿ ಸಮರ್ಥಿಸಿಕೊಂಡಿರುವ ಅದು ಮಿಷನರಿಗಳು ದೇಶ ಬಿಟ್ಟು ಹೋಗಬೇಕೆಂದು ಒತ್ತಾಯಿಸಿದೆ.

ಕ್ರೈಸ್ತ ಪಾದ್ರಿಗಳು ಹಿಂದೂಗಳನ್ನು ಕ್ರೈಸ್ತ ಧರ್ಮಕ್ಕೆ ಮತಾಂತರಿಸಿರುವುದರ ಪರಿಣಾಮವಾಗಿ ಇದಾಗಿದೆ ಎಂದು ಮಧ್ಯ ಪ್ರದೇಶದ ಝಬೂವಾದಲ್ಲಿ ಮಿಷನರಿಗಳ ಮೇಲಿನ ಹಲ್ಲೆ ಮತ್ತು ಉತ್ತರ ಪ್ರದೇಶದ ಭಾಗಪತ್‌ನಲ್ಲಿ ನಡೆದ ಘಟನೆಯನ್ನು ಸಮರ್ಥಿಸಿಕೊಂಡಿರುವ ವಿಎಚ್‌ಪಿ ಸಂಸತ್‌ಸದಸ್ಯ ಬಿ.ಎಲ್. ಶರ್ಮಾ 'ಪ್ರೇಮ್' ಹೇಳಿದ್ದಾರೆ.

ಫ್ಯಾಸಿಸ್ಟ್ ಶಕ್ತಿಗಳು ರಾಜ್ಯ ಪ್ರಭುತ್ವದ ನಿಯಂತ್ರಣವನ್ನು ಹೊಂದಿರುವುದರಿಂದ ಹಿಂದೂ ಕೋಮುವಾದಿ ಸಂಘಟನೆಯ ಈ ನಗ್ನ ಸಮರ್ಥನೆ ಮುಂಬರುವ ಅಪಾಯದ ದಿನಗಳ ಮುನ್ಸೂಚನೆ ಆಗಿದೆ.

ಹಿಂದೂ ಮತಾಂಧ ಶಕ್ತಿಗಳು ಹೊಂದಿರುವ ನಿಜವಾದ ಅಜೆಂಡಾ ಏನೆಂಬುದು ವಿಎಚ್‌ಪಿಯ ಪ್ರತಿಪಾದನೆಯಿಂದ ಗೊತ್ತಾಗುತ್ತದೆ.

ಫ್ಯಾಸಿಸ್ಟ್ ಧೋರಣೆಗೆ ವ್ಯಾಪಕ ಪ್ರತಿಭಟನೆ:

ಕ್ರೈಸ್ತ ಮಿಶನರಿಗಳ ಮೇಲಿನ ಆಕ್ರಮಣಗಳನ್ನು ವಿಎಚ್‌ಪಿ ಸಮರ್ಥಿಸಿಕೊಂಡಿರುವುದಕ್ಕೆ ರಾಜಕೀಯ ಪಕ್ಷಗಳು ಮತ್ತು ಬುದ್ಧಿಜೀವಿಗಳಲ್ಲಿ ವ್ಯಾಪಕ ವಿರೋಧ ವ್ಯಕ್ತವಾಗಿದೆ.

ಭಾರತವನ್ನು ಧಾರ್ಮಿಕ ಮೂಲಭೂತವಾದಿ ದೇಶವನ್ನಾಗಿ ಪರಿವರ್ತಿಸುವ ಸಂಘ ಪರಿವಾರದ ಭಾಗ ಇದಾಗಿದೆ ಎಂದು ಅವರು ವರ್ಣಿಸಿದ್ದಾರೆ. ಒಂದು ಸಮುದಾಯದ ವಿರುದ್ಧ ದ್ವೇಷವನ್ನು ಪ್ರಚೋದಿಸಿರುವ ವಿಎಚ್‌ಪಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಎಡಪಕ್ಷಗಳು ಒತ್ತಾಯಿಸಿವೆ.

ಭಾರತದ ಮೇಲೆ ಜಾತ್ಯತೀತವಲ್ಲದ ಮತ್ತು ಪ್ರಜಾಸತ್ತಾತ್ಮಕವಲ್ಲದ ವ್ಯವಸ್ಥೆಯೊಂದನ್ನು ಹೇರುವ ಸಂಘ ಪರಿವಾರದ ವಿಸ್ತೃತ ಯೋಜನೆಯನ್ನು ವಿಎಚ್‌ಪಿ ಹೇಳಿಕೆ ಪ್ರತಿಬಿಂಬಿಸುತ್ತದೆ ಎಂದು ಸಪ್ದರ್ ಹಷ್ಮಿ ಸ್ಮಾರಕ ಟ್ರಸ್ಟ್(ಸಹಮತ್) ಹೇಳಿದೆ.

ಆಕ್ರಮಣಗಳು ಕ್ರೈಸ್ತ ಮಿಶನರಿಗಳ ಚಟುವಟಿಕೆಗಳಿಗೆ ಪ್ರತಿಕ್ರಿಯೆಯಾಗಿದೆ ಎಂಬ ವಿಎಚ್‌ಪಿ ವಾದಕ್ಕೆ ರಾಜಕೀಯ ವಿಶ್ಲೇಷಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ವಾಸ್ತವವಾಗಿ, ಹಿಂದಿನ ತಪ್ಪುಗಳು ಹಾಗೂ ಅನ್ಯಾಯಗಳನ್ನು ಸರಿಪಡಿಸುವ ಹೆಸರಿನಲ್ಲಿ ನಡೆದ ಆಕ್ರಮಣಗಳನ್ನು ಸಮರ್ಥಿಸಿಕೊಳ್ಳುವ ಪ್ರತೀಕಾರ ಸಿದ್ಧಾಂತ ಇದರ ಹಿಂದೆ ಕೆಲಸ ಮಾಡುತ್ತಿದೆ ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ.

ಆಘಾತಕರ ಸಮರ್ಥನೆ: ಸಿಪಿಐ(ಎಂ) ಪಿ.ಬಿ:

ಕ್ರೈಸ್ತ ಸನ್ಯಾಸಿನಿಗಳ(ನನ್) ಮೇಲೆ ನಡೆದ ಅತ್ಯಾಚಾರವನ್ನು ಕೋಮು ಆಧಾರದಲ್ಲಿ ಸಮರ್ಥಿಸಿಕೊಳ್ಳಲು ಯತ್ನಿಸುವುದು ತೀರಾ ಆಘಾತಕಾರಿಯಾದುದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೊ ಹೇಳಿದೆ. ಇಂತಹ ಪ್ರಚೋದಕ ಹಾಗೂ ಉನ್ಮತ್ತ ಹೇಳಿಕೆಗಳ ವಿರುದ್ಧ ಕಠಿಣಕ್ರಮ ಕೈಗೊಳ್ಳುವಂತೆ ಅದು ಒತ್ತಾಯಿಸಿದೆ.

ಒಂದು ಅಲ್ಪಸಂಖ್ಯಾತ ಕೋಮಿನ ವಿರುದ್ಧ ದ್ವೇಷವನ್ನು ಉದ್ರೇಕಿಸುವ ಇಂತಹವರ ವಿರುದ್ಧ ನಮ್ಮ ಶಿಕ್ಷಾ ಕಾನೂನುಗಳಡಿ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿರುವ ಪೊಲಿಟ ಬ್ಯೂರೋ ದೇಶದ ವಿವಿಧ ಭಾಗಗಳಲ್ಲ ಕ್ರಿಶ್ಚಿಯನ್ ಕೋಮಿನ ವಿರುದ್ಧ ಹಲ್ಲೆಗಲನ್ನು ಪ್ರಚೋದಿಸುವ ವಿಹೆಚ್‌ಪಿ - ಭಜರಂಗ ದಳ ವ್ಯಕ್ತಿಗಳ ವಿರುದ್ಧ ದೃಢ ಕ್ರಮಗಳಳನ್ನು ಕೈಗೊಳ್ಳಬೇಕು ಎಂದೂ ಆಗ್ರಹಿಸಿದೆ. ಪ್ರಜಾಪ್ರಭುತ್ವ ಮತ್ತು ಕೋಮುಸೌಹಾರ್ದದಲ್ಲಿ ನಂಬಿಕೆಯಿರುವ ಎಲ್ಲಾ ಜನವಿಭಾಗಗಳೂ ಹಲ್ಲೆಗಳನ್ನು ವಿರೋಧಿಸಬೇಕು ಎಂದು ಸಿಪಿಐ(ಎಂ) ಕರೆ ನೀಡಿದೆ.

ಲೋಕಸಂಚಾರ

ಶರತ್ ಚಂದ್ರ

ಕ್ಯಾಸ್ಟ್ರೋರ ಸಫಲ ಕ್ಯಾರಿಬಿಯನ್ ಪ್ರವಾಸ

ಕ್ಯೂಬಾವನ್ನು ಆರ್ಥಿಕ, ರಾಜತಾಂತ್ರಿಕವಾಗಿ ಒಂಟಿ ಮಾಡುವ ಅಮೆರಿಕದ ಪ್ರಯತ್ನಗಳನ್ನು ಧಿಕ್ಕರಿಸಿ ಫಿಡೆಲ್‌ಕ್ಯಾಸ್ಟ್ರೋ ಇತ್ತೀಚೆಗೆ ತಮ್ಮ ನೆರೆಹೊರೆಯ ಕ್ಯಾರಿಬಿಯನ್ ದೇಶಗಳಲ್ಲಿ ಸಫಲ ಪ್ರವಾಸ ನಡೆಸಿದರು. ಕ್ಯಾಸ್ಟ್ರೋರ ಪ್ರವಾಸ ಕ್ಯೂಬಾ ಮತ್ತು ನೆರೆಹೊರೆಯ ಕ್ಯಾರಿಬಿಯನ್ ದೇಶಗಳೊಂದಿಗೆ ರಾಜಕೀಯ ಮತ್ತು ವಾಣಿಜ್ಯ ಸಂಬಂಧಗಳನ್ನು ಗಟ್ಟಿಗೊಳಿಸಿದೆ. ಕ್ಯಾಸ್ಟ್ರೋ ಭೇಟಿ ಇತ್ತ ಎಲ್ಲಾ ಕ್ಯಾರಿಬಿಯನ್ ದೇಶಗಳಲ್ಲಿ ಅವರಿಗೆ ಭವ್ಯ ಸ್ವಾಗತ ನೀಡಲಾಯಿತು. ಅಮೆರಿಕ ಕ್ಯಾರಿಬಿಯನ್ ದೇಶಗಳ ಬೆಳವಣಿಗೆ ಬಗ್ಗೆ ತೋರಿರುವ ಅಸಡ್ಡೆ, ನಿರ್ಲಕ್ಷ್ಯ ಮತ್ತು ಕ್ಯೂಬಾದ ಬಗ್ಗೆ ಅಮೆರಿಕದ ಆಕ್ರಮಕ ನೀತಿ ಎರಡೂ ಸೇರಿ ಕ್ಯಾರಿಬಿಯನ್ ದೇಶಗಳಲ್ಲಿ ಕ್ಯೂಬಾ-ಪರ ಆದರ ಹೆಚ್ಚಿದೆ.

ಜಮೈಕಾದ ಮೊಂಟೆಗೊ ಬೇ ಎಂಬ ಪಟ್ಟಣದಲ್ಲಿ ನಡೆದ ರ್‍ಯಾಲಿಯಲ್ಲಿ ಅಲ್ಲಿನ ಪ್ರಧಾನಿ ಕ್ಯೂಬಾ ಮೇಲೆ ಅಮೆರಿಕದ ದಿಗ್ಬಂಧನವನ್ನು ಖಂಡಿಸಿದರು. ಅದೇ ರ್‍ಯಾಲಿಯಲ್ಲಿ ಕ್ಯಾಸ್ಟ್ರೋಗೆ ಆ ಪಟ್ಟಣದ ಬೀಗದ ಕೈ ಕೊಡಲಾಯಿತು. ಜಮೈಕಾದ ಮಾಜಿ ಪ್ರಧಾನಿ ಮಿಶೆಲ್ ಮ್ಯಾನಲೀ ಅವರ ಸ್ಮಾರಕಕ್ಕೆ ಕ್ಯಾಸ್ಟ್ರೋ ಭೇಟಿ ನೀಡಿದರು. 1970 ರ ದಶಕದಲ್ಲಿ ಮ್ಯಾನಲೀ ಜಮೈಕಾದ ಪ್ರಧಾನಿಯಾಗಿದ್ದಾಗ ಕ್ಯೂಬಾದ ಜತೆ ಅವರು ಬೆಳೆಸಿದ ಸೌಹಾರ್ದ ಸಂಬಂಧದಿಂದಾಗಿ ಅಮೆರಿಕದ ಕೋಪಕ್ಕೆ ಪಾತ್ರರಾಗಿದ್ದರು.

ಬಾರ್ಬಡೋಸ್‌ನಲ್ಲಿ ಕ್ಯಾಸ್ಟ್ರೋ ವಿಮೋಚನಾ ದಿನದ ಉತ್ಸವದಲ್ಲಿ ಪಾಲ್ಗೊಂಡರು. ಎಲ್ಲಾ ಕ್ಯಾರಿಬಿಯನ್ ದೇಶಗಳಲ್ಲಿ ಆಚರಿಸಲಾಗುವ ಈ ವಿಮೋಚನಾ ದಿನದ ಉತ್ಸವ 1830 ರಲ್ಲಿ ಬ್ರಿಟಿಶ್ ಆಡಳಿತ ಗುಲಾಮ ಪದ್ಧತಿ ರದ್ದು ಮಾಡಿದ ದಿನ. ಅಕ್ಟೋಬರ್ 76 ರಲ್ಲಿ ಕ್ಯೂಬಾ ವಿಮಾನವೊಂದರ ಮೇಲೆ ಅಮೆರಿಕದಲ್ಲಿ ವಾಸಿಸಿರುವ ಪ್ರತಿಗಾಮಿ ಭಯೋತ್ಪಾದಕ ಗುಂಪುಗಳು ನಡೆಸಿದ ಭಯೋತ್ಪಾದಕ ಕೃತ್ಯದಲ್ಲಿ ಮಡಿದ 73 ಜನರ ಸಮಾಧಿಗೆ ಕ್ಯಾಸ್ಟ್ರೋ ಭೇಟಿ ನೀಡಿ ಶ್ರದ್ಧಾಂಜಲಿ ಅರ್ಪಿಸಿದರು.

ಕ್ಯಾಸ್ಟ್ರೋರವರ ಗ್ರೆನಾಡಾ ಭೇಟಿ ಅತ್ಯಂತ ಮಹತ್ವದ್ದಾಗಿತ್ತು. 15 ವರ್ಷಗಳ ಹಿಂದೆ ಕ್ಯೂಬನ್ ಮತ್ತು ಅಮೆರಿಕನ್ ಸೈನ್ಯ ಈ ದೇಶದಲ್ಲಿ ಸಂಘರ್ಷಕ್ಕೆ ಇಳಿದಿದ್ದವು. ಅಲ್ಲಿನ ವಿಮಾನ ನಿಲ್ದಾಣದಲ್ಲಿ ಕ್ಯೂಬನ್ ಕಾರ್ಮಿಕರು ಮಾಡಿದ ಕೆಲಸದ ಸ್ಮರಣಾರ್ಥ ಒಂದು ಫಲಕವನ್ನು ಕ್ಯಾಸ್ಟ್ರೋ ಇರಿಸಿದರು.

ಅಮೆರಿಕದ ವಿರೋಧ ಲೆಕ್ಕಿಸದೆ ಕ್ಯಾರಿಬಿಯನ್ ಇಂಗ್ಲೀಷ್ ಮಾತನಾಡುವ 16 ದೇಶಗಳು ಕ್ಯೂಬಾದ ಜತೆ ಘನಿಷ್ಠ ಸಂಬಂಧ ಬೆಳೆಸುತ್ತಿವೆ. ಹಲವಾರು ದೇಶಗಳ ಮುಖ್ಯಸ್ಥರು ಕಳೆದ ಒಂದು ವರ್ಷದಲ್ಲಿ ಕ್ಯೂಬಾಕ್ಕೆ ಭೇಟಿ ನೀಡಿದ್ದಾರೆ. ಕ್ಯಾರಿಕಾಮ್ ಎಂಬ ವಾಣಿಜ್ಯ ಕೂಟಕ್ಕೆ ಕ್ಯೂಬಾವನ್ನು ವೀಕ್ಷಕ ಸದಸ್ಯರಾಗಿ ತೆಗೆದುಕೊಂಡಿದ್ದಾರೆ.

ದಲೈಲಾಮಾ ಮತ್ತು ಟಿಬೆಟ್ ಪ್ರತ್ಯೇಕತಾ ಚಳುವಳಿಗೆ ಸಿಐಎ ಬೆಂಬಲ - ದಾಖಲೆಗಳು

ಕಮ್ಯುನಿಸ್ಟ್ ಸರ್ಕಾರಗಳಿಗೆ ಕಿರುಕುಳ ಕೊಡಲು, ಸಾಧ್ಯವಾದರೆ ಬುಡಮೇಲು ಮಾಡುವುದು ಶೀತಲ ಸಮರದ ಅವಧಿಯಲ್ಲಿ ಸಿಐಎಯ ಮುಖ್ಯ ಕೆಲಸ ಎಂದು ಎಲ್ಲರಿಗೂ ಗೊತ್ತು. ದಲೈಲಾಮಾ ಮತ್ತು ಟಿಬೆಟ್ ಪ್ರತ್ಯೇಕತಾ ಚಳುವಳಿಗೆ ಸಿಐಎ ಬೆಂಬಲ ನೀಡುತ್ತಿತ್ತು ಎಂಬುದು ಬಹಿರಂಗ ಗುಟ್ಟು. ಆದರೆ ಈಗ 30 ವರ್ಷಗಳ ನಂತರ ಬಹಿರಂಗಗೊಳಿಸಲ್ಪಡುತ್ತಿರುವ ಅಮೆರಿಕ ಸರ್ಕಾರ, ಸಿಐಎಯ ಆಂತರಿಕ ರಹಸ್ಯ ದಾಖಲೆಗಳು ಇದನ್ನು ಪುಷ್ಟಿಗೊಳಿಸಿವೆ ವಿವರಗಳೊಂದಿಗೆ. ಯಾರಿಗಾದರೂ ದಲೈಲಾಮಾರ 'ಸರ್ಕಾರಕ್ಕೆ' ವರ್ಷಕ್ಕೆ 1.8 ಲಕ್ಷ ಡಾಲರುಗಳಲ್ಲದೆ, ಪ್ರತ್ಯೇಕತಾವಾದಿ ಟಿಬೆಟ್ ಗೆರಿಲ್ಲಾಗಳಿಗೆ 17 ಲಕ್ಷ ಡಾಲರುಗಳನ್ನು ವೆಚ್ಚ ಮಾಡುತ್ತಿತ್ತು. ನೇಪಾಳದಲ್ಲಿ ಟಿಬೇಟಿಯನ್ ಗೆರಿಲ್ಲಾಗಳಿಗೆ ಒಂದು ಕ್ಯಾಂಪು, ಅಮೆರಿಕದ ಕೊಲೆರಾಡೊದಲ್ಲಿ ಗೆರಿಲ್ಲಾ ಹೋರಾಟಕ್ಕೆ ತರಬೇತಿ ಶಿಬಿರ, ನ್ಯೂಯಾರ್ಕ್ ಜಿನೇವಾಗಳಲ್ಲಿ 'ಟಿಬೆಟ್ ಗೃಹ'ಗಳು ಅಮೆರಿಕದ ಕಾರ್ನೆಲ್ ವಿಶ್ವವಿದ್ಯಾಲಯದಲ್ಲಿ ಟಿಬೇಟ್ ಕಾರ್ಯಕರ್ತರಿಗೆ ಶಿಕ್ಷಣ, ಟಿಬೇಟಿನಲ್ಲಿ ಬೇಹುಗಾರಿಕೆಗೆ ತರಬೇತಿ ವ್ಯವಸ್ಥೆ - ಇವೆಲ್ಲಾ ಸಿಐಎದ ಕಾರ್ಯಕ್ರಮಗಳಾಗಿದ್ದವು. ದಲೈಲಾಮಾರೇ ಈ ಬಗ್ಗೆ 1990 ರಲ್ಲಿ ಪ್ರಕಟಿತ ತಮ್ಮ ಆತ್ಮಕಥೆಯಲ್ಲಿ ಸಿಐಎ ಬೆಂಬಲದ ಬಗ್ಗೆ ಹೇಳುತ್ತಾ ಟಿಬೆಟ್ ಸ್ವಾತಂತ್ರ್ಯದ ಬಗ್ಗೆ ಅವರಿಗೇನೂ ಕಾಳಜಿ ಇರಲಿಲ್ಲ, ಕಮ್ಯುನಿಸ್ಟ್ ಸರಕಾರಗಳನ್ನು ಬುಡಮೇಲು ಮಾಡುವುದರಲ್ಲಿ ಮಾತ್ರ ಅವರಿಗೆ ಆಸಕ್ತಿ ಇದ್ದದ್ದು' ಎಂದಿದ್ದಾರೆ.

ಜಾಗತೀಕರಣ ಇಂದು ವಿಕಾಸಶೀಲ ದೇಶಗಳಲ್ಲಿ ಬೆಳವಣಿಗೆ ಮೀಸಲಾದ ಸಂಪನ್ಮೂಲಗಳನ್ನು ಕಡಿತ ಮಾಡುತ್ತಿದೆ. ಅಭಿವೃದ್ಧ ದೇಶಗಳಲ್ಲೂ ಇದು ನಡೆಯುತ್ತಿದೆ. ಈ ಸಂಪನ್ಮೂಲಗಳು ಅನಗತ್ಯ ಬಳಕೆಗೆ ಪೋಲಾಗುತ್ತಿದೆ. ಈಗಲೂ ಎಲ್ಲಾ ಜನತೆಯ ಸರ್ವತೋಮುಖ ಬೆಳವಣಿಗೆಗೆ ಬೇಕಾದಷ್ಟು ಸಂಪನ್ಮೂಲಗಳಿವೆ. ಆದರೆ ಅವು ಬೆಳವಣಿಗೆಗೆ ಲಭ್ಯವಿಲ್ಲ. ಇದೇ ಜಾಗತೀಕರಣದ ಸಾರಾಂಶ. ಈ ಕೆಳಗೆ ಕೆಲವು ತುಲನಾತ್ಮಕ ಅಂಕೆ ಸಂಖ್ಯೆಗಳಿವೆ.

ಎಲ್ಲರಿಗೂ ಶಿಕ್ಷಣಕ್ಕೆ ಬೇಕಾದ ಸಂಪನ್ಮೂಲಗಳು	6 ಶತಕೋಟಿ ಡಾಲರುಗಳು
ಅಮೆರಿಕಾದಲ್ಲಿ ಶೃಂಗಾರ ಸಾಧನಗಳ ಮೇಲೆ ವೆಚ್ಚ	8 ಶತಕೋಟಿ ಡಾಲರುಗಳು
ಎಲ್ಲರಿಗೂ ನೀರು, ಶೌಚ ವ್ಯವಸ್ಥೆಗೆ ಬೇಕಾದ ಸಂಪನ್ಮೂಲ	9 ಶತಕೋಟಿ ಡಾಲರುಗಳು
ಯುರೋಪಿನಲ್ಲಿ ಐಸ್-ಕ್ರೀಂ ವೆಚ್ಚ	11 ಶತಕೋಟಿ ಡಾಲರುಗಳು
ಎಲ್ಲಾ ಮಹಿಳೆಯರಿಗೆ ಆರೋಗ್ಯ, ಆರೈಕೆಗೆ ಬೇಕಾದ ಸಂಪನ್ಮೂಲ	12 ಶತಕೋಟಿ ಡಾಲರುಗಳು
ಯುರೋಪು ಮತ್ತು ಅಮೆರಿಕದಲ್ಲಿ ಶೃಂಗಾರ ಸಾಧನಗಳು	12 ಶತಕೋಟಿ ಡಾಲರುಗಳು
ಎಲ್ಲರಿಗೂ ಆರೋಗ್ಯ ಮತ್ತು ಪೌಷ್ಟಿಕ ಆಹಾರ ಒದಗಿಸಲು ಬೇಕಾದ ಸಂಪನ್ಮೂಲಗಳು	13 ಶತಕೋಟಿ ಡಾಲರುಗಳು
ಸಾಕು ಪ್ರಾಣಿಗಳ ಆಹಾರ ವೆಚ್ಚ ಯುರೋಪು, ಅಮೆರಿಕಗಳಲ್ಲಿ	17ಶತಕೋಟಿ ಡಾಲರುಗಳು
ಜಪಾನಿನಲ್ಲಿ ವ್ಯಾಪಾರದಲ್ಲಿ ಗಿರಾಕಿಗಳ ಮನರಂಜನೆ ವೆಚ್ಚ	35 ಶತಕೋಟಿ ಡಾಲರುಗಳು
ಯುರೋಪಿನಲ್ಲಿ ಸಿಗರೇಟಿನ ವೆಚ್ಚ	50 ಶತಕೋಟಿ ಡಾಲರುಗಳು
ಯುರೋಪಿನಲ್ಲಿ ಮಾದಕ ಪಾನೀಯಗಳಿಗೆ ವೆಚ್ಚ	105 ಶತಕೋಟಿ ಡಾಲರುಗಳು
ಜಗತ್ತಿನಲ್ಲಿ ಮಾದಕ ದ್ರವ್ಯಗಳಿಗೆ ವೆಚ್ಚ	400 ಶತಕೋಟಿ ಡಾಲರುಗಳು
ಜಗತ್ತಿನಲ್ಲಿ ಮಿಲಿಟರಿ ವೆಚ್ಚ	780 ಶತಕೋಟಿ ಡಾಲರುಗಳು

ಅಲ್ಬೇನಿಯಾದಲ್ಲಿ ಆಂತರಿಕ ಸಮರ

ಕಳೆದ ವರ್ಷ ಒಂದು ಹಂತದ ಆಂತರಿಕ ಸಮರ ಕಂಡ ಅಲ್ಬೇನಿಯಾ ಪುನಃ ಇನ್ನೊಂದು ಆಂತರಿಕ ಸಮರದ ಹೊಸ್ತಿಲಲ್ಲಿ ಇದೆ.

ಕೆಲವು ದಿನಗಳ ಹಿಂದೆ ಅಲ್ಬೇನಿಯಾದ ಸರ್ಕಾರವನ್ನು ಸಶಸ್ತ್ರ ಕ್ಷಿಪ್ರಕ್ರಾಂತಿಯಲ್ಲಿ ಉರುಳಿಸುವ ಪ್ರಯತ್ನಗಳಾಯಿತು. ಆಗಿನಿಂದ ಸರ್ಕಾರದ ಪಡೆಗಳು ಹಾಗೂ ಸಶಸ್ತ್ರ ವಿರೋಧಿ ಪಡೆಗಳ ನಡುವೆ ಸಂಘರ್ಷದಲ್ಲಿ ತೊಡಗಿವೆ.

90 ರ ದಶಕದ ಆರಂಭದಲ್ಲಿ ಅಲ್ಬೇನಿಯಾದ ಕಮ್ಯುನಿಸ್ಟ್ ಸರ್ಕಾರ ಪತನಗೊಂಡು, ಸಾಲಿ ಬೇರಿಶಾ ಎಂಬಾತನ ನಾಯಕತ್ವದಲ್ಲಿ ಬಂಡವಾಳ ಶಾಹಿ-ಪರ ಡೆಮಾಕ್ರಾಟಿಕ್-ಪಾರ್ಟಿ ಅಧಿಕಾರಕ್ಕೆ ಬಂದಿತ್ತು. ಈ ಪಕ್ಷದ ನಾಯಕರ ಪೂರ್ಣ ಬೆಂಬಲದಿಂದ ನಡೆಯುತ್ತಿದ್ದ 'ಪಿರಾಮಿಡ್-ಸ್ಕೀಮ್ಸ್' ಎಂಬ ಖಾಸಗಿ ಹಣಕಾಸಿನ ಸಂಸ್ಥೆಯ ಹಗರಣದಿಂದ ತಮ್ಮ ಎಲ್ಲಾ ಉಳಿತಾಯ ಪೂರಾ ಕಳೆದುಕೊಂಡು ಜನ ದಂಗೆ ಎದ್ದಿದ್ದರು - ಕಳೆದ ವರ್ಷ. ಆಗ ಸಾಲಿ ಬೇರಿಶಾ ಸರ್ಕಾರ ಬಿದ್ದು, ಮಾಜಿ ಕಮ್ಯುನಿಸ್ಟರ ನಾಯಕತ್ವದ ಸರ್ಕಾರ ಬಂದಿತ್ತು. ಈಗಿನ ಪ್ರಧಾನ ಮಂತ್ರಿ ಫಾಟೊಸ್ ನಾನೊ ಆಗಲೇ ಅಧಿಕಾರಕ್ಕೆ ಬಂದಿದ್ದು.

ಈಗ ಅದೇ ಸಾಲಿ ಬೇರಿಶಾ ಯುರೋಪಿನಲ್ಲಿ ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿಯ ಕುಮ್ಮಕ್ಕಿನಲ್ಲಿ ಬೆಳೆಯುತ್ತಿರುವ ಕುರುಡು ರಾಷ್ಟ್ರೀಯವಾದದ ಲಾಭ ತಳೆದು ಆಂತರಿಕ ಸಮರದ ಸನ್ನಿವೇಶ ಉಂಟು ಮಾಡಿದ್ದಾರೆ-ಅಧಿಕಾರಕ್ಕೆ ವಾಪಸು ಬರಲು. ಮಾಜಿ ಯುಗೋಸ್ಲಾವಿಯ ಒಕ್ಕೂಟದ ಕೊಸೊವೊ, ಮಸೆಡಾನಿಯಾಗಳಲ್ಲಿ ಅಲ್ಬೇನಿಯನ್ ಜನಾಂಗ ಮೂಲದ ಬಹಳ ಜನ ವಾಸಿಸುತ್ತಿದ್ದಾರೆ. ಯುಗೋಸ್ಲಾವಿಯದಲ್ಲಿ ಸೋಶಲಿಸ್ಟ್ ವ್ಯವಸ್ಥೆ ಬಿದ್ದು ಹೋದ ಹಿನ್ನೆಲೆಯಲ್ಲಿ, ಆರಂಭವಾಗಿರುವ ಜನಾಂಗೀಯ ಕಲಹದಲ್ಲಿ ಈ ಅಲ್ಬೇನಿಯರು ಪ್ರತ್ಯೇಕ ದೇಶ ಕೇಳುತ್ತಿದ್ದಾರೆ. ಸಾಲಿ ಬೇರಿಶಾ (ಬಹುಶಃ ಆತನ ಹಿಂದಿರುವ ಸಾಮ್ರಾಜ್ಯಶಾಹಿ) ಅವರಿಗೆ ಕುಮ್ಮಕ್ಕು, ಬೆಂಬಲ ಕೊಡುತ್ತಿದ್ದಾರೆ. ಅಲ್ಬೇನಿಯಾದ ಕೆಲವು ಕಡೆ ಅವರಿಗೆ ಭಯೋತ್ಪಾದಕ ತರಬೇತಿ ಕೊಡಲಾಗುತಿದೆಯಂತೆ. ಮಾಜಿ ಯುಗೋಸ್ಲಾವಿಯಾದ ಅಲ್ಬೇನಿಯನ್ ಬಹುಸಂಖ್ಯಾತರಿರುವ ಪ್ರದೇಶ ಸೇರಿಸಿ, ಬೃಹತ್ ಅಲ್ಬೇನಿಯಾದ ಘೋಷಣೆ ಎಬ್ಬಿಸಿದ್ದಾರೆ-ಬೇರಿಶಾ. ಈಗಿನ ಅಲ್ಬೇನಿಯಾದ ಒಳಗೂ ಜನಾಂಗೀಯ ಆಧಾರದ ಮೇಲೆ ಗಲಭೆ ಎಬ್ಬಿಸಿದ್ದಾರೆ. ಇತ್ತೀಚೆಗೆ ಬೇರಿಶಾರ ಪಕ್ಷದ ಒಬ್ಬ ಪಾರ್ಲಿಮೆಂಟ್ ಸದಸ್ಯ ಹತ್ಯೆಯಾದಾಗ, ಅದನ್ನು ಸರ್ಕಾರದ ಮೇಲೆ ಆಪಾದಿಸಿ ಭಾರಿ ದಂಗೆ ಸಂಘಟಿಸಲಾಯಿತು. ಈ ಸಶಸ್ತ್ರ ದಂಗೆಯಲ್ಲಿ ರೇಡಿಯೋ ಸ್ಟೇಷನ್, ಸರ್ಕಾರಿ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಯಿತು. ಸರ್ಕಾರವನ್ನು ಸಶಸ್ತ್ರ ದಂಗೆಯಿಂದ ಉರುಳಿಸುವುದು ಬೇರಿಶಾ ಉದ್ದೇಶವಾಗಿತ್ತು. ಸದ್ಯಕ್ಕೆ ಇದು ವಿಫಲವಾಗಿದ್ದರೂ, ಅಲ್ಬೇನಿಯಾದಲ್ಲಿ ಶಾಂತಿ ನೆಲೆಸಲಾಗದಂತೆ ಆಂತರಿಕ ಸಮರ ಆರಂಭವಾಗಿದೆ. ಬಿಕ್ಕಟ್ಟು ಅಂತರ್‍ರಾಷ್ಟ್ರೀಯ ಆಯಾಮ ಪಡೆಯುವುದರಿಂದ ಇದು ಬರಿಯ ಆಂತರಿಕ ಸಮರವಾಗಿಯೂ ಉಳಿದಿಲ್ಲ. ಬೃಹತ್ ಅಲ್ಬೇನಿಯಾದ ಬದಲು ಈಗಿನ ಅಲ್ಬೇನಿಯಾ ಛಿದ್ರಛಿದ್ರವಾದರೂ ಆಶ್ಚರ್ಯವಿಲ್ಲ.

ತುಮಕೂರು

ಶಿಕ್ಷಣದ ವ್ಯಾಪಾರೀಕರಣದ ವಿರುದ್ಧ ಎಸ್.ಎಫ್.ಐ ಪ್ರತಿಭಟನೆ

ಇತ್ತೀಚಿನ ದಿನಗಳಲ್ಲಿ ಶಿಕ್ಷಣದ ಖಾಸಗೀಕರಣ, ವ್ಯಾಪಾರೀ ಕರಣವನ್ನು ವಿರೋಧಿಸಿ ಎಸ್.ಎಫ್.ಐ. ನಗರದಲ್ಲಿ ಪ್ರತಿಭಟನಾ ಮೆರವಣಿಗೆಯನ್ನು ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿತು.

ಈ ಸಂದರ್ಭದಲ್ಲಿ ಎಸ್.ಎಫ್.ಐ. ಜಿಲ್ಲಾ ಸಂಘಟನಾ ಸಮಿತಿ ಸಂಚಾಲಕ ಎಚ್.ಎಂ. ವಸಂತಕುಮಾರ್ ಮಾತನಾಡಿ ಶೈಕ್ಷಣಿಕ ಕ್ಷೇತ್ರದಲ್ಲಿ ಹೆಚ್ಚುತ್ತಿರುವ ಖಾಸಗೀಕರಣ ವ್ಯಾಪಾರೀಕರಣ ನಿಲ್ಲಬೇಕು, ಖಾಸಗಿ ವೈದ್ಯಕೀಯ ಕಾಲೇಜು ಗಳನ್ನು ತೆರೆಯಲು ಅನುಮತಿ ನೀಡಬಾರದು ಮತ್ತು ಹೆಚ್ಚುತ್ತಿರುವ ಪರಿಕ್ಷಾ ಶುಲ್ಕಗಳನ್ನು ಇಳಿಸಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದ್ದರು.

ಜಿಲ್ಲಾ ಬೀಡಿ ಕಾರ್ಮಿಕರ ಸಂಘದ ಕಾರ್ಯದರ್ಶಿ ಸೈಯದ್ ಮುಜೀಬ್ ಮಾತನಾಡಿ ಈಗಿನ ಕೇಂದ್ರ ಸರ್ಕಾರ ಸೃಷ್ಟಿಸುತ್ತಿರುವ ನಿರುದ್ಯೋಗ ಸಮಸ್ಯೆ ಮತ್ತು ಶಿಕ್ಷಣದ ಖಾಸಗೀಕರಣದಿಂದಾಗಿ ವಿದ್ಯಾರ್ಥಿಗಳು ವಿಛಿದ್ರಕಾರಿ ಶಕ್ತಿಗಳಾಗಿ ಬೆಳೆಯುತ್ತಿದ್ದಾರೆ ಎಂದರು.

ಅಂಗನವಾಡಿ ನೌಕರರ ಸಂಘದ ಅಲ್ಲಾಬಕಾಷ್ ಮತ್ತು ಎಸ್.ಎಫ್.ಐ ನಗರ ಸಮಿತಿ ಕಾರ್ಯದರ್ಶಿ ರಮೇಶ್ ಮಾತನಾಡಿದರು.

ಪ್ರತಿಭಟನಾ ಮೆರವಣಿಗೆಯ ನೇತೃತ್ವವನ್ನು ಅಶೋಕ್, ಚೆಲುವರಾಜ್ ನಾಗಭೂಷಣ್ ವಹಿಸಿದ್ದರು.

ನಗರದ ಅವ್ಯವಸ್ಥೆ ಸರಿಪಡಿಸಲು ಒತ್ತಾಯಿಸಿ ಪ್ರತಿಭಟನೆ

ಈ ಕೆಳಗಿನ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಸೆ.16 ರಂದು ಸಿಪಿಐ(ಎಂ) ಹಾಗು ಸಿಐ.ಟಿ.ಯು ನ ನೂರಾರು ಕಾರ್ಯಕರ್ತರು ನಗರಸಭೆಯ ಮುಂಭಾಗ ಪ್ರತಿಭಟನೆ ನಡೆಸಿದರು.

ಸಿಪಿಐ(ಎಂ) ನ ಕಾಂ|| ದಸ್ತಗೀರ್. ಬಿ. ಉಮೇಶ್ ಬೀಡಿ ಕಾರ್ಮಿಕರ ಸಂಘದ ಮುಜೀಬ್, ಅಹ್ಮದಿ ಅಫ್ಸರ್, ಎಸ್.ಎಫ್.ಐ .ನ ಡಿ.ಅಶೋಕಕುಮಾರ್, ಲಕ್ಷ್ಮೀಕಾಂತ್ ಕಾರ್ಮಿಕ ಮುಖಂಡರುಗಳು ಮುಂತಾದವರು ಮಾತನಾಡಿದರು.

ಅವ್ಯವಸ್ಥೆಯ ವಿರುದ್ಧ ಹಲವಾರು ಬಾರಿ ನಗರಸಭೆಗೆ ಅರ್ಜಿ ನೀಡಿದ್ದರೂ ಸಹ ಯಾವುದೇ ರೀತಿಯ ಪ್ರಯೋಜನವಾಗಿರುವುದಿಲ್ಲ. ಈ ಮನವಿಯ ಮೂಲಕ ಬೇಡಿಕೆಗಳನ್ನು ನಗರ ಸಭೆಯ ಗಮನಕ್ಕೆ ತರುತ್ತಾ ಹೊಸ ಅಧ್ಯಕ್ಷರು, ಉಪಾಧ್ಯಕ್ಷರು ಶೀಘ್ರದಲ್ಲಿ ಈ ಸಮಸ್ಯೆಗಳನ್ನು ಬಗೆಹರಿಸಲು ಮುಂದಾಗಬೇಕೆಂದು ಸಿಪಿಐ(ಎಂ) ಆಗ್ರಹಿಸಿದೆ.

1. ನಗರದ ಪ್ರಮುಖ ರಸ್ತೆಗಳ ದುರಸ್ತಿ ಹಾಗೂ ಡಾಂಬರೀಕರಣ, ಶೀಘ್ರವೇ ಕೈ ಗೊಳ್ಳಬೇಕು.
2. ಕೊಳಚೆ ಪ್ರದೇಶಗಳು ಮತ್ತು ನಗರ ಹೊಸ ಬಡಾವಣೆ ಪೊಲೀಸ್ ಠಾಣೆಗೆ ರಸ್ತೆ ಸಂಪರ್ಕ ನಗರಕ್ಕೆ ಒಳಚರಂಡಿ ವ್ಯವಸ್ಥೆ, ಹಾಗೂ ಬೀದಿ ದೀಪಗಳನ್ನು ಸುಸ್ಥಿತಿಯಲ್ಲಿಡಬೇಕು.
3. ಮಳೆ ಬಂದರೆ ಕೆಸರು ಗದ್ದೆಯಂತಾಗುವ ನಗರದ ಫುಟ್‌ಪಾತ್ ವ್ಯವಸ್ಥೆಯನ್ನು ಸರಿಪಡಿಸಿ ಹಾಸು ಕಲ್ಲುಗಳನ್ನು ಹಾಕಿ ವ್ಯವಸ್ಥೆಗೊಳಿಸಬೇಕು.
4. ನಗರ ಸ್ವಚ್ಛತೆಗೆ ಅಗತ್ಯವಾದ ಪೌರ ಸೇವಾ ನೌಕರರನ್ನು ನೇಮಿಸಿ ಅದಕ್ಕೆ ತಕ್ಕಂತೆ ಉಪಕರಣಗಳನ್ನು ಖರೀದಿಸಿ, ನಗರ ಸೌಂದರ್ಯ ಅಭಿವೃದ್ಧಿಪಡಿಸಬೇಕು.
5. ಸಾರ್ವಜನಿಕ ಸಂಚಾರವಿರುವ ರಸ್ತೆಗಳಲ್ಲಿ ಮಲ ಮೂತ್ರಾಲಯಗಳನ್ನು ನಿರ್ಮಿಸಬೇಕು. ಹಾಗೂ ಹಾಲಿ ಇರುವ ಮೂತ್ರಾಲಯಗಳನ್ನು ಸ್ವಚ್ಛಗೊಳಿಸಬೇಕು.

ಸ್ನಾತಕೋತ್ತರ ಪದವಿಯಲ್ಲಿ ಪ್ರಥಮ ರ್‍ಯಾಂಕ್ ಎಸ್.ಎಫ್.ಐ ಅಭಿನಂದನೆ

ಭಾರತ ವಿದ್ಯಾರ್ಥಿ ಫೆಡರೇಶನ್ ಎಸ್.ಎಫ್.ಐ. ನ ಮಾಜಿ ಜಿಲ್ಲಾ ಸಹ ಕಾರ್ಯದರ್ಶಿಗಳು ತುಮಕೂರು ವಿಜ್ಞಾನ ಕೇಂದ್ರ, ಭಾರತ ಜ್ಞಾನ ವಿಜ್ಞಾನ ಸಮಿತಿಗಳ ಸಕ್ರಿಯ ಕಾರ್ಯಕರ್ತರೂ ಆದ ಸಿ.ಜಿ.ಯೋಗೀಶರವರು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಮೆರೈನ್ ಜಿಯಾಲಜಿ ವಿಭಾಗದ ದ್ವಿತೀಯ ಎಂ.ಎಸ್ಸಿ ಪರೀಕ್ಷೆಯಲ್ಲಿ ಮಂಗಳೂರು ವಿ.ವಿ.ಯಲ್ಲಿ ಪ್ರಥಮ ರ್‍ಯಾಂಕ್ ಪಡೆದಿರುತ್ತಾರೆ.

ಸಾಮಾಜಿಕ ಕಾಳಜಿಯೊಂದಿಗೆ ಸಂಘಟನೆಗಳಲ್ಲಿ ಸಕ್ರಿಯವಾಗಿ ದುಡಿಯುತ್ತಾ ಎಸ್.ಎಫ್.ಐ. ಘೋಷಣೆಯಾದ "ಅಭ್ಯಾಸ ಮತ್ತು ಹೋರಾಟ"ವನ್ನು ಕಾರ್ಯಗತಗೊಳಿಸಿರುವ ಇವರು ನಮ್ಮ ಹೆಚ್ಚಿನ ಸಂಗಾತಿಗಳಿಗೆ ಆದರ್ಶವಾಗುತ್ತದೆಂದು ಎಸ್.ಎಫ್.ಐ. ಜಿಲ್ಲಾ ಸಮಿತಿ ಅಭಿನಂದಿಸಿದೆ.

ಇದೇ ಸಂದರ್ಭದಲ್ಲಿ ತುಮಕೂರು ವಿಜ್ಞಾನ ಕೇಂದ್ರ, ಬಿ.ಜಿ.ವಿ.ಎಸ್. ಡಿ.ವೈ.ಎಫ್.ಐ. ಮತ್ತಿತರ ಸಂಘಟನೆಗಳು ಯೋಗೀಶರನ್ನು ಅಭಿನಂದಿಸಿವೆ.

ಪಡಿತರ ಚೀಟಿಗೆ 200 ರೂಗಳ ಎನ್.ಎಸ್.ಸಿ ಕಡ್ಡಾಯವಿಲ್ಲ

ಪಡಿತರ ಚೀಟಿ ಪಡೆಯುವ ಸಂಭಂಧ ಕಡ್ಡಾಯವಾಗಿ 200 ರೂಗಳ ಉಳಿತಾಯ ಸರ್ಟಿಫಿಕೇಟ್ ಪಡೆಯಲೇಬೇಕೆಂಬ ಅಂಶವನ್ನು ಸಡಿಲಿಸಿ. ಕಾರ್ಮಿಕರಿಗೆ ರಿಯಾಯಿತಿ ನೀಡುವುದಾಗಿ ಜಿಲ್ಲಾ ಕೇಂದ್ರ ಸ್ಥಾನಿಕ ಸಹಾಯಕಾಧಿಕಾರಿಗಳಾದ ಸುಬ್ಬರಾವ್‌ರವರು ಜಿಲ್ಲಾಧಿಕಾರಿ ಕಛೇರಿ ಎದುರು ನೆರೆದಿದ್ದ ಸಿ.ಪಿ.ಐ(ಎಂ) ಹಾಗು ಸಿ.ಐ.ಟಿ.ಯು ನ ಕಾರ್ಯಕರ್ತರಿಗೆ ಭರವಸೆ ನೀಡಿದರು. ಸೆ. 16 ರಂದು ತುಮಕೂರು ಜಿಲ್ಲಾ ಬೀಡಿ ಕಾರ್ಮಿಕರ ಸಂಘ ಸಿ.ಐ.ಟಿ.ಯು ಹಾಗೂ ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಗಳು ಜಂಟಿಯಾಗಿ ಹಮ್ಮಿಕೊಳ್ಳಲಾಗಿದ್ದ ಪ್ರತಿಭಟನಾ ಕಾರ್ಯಕ್ರಮದಲ್ಲಿ ಜಿಲ್ಲಾಡಳಿತ ಕಡ್ಡಾಯ ಗೊಳಿಸಿದ್ದ 200 ರೂಗಳ ಉಳಿತಾಯ ಸರ್ಟಿಫಿಕೇಟ್ ಹಾಗೂ ಕಡು ಬಡವರಿಗೆ ಹಸಿರು ಪಡಿತರ ನೀಡಲು ಒತ್ತಾಯಿಸಿ ಸಂಘದ ವತಿಯಿಂದ ನೀಡಿರುವ ಸುಮಾರು 800 ಅರ್ಜಿದಾರರಿಗೆ ಈ ಕೂಡಲೇ ಪಡಿತರ ಚೀಟಿ ನೀಡಬೇಕೆಂದು ಜಿಲ್ಲಾಧಿಕಾರಿಗಳ ಕಛೇರಿ ಎದುರು ಪ್ರತಿಭಟನೆ ನಡೆಸಿದರು.

ಇದೇ ಸಂದರ್ಭದಲ್ಲಿ ಸಿ.ಐ.ಟಿ.ಯು ನ ರಾಜ್ಯ ಉಪಾಧ್ಯಾಕ್ಷರಾದ ಕಾಂ|| ಮಹಮದ್ ದಸ್ತಗೀರ್ ಮಾತನಾಡಿ ರಾಜ್ಯ ಸರ್ಕಾರದ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಕಳೆದ 1 ವರ್ಷದಿಂದಲೂ ಪಡಿತರ ನೀಡದೆ ದಿನಾಂಕಗಳನ್ನು ಬದಲಾಯಿಸುತ್ತಾ ಬಂದಿದೆ ಎಂದರು. ಸಿಪಿಐ(ಎಂ)ನ ಜಿಲ್ಲಾ ಮುಖಂಡರಾದ ಬಿ. ಉಮೇಶ ಮಾತನಾಡಿ ಪಡಿತರ ಪ್ರಮಾಣ ಹೆಚ್ಚಿಸಬೇಕೆಂದು ರಾಜ್ಯ ಸರ್ಕಾರಕ್ಕೆ ಒತ್ತಾಯಿಸಿದರು.

ಅಕ್ಟೋಬರ್ 2 ರ ಗಡುವು:- ಪಡಿತರ ರಹಿತ ಅಸಂಘಟಿತ ಕಾರ್ಮಿಕರ ಸರ್ವೆ ನಡೆಸಿ ಸುಮಾರು 800 ಅರ್ಜಿಗಳನ್ನು ಸಲ್ಲಿಸಿದಾಗ್ಯೂ ಇದುವರೆಗೂ ಸ್ಥಳ ಪರೀಕ್ಷಣೆ ನಡೆಸಿಲ್ಲ ಹಾಗು ವಿತರಣೆಯಲ್ಲಿ ನಿರಾಸಕ್ತಿ ತೋರುತ್ತಿರುವುದನ್ನು ಖಂಡಿಸಿ ಕಾರ್ಮಿಕ ಮುಖಂಡರಾದ ಸೈಯದ್ ಮುಜೀಬ್‌ರವರು ಅಕ್ಟೋಬರ್ 2ರ ಒಳಗೆ ಎಲ್ಲಾ ಪಡಿತರ ಚೀಟಿ ರಹಿತರಿಗೆ ಪಡಿತರ ಚೀಟಿ ನೀಡದಿದ್ದರೆ ಧರಣಿ ಸತ್ಯಾಗ್ರಹ ಆರಂಭಿಸಬೇಕಾಗುತ್ತದೆಂದು ಎಚ್ಚರಿಕೆ ನೀಡಿದರು. ಈ ಹೋರಾಟದಲ್ಲಿ ಎಸ್.ಎಫ್.ಐ ನ ಡಿ. ಅಶೋಕ್‌ಕುಮಾರ್ ಸಿಪಿಐ(ಎಂ)ನ ಅಮಾನುಲ್ಲಾ ರಾಬಿಯಾ, ಬೀಡಿ ಕಾರ್ಮಿಕರ ಮುಖಂಡರಾದ ಬಾಷ ಖಲೀಲಾಬಿ ಅಹ್ಮದಿ ಮತ್ತಿತರರು ಹಾಜರಿದ್ದರು.

ಬಿಜೆಪಿ ಸರಕಾರ ದಿಲ್ಲಿಯನ್ನು ಸಾರ್ವಜನಿಕ ಆರೋಗ್ಯಕ್ಕೆ ವಿಪತ್ತು ತರುವ ನಗರವಾಗಿಸಿದೆಯೇ?

ಪ್ಲೇಗ್, ಡೆಂಗ್ ಕಾಯಿಲೆಯ ನಂತರ ದೇಶದ ರಾಜಧಾನಿ ದಿಲ್ಲಿಯನ್ನು ಈಗ ಜಲೋದರ ಕಾಯಿಲೆ ಅಥವಾ ಡ್ರಾಪ್ಸಿ ಎಂಬ ಸಾಂಕ್ರಾಮಿಕ ಕಾಯಿಲೆ ಆವರಿಸಿದೆ. ದಿಲ್ಲಿಯ ಕಾರ್ಮಿಕ ವರ್ಗದ ಹಾಗೂ ಕೆಳ ಮಧ್ಯಮ ವರ್ಗಗಳ ಪ್ರದೇಶಗಳಲ್ಲಿ ಹರಡಿರುವ ಈ ಕಾಯಿಲೆ ಈಗಾಗಲೇ 49 ಜನರನ್ನು ಬಲಿತೆಗೆದುಕೊಂಡಿದೆ. ನೂರಾರು ಜನ ಆಸ್ಪತ್ರೆಗಳಲ್ಲಿದ್ದಾರೆ.

ಸಾಸಿವೆ ಜೊತೆಗೆ ವಿಷಬೀಜವಾದ ಧತೂರದ ಬೀಜವನ್ನು ಕಲಬೆರಕೆ ಮಾಡಿದ್ದರಿಂದ ಈ ಕಾಯಿಲೆ ಬಂದಿದೆ ಎಂದು ತಜ್ಞರ ಅಭಿಪ್ರಾಯ. ಈ ಧತೂರಾ ಬೀಜ ಸಾಸಿವೆ ಬೆಳೆಯುವ ಗದ್ದೆಗಳಲ್ಲೇ ಬೆಳೆಯುತ್ತವೆ. ಉತ್ತರ ಭಾರತದ ಹಲವು ಭಾಗಗಳಲ್ಲಿ ಕಳ್ಳ ಗಿಡದಂತೆ ಇದು ಬೆಳೆಯುತ್ತದೆ. ಇದರ ವಾಸನೆಯೂ ಸಾಸಿವೆ ತರವೇ ಇರುವುದರಿಂದ ಕಲಬೆರಕೆ ಬಹಳ ಸುಲಭ. ಆದರೂ ಇಷ್ಟು ವ್ಯಾಪಕ ಪ್ರಮಾಣ ದಲ್ಲಿ ಇದು ಹರಡಿರುವುದನ್ನು ಕಂಡರೆ ಹಲವು ತಿಂಗಳಿಂದ ಈ ಕಲಬೆರಕೆ ವ್ಯವಹಾರ ನಡೆಯುತ್ತಿರುವಂತೆ ಕಾಣುತ್ತದೆ.

ಇದರಲ್ಲಿ ವಿಷ ಮೊದಲು ಕಾಲುಗಳಲ್ಲಿ ನೀರು ತುಂಬಿಕೊಂಡಂತಾಗು ತ್ತದೆ. ಕ್ರಮೇಣ ಇದು ಕೈಗಳು, ಹೊಟ್ಟೆಗೂ ಹರಡಿ ಅಲ್ಲೂ ನೀರು ತುಂಬಿದಂತಾಗುತ್ತದೆ. ಮುಂದೆ ಇದು ಹೃದಯ, ಮೂತ್ರಪಿಂಡ, ಯಕೃತ್ತು, ಕಣ್ಣು ಇತ್ಯಾದಿಗಳನ್ನು ತಟ್ಟುತ್ತದೆ. ಧತೂರಾ ಕಲಬೆರಕೆಯಾದ ಎಣ್ಣೆಯ ಸತತ ಬಳಕೆಯಿಂದ ಮಾತ್ರ ಇವೆಲ್ಲಾ ಆಗಲು ಸಾಧ್ಯ. 49 ಜನರ ಸಾವು, ನೂರಾರು ಜನ ಆಸ್ಪತ್ರೆಗಳಲ್ಲಿರುವುದನ್ನು ನೋಡಿದರೆ ದಿಲ್ಲಿಯ ಎಣ್ಣೆ ವ್ಯಾಪಾರಿಗಳು ಬಹಳ ಸಮಯದಿಂದ ಈ ಹೊಲಸು ವ್ಯವಹಾರದಲ್ಲಿ ತೊಡಗಿದಂತೆ ಕಾಣುತ್ತದೆ.

ವಾಸ್ತವವಾಗಿ ದಿಲ್ಲಿಯಲ್ಲಿ ಈ ಜಲೋದರ ಕಾಯಿಲೆ ಸಾಂಕ್ರಾಮಿಕವಾಗಿ ಬಿಡಲು ಕಾರಣವನ್ನು ಹುಡುಕ ಹೊರಟಾಗ ಒಂದು ತುಚ್ಛ ಕಥೆಯೇ ಬಯಲಿಗೆ ಬರುತ್ತದೆ ಎನ್ನುತ್ತಾರೆ ಕೆಲವು ವೈದ್ಯರು. ಲಾಭಬಡುಕ ಎಣ್ಣೆ ವ್ಯಾಪಾರಿಗಳು, ಅಸಮರ್ಥ ಆಡಳಿತ ಹಾಗೂ ಆಹಾರ ಕಲಬೆರಕೆ ತಡೆಯಲೆಂದು ಇರುವ ಇಲಾಖೆಯ ಭ್ರಷ್ಟಾಚಾರ ಇಲ್ಲಿ ಮುಖ್ಯ ಅಂಶಗಳು. ದಶಕಗಳಿಂದಲೇ ಈ ಅವ್ಯವಹಾರ ನಡೆಯುತ್ತಿದ್ದು, ಕಲಬೆರಕೆ ಪ್ರಮಾಣ ಕಮ್ಮಿಯಿದ್ದುದರಿಂದ ಈ ಕಾಯಿಲೆ ಪತ್ತೆಯಾಗಿರಲಿಕ್ಕಿಲ್ಲ ಎನ್ನಲಾಗುತ್ತಿದೆ.

ಆದರೆ 1997-98 ರಲ್ಲಿ ಸಾಸಿವೆ ಉತ್ಪಾದನೆಯಲ್ಲಿ ಇಳಿಕೆ, ಇದರಿಂದ ಸಾಸಿವೆ ಎಣ್ಣೆ ಬೆಲೆಯೇರಿದಾಗ ಈ ಕಲಬೆರಕೆ ಕಳ್ಳ ವ್ಯಾಪಾರಿಗಳಿಗೆ ಅತ್ಯಂತ ಲಾಭಕಾರೀ ಕೆಲಸವಾಗಿ ಕಂಡಿರಬೇಕು. ಅವರ ಈ ಲಾಭಬಡುಕತನಕ್ಕೆ 49 ಜನ ಆಹುತಿಯಾಗಿದ್ದಾರೆ, ನೂರಾರು ಜನ ನರಳಿ ಸಂಕಟಗ್ರಸ್ತರಾಗಿದ್ದಾರೆ.

ದಿಲ್ಲಿಯಲ್ಲಿ ಸಂಗ್ರಹಿಸಿದ ಸ್ಯಾಂಪಲ್‌ಗಳಲ್ಲಿ 50% ಕಲಬೆರಕೆಯಾಗಿದ್ದು ಕಂಡು ಬಂದಿತಂತೆ. ಉತ್ತರ ಪ್ರದೇಶದಲ್ಲಿ ಕಾಲು ಭಾಗದಷ್ಟು ಕಲಬೆರಕೆಯಾಗಿರುವುದು ಕಂಡುಬಂದಿದೆ.

ಈ ಹೊಲಸು ಪ್ರಕರಣದಲ್ಲಿ ದಿಲ್ಲಿ ಸರಕಾರದ ಶಾಮೀಲಿನ ಬಗ್ಗೆಯೂ ಬಹಳ ಸಂದೇಹಗಳಿವೆ. ಇದು ಸಾಂಕ್ರಾಮಿಕವಾಗಿ ಹರಡುತ್ತಿದ್ದರೂ ದಿಲ್ಲಿ ಹೈಕೋರ್ಟ್ ಸಾಸಿವೆ ಎಣ್ಣೆಯ ಮಾರಾಟವನ್ನು ನಿಲ್ಲಿಸಬೇಕು ಎಂಬ ಆದೇಶ ನೀಡಿದ ಮೇಲೆಯೇ ಬಿಜೆಪಿ ಸರಕಾರ ಈ ಕ್ರಮ ಕೈಗೊಂಡದ್ದು. ಅದರ ಮೊದಲು ದಿಲ್ಲಿಯ ಆರೋಗ್ಯ ಮಂತ್ರಿಗಳು 'ನಾಗರೀಕರೆ, ಸಾಸಿವೆ ಎಣ್ಣೆ ಬಳಸಬೇಡಿ' ಎಂದಷ್ಟೇ ಹಲ್ಲು ಗಿಂಜುತ್ತಿದ್ದರು.

ಇಷ್ಟೇಅಲ್ಲ, ಈ ಕಲಬೆರಕೆ ಪ್ರಕರಣದ ದೊರೆಯೆನಿಸಿದ ವ್ಯಕ್ತಿಯನ್ನು ಪೋಲೀಸರು ಬಂಧಿಸಿದ್ದು ಮುಖ್ಯಮಂತ್ರಿ ಗಳ ಮನೆಯಲ್ಲಿ. ಅಲ್ಲಿ ಆತ ತನ್ನನ್ನು ಉಳಿಸಿ ಎಂದು ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಲು ಹೋಗಿದ್ದನಂತೆ. ನಮ್ಮ-ನಿಮ್ಮಂತ ಸಾಮಾನ್ಯ ನಾಗರೀಕರು ಹೀಗೆ ಮುಖ್ಯಮಂತ್ರಿಗಳ ಸನ್ನಿಧಾನಕ್ಕೆ ಹೋಗಲು ಸಾಧ್ಯವೇ? ಇವೆಲ್ಲಾ ಬಿಜೆಪಿ ಸರಕಾರದ ಹೆಸರು ಕೆಡಿಸುವ ಸಂಚು ಎಂದು ಅವರು ಬೊಬ್ಬೆ ಹಾಕುತ್ತಾರೆ. ಸಾಸಿವೆ ಬೆಳೆದ ಗದ್ದೆಗಳಲ್ಲೇ ಈ ಧತೂರಾ ಬೀಜಗಳು ಕಳೆಗಳಂತೆ ಬೆಳೆಯುವುದರಿಂದ ಈ ಬೆರಕೆಯಾಗಿರ ಬಹುದೆಂಬ ಸಿದ್ಧಾಂತವನ್ನು ಹರಡಿಸಿ ಲಾಭಬಡುಕ ವ್ಯಾಪಾರಿಗಳನ್ನು ರಕ್ಷಿಸುವ ಪ್ರಯತ್ನವೂ ನಡೆದಿದೆ. ಈ ಎರಡು ಬೀಜಗಳು ಹೂವಾಗುವ ಕಾಲ ಬೇರೆ ಬೇರೆಯಾದ್ದರಿಂದ ಈ ರೀತಿ ಮಿಶ್ರವಾಗುವ ಸಾಧ್ಯತೆ ಬಹಳ ಕಡಿಮೆ, ಅದೂ ಈ ಪ್ರಮಾಣದಲ್ಲಿ - ಎಂದು ತಜ್ಞರು ಈ ಸಿದ್ಧಾಂತ ಅರ್ಥಹೀನ ಎನ್ನುತ್ತಾರೆ.

ಬಹುಶಃ ಈ ದುರಂತದ ಹಿಂದಿನ ರಹಸ್ಯ ಪೂರ್ಣವಾಗಿ ಬಯಲಾಗಲಿಕ್ಕಿಲ್ಲ. ಆಹಾರ ಕಲಬೆರಕೆಯನ್ನು ಪರೀಕ್ಷಿಸುವ ಕೆಲಸ ನಡೆಯುತ್ತಿರಲಿಲ್ಲವೆಂದೇ ಅನಿಸುತ್ತದೆ. ಪ್ರಸಿದ್ಧ ಉತ್ಪಾದಕರೂ ಈ ರೀತಿ ಪರೀಕ್ಷೆ ನಡೆಸುತ್ತಿಲ್ಲ ಎಂಬುದೂ ಈ ಪ್ರಕರಣಗಳಲ್ಲಿ ಬಯಲಿಗೆ ಬಂದಂತಾಗಿದೆ. ತೈಲ ಉತ್ಪಾದನೆಯ ವೇಷ ತೊಟ್ಟ ಖದೀಮರು, ಆಡಳಿತ ಮತ್ತು ಆಹಾರ ಕಲಬೆರಕೆ ತಡೆ ಇಲಾಖೆಯ ನಡುವೆ ಕ್ರಿಮಿನಲ್ ನಂಟು ಇರುವಂತೆ ಕಾಣುತ್ತದೆ ಎನ್ನುತ್ತಾರೆ ತಜ್ಞರು. ಇಷ್ಟೇ ಅಲ್ಲ, ಒಂದು ಕೋಟಿ ಜನಸಂಖ್ಯೆಯ ದಿಲ್ಲಿಯಲ್ಲಿ ಆಹಾರ ಕಲಬೆರಕೆ ತನಿಖೆ ಮಾಡುವವರ ಸಂಖ್ಯೆ ಕೇವಲ 30 ಅಥವಾ ತುಸು ಹೆಚ್ಚು!

ದಿಲ್ಲಿ ಬಹಳ ತ್ವರಿತವಾಗಿ ಸಾರ್ವಜನಿಕ ಆರೋಗ್ಯಕ್ಕೆ ಮಹಾ ವಿಪತ್ತು ತರುವ ನಗರವೆಂಬ ಕುಖ್ಯಾತಿ ಗಳಿಸುತ್ತಿದೆ ಎನ್ನುತ್ತಾರೆ ಅಮಿತ್ ಸೇನ್‌ಗುಪ್ತಾ. ದಿಲ್ಲಿಯ ಶ್ರೀಮಂತ ಜನ ಏರ್-ಕಂಡೀಶನ್ ಮನೆಗಳಲ್ಲಿ ಕೂತು ಸೆಮಿನಾರ್‌ಗಳಲ್ಲಿ ಉಪದೇಶ ನೀಡುತ್ತಿದ್ದರೆ ದಿಲ್ಲಿಯ ದುಡಿಯುವ ಜನ ಈ ಮಾನವ ನಿರ್ಮಿತ ವಿಪತ್ತುಗಳಿಗೆ ಮೊದಲ ಬಲಿಗಳು. ಈ ಪ್ರಕ್ರಿಯೆಯಲ್ಲಿ ಬಿಜೆಪಿ ಸರಕಾರ ದಿಲ್ಲಿಯನ್ನು ಒಂದು ಅವಳಿ ನಗರವಾಗಿಸುತ್ತಿದೆ ಎಂದು ಆಪಾದಿಸುತ್ತಾರೆ ಅವರು - ಒಂದೆಡೆ ಮೇಲ್ವರ್ಗಗಳ ಜನ ವೈಭವದಿಂದ ಬದುಕುತ್ತಿರುವ ನಗರ, ಇನ್ನೊಂದೆಡೆ ಅವರ ಬಡ ಸೋದರರು ಸಂಕಟಪಡುವ ನಗರ.

ಪ್ರೀತಿಯ ಮೇಷ್ಟ್ರೆ...

ಪಿಆರ್ ಪಿಆರ್ ನಲ್ಮೆಯ ಪಿಆರ್
ಶೋಷಿತ ಜನತೆಯ ಒಲವಿನ ಮಾಸ್ತರ್
ವಿದ್ಯಾರ್ಥಿ ಜೀವನದಿ ಸಾಮ್ರಾಜ್ಯವಾದದ
ವಿರುದ್ಧ ಕಹಳೆ
ಶಿಕ್ಷಕನಾಗಿ ವಿದ್ಯಾರ್ಥಿಗಳಿಗೆ
ಧಾರೆ ಜ್ಞಾನ ವಿಜ್ಞಾನದ ಬೆಳೆ

ಬಡತನದ ಬೇಗೆಯಲಿ ಬೆಂದಿರಿ
ಜನತೆಯ ಬವಣೆಗಳ ಕಂಡಿರಿ-ನೊಂದಿರಿ
ಶೋಷಣೆಯ ಜಾಲವನೆ ಅರಿತಿರಿ
ನವಸಮಾಜ-ಸಮಸಮಾಜದ ರಚನೆಗೆ
ಜೀವನವನೇ ಅರ್ಪಿಸಿದಿರಿ

ರೈತರೊಳು ರೈತನಾಗಿ
ಕಾರ್ಮಿಕರೊಳು ಕಾರ್ಮಿಕನಾಗಿ
ದುಡಿಯುವ ಜನತೆಯ ನಾಯಕನಾಗಿ
ಹಲವಾಂದೋಳನಗಳ ಕಲಿಯಾದಿರಿ
ಹೋರಾಟಕೂ ಮೇಷ್ಟ್ರೇ ಆದಿರಿ

ಎನಗಿಂತ ಕಿರಿಯರಿಲ್ಲೆಂಬ
ವಿನಮ್ರ ಭಾವದಿ
ಕಿರಿಯರು ಎನದೆ ಹಿರಿಯರು ಎನದೆ
ಸಕಲರಿಗೂ ಸಿಂಚನ ನಿಮ್ಮಯ ಪ್ರೀತಿ

ಉಳ್ಳಾಲದಿಂದ ಬಳ್ಳಾರಿಯವರೆಗೆ
ಬಸ್ರೂರಿನಿಂದ ಬೆಂಗಳೂರಿನವರೆಗೆ
ನಿಮ್ಮಾತ್ಮೀಯ ಅಪ್ಪುಗೆಯ
ಪ್ರತೀತಿ
ಸರಳತೆಯಲಿ ಗಾಂಧಿವಾದಿ
ಹೋರಾಟದಲಿ ಮಾರ್ಕ್ಸ್‌ವಾದಿ
ಶ್ರಮಿಕರೊಳಿತಿಗೆ ಶ್ರಮಿಸುತಲಿ
ಹಲ ವರ್ಷಗಳೆ ಸೆರೆಮನೆಯಲಿ
ಬಂಧಿ

ಲೀನವಾದರೂ ನಿಮ್ಮ ತನುವು
ಕೆಂಪಾಗ್ನಿಯ ಜ್ವಾಲೆಯಲಿ
ನೀವುರಿಸಿದ ಕ್ರಾಂತಿ ಕಂದೀಲಿನ
ಬೆಳಕಿನಲಿ
ನಡೆಯುವೆವು ನಾವ್
ಮುನ್ನಡೆಯುವೆವು
ಬಂಡಾಯದ ಕಿಚ್ಚಿನ
ನಿಮ್ಮಯ ನೆಚ್ಚಿನ
ಕೆಂಬಾವುಟವನು
ನಾವ್ ಹಿಡಿಯುವೆವೆತ್ತಿ
ಮುಂದೊತ್ತುತ್ತಲೇ ಇರುವೆವು
ತಲುಪುವವರೆಗೂ ಅದು
ಕೆಂಪು ಕೋಟೆಯ ನೆತ್ತಿ

- ವಿಶ್ವ ಕುಂದಾಪುರ

ಮೂರನೇ ಪರ್ಯಾಯದ ಘೋಷಣೆ

ಪುಟ 5 ರಿಂದ

ಅಪಾರವಾಗಿ ಹೆಚ್ಚಿಸಿದ್ದರೂ ನಮ್ಮ ಈ ಅನುಭವಗಳಿಂದ ಒಂದು ಪಾಠವನ್ನೂ ಕಲಿತಿದ್ದೇವೆ. ಅದೇನೆಂದರೆ ಕೇವಲ ಆರ್ಥಿಕ ಪ್ರಶ್ನೆಗಳ ಮೇಲಷ್ಟೇ ಹೋರಾಟ ಗಳನ್ನು ನಡೆಸಿದರೆ ಸಾಲದು. ಅವು ಎಷ್ಟೇ ಮಹತ್ವಪೂರ್ಣವಾದರೂ ನಮ್ಮನ್ನು ಬಹಳ ದೂರ ಕೊಂಡೊಯ್ಯ ಲಾರವು. 16ನೇ ಮಹಾಧಿವೇಶನದ ಕರಡು ನಿರ್ಣಯದ ಪರಿಚ್ಛೇದ 3.42 ಈ ಬಗ್ಗೆ ಸ್ಪಷ್ಟವಾಗಿ ಹೇಳಿದೆ - ***"ಬಂಡವಾಳಶಾಹಿ ಭೂಮಾಲಕ ವರ್ಗಗಳ ವಿರುದ್ಧದ ಸೈದ್ಧಾಂತಿಕ ಹೋರಾಟವನ್ನು ಅಷ್ಟೇ ಒತ್ತು ಕೊಟ್ಟು ನಡೆಸಬೇಕು. ಮುಂಬರುವ ದಿನಗಳಲ್ಲಿ ಈ ಹೋರಾಟವನ್ನು ಮುದೊಯ್ಯಬೇಕು".*** ಆರ್ಥಿಕ ಪ್ರಶ್ನೆಗಳಲ್ಲೇ ಮುಳುಗದೆ ಜಾತಿ, ಸಾಮಾಜಿಕ ದಮನ, ಲಿಂಗ ತಾರತಮ್ಯ ಇತ್ಯಾದಿ ಅನ್ಯವರ್ಗ ಸಿದ್ಧಾಂತಗಳ ವಿವಿಧ ಸ್ವರೂಪಗಳ ವಿರುದ್ಧ ಹೋರಾಟ ನಡೆಸಬೇಕು. ಇದೀಗ ಸಮಸ್ಯೆಯ ಸಾರಾಂಶ. ಈ ಹೋರಾಟವಿಲ್ಲದೆ, ಕ್ರೋಢೀಕರಣ ಸಾಧ್ಯವಿಲ್ಲ.

ಇವೆಲ್ಲದರಲ್ಲಿ ನಾವು ವಿಜಯಶಾಲೀ ಕ್ರಾಂತಿಗಳಿಂದಲೂ ಪಾಠಕಲಿಯಬೇಕು, ಕಳೆದ ಒಂದು ದಶಕದಲ್ಲಿ ಸಮಾಜವಾದಿ ವ್ಯವಸ್ಥೆ, ವಿಶ್ವ ಕಮ್ಯುನಿಸ್ಟ್ ಆಂದೋಲನ ಅನುಭವಿಸಿದ ಹಿನ್ನಡೆಗಳಿಂದಲೂ ಪಾಠ ಕಲಿಯಬೇಕು. ಮಾರ್ಕ್ಸ್‌ವಾದ-ಲೆನಿನ್‌ವಾದವನ್ನು ನಮ್ಮದೇ ಮೂರ್ತ ಪರಿಸ್ಥಿತಿಗಳಿಗೆ ಮೂರ್ತ ರೀತಿಯಲ್ಲಿ ಅನ್ವಯಿಸಬೇಕು. ತಂತಮ್ಮ ಹಂತಗಳಲ್ಲಿ ಪಕ್ಷದ ಕಾರ್ಯಕರ್ತರೂ ಅನ್ವಯಿಸುವಂತೆ ಅನುವು ಮಾಡಿಕೊಡಬೇಕು. ನಮ್ಮ ಪಕ್ಷದ ರಾಜಕೀಯ ನಿಲುವು ಸುಮಾರಾಗಿ ಸರಿಯೆಂದು ಸಿದ್ಧವಾಗಿದೆ. ಈಗ ಬೇಕಾಗಿರುವುದು ನಮ್ಮ ದೌರ್ಬಲ್ಯಗಳನ್ನು, ನ್ಯೂನತೆಗಳನ್ನು ತ್ವರಿತವಾಗಿ ನಿವಾರಿಸಿಕೊಳ್ಳುವುದು. ಈ ಮೂಲಕ ಪಕ್ಷ ಮತ್ತು ಒಟ್ಟಾರೆಯಾಗಿ ಪ್ರಜಾಪ್ರಭುತ್ವ ಆಂದೋಲನ ಶೀಘ್ರವಾಗಿ ಮುನ್ನಡೆಯಲು ಸಾಧ್ಯವಾಗಬೇಕು. ಈ ಮುನ್ನಡೆಗೆ ಸೂಕ್ತ ಮಾರ್ಗದರ್ಶನ ಹಾಗೂ ದಿಕ್ಕು ನೀಡಲು ಹದಿನಾರನೇ ಮಹಾಧಿವೇಶನದತ್ತ ನೋಡುತ್ತಿದ್ದೇವೆ.

'ಮಾಸ್ತರ' ನೆನಪು

ಕಮ್ಯುನಿಸ್ಟರ ತವರುಮನೆಯಲ್ಲಿ
ಅರಳಿದ 'ಮಾಸ್ತರು'
ನಮ್ಮ ನೆಚ್ಚಿನ ಪಿ.ಆರ್.

ಪಶ್ಚಿಮ ಘಟ್ಟಗಳ ಮಗ್ಗುಲಲ್ಲಿ
ಕಡಲತೀರದ ಮಂಗಳೂರಿನಲ್ಲಿ
ಕಣ್‌ತೆರೆದು,
ಬೀಡಿ-ಹಂಚಿನ ಕಾರ್ಮಿಕರ ಮನ ಹೊಕ್ಕಿ
ಮನೆ ಬೆಳಗಿದ ದೀಪ ನೀವು.

ಬದುಕಿನುದ್ದಕ್ಕೂ ಶ್ರಮಜೀವಿಗಳ
ಒಡನಾಡಿಯಾಗಿ
ಮಾರ್ಕ್ಸ್‌ವಾದದ ಜ್ಞಾನ ಬಂಡಾರ ಅರಿತು
ರೈತ-ಕಾರ್ಮಿಕರು-ವಿದ್ಯಾರ್ಥಿ-ಯುವಜನ-ಮಹಿಳೆಯರ
ಹೋರಾಟದಲ್ಲಿ ಧುಮುಕಿ
ನಿಮ್ಮನ್ನು ನೀವು ಗುರುತಿಸಿಕೊಂಡಿರಿ.

ಪುಸ್ತಕ ಪ್ರೇಮಿ ನೀವು
ಪರಿಸರ ಪ್ರೇಮಿ ನೀವು
ಸಂಗಾತಿಗಳ ಸಂಗಾತಿ
ನಿಮ್ಮ ಮಾತು ಚಂದ, ನಿಮ್ಮ ಪ್ರೀತಿ ಚಂದ
ನೀವಿಲ್ಲವಾದರು
ನೀವಿರುವಿರು ನಮ್ಮೆಲ್ಲರಲ್ಲೂ
ಮರವಾಗಿ
ಉಸಿರಾಗಿ
ಚಳುವಳಿಗಳಲ್ಲಿ ನೆಲೆಯಾಗಿ ನಿಂತಿರುವಿರಿ

ಮಾಸ್ತರೇ,
ನಿಮ್ಮ ಕುಡಿಗಳು ಬತ್ತುವುದಿಲ್ಲ-ಅವು
ಬೆಳೆಯುತ್ತವೆ ಹೆಮ್ಮರವಾಗಿ
ರಾಚುತ್ತವೆ ಕೋಟ್ಯಾಂತರ ಕಿರಣಗಳಾಗಿ
ಊರ ತುಂಬ ಹಬ್ಬಿ ಅರಳುತ್ತದೆ.

- ಗೋಪಾಲಕೃಷ್ಣ ಅರಳಹಳ್ಳಿ

ಬಿಜೆಪಿಯ ದೇಶಭಕ್ತಿಯ ಟೊಳ್ಳುತನವನ್ನು ಬಯಲಿಗೆಳೆದ ಮತ್ತೊಂದು ಕ್ರಮ

ಪೇಟೆಂಟ್ ಕಾನೂನು ತಿದ್ದುಪಡಿಗೆ ನಿರ್ಧಾರ

ವಿಶ್ವವ್ಯಾಪಾರ ಸಂಸ್ಥೆ-WTO- ಯ ನಿಬಂಧನೆಗಳನ್ನು ಪೂರೈಸಲು ಭಾರತೀಯ ಪೇಟೆಂಟ್ ಕಾನೂನು-1970 ನ್ನು ತಿದ್ದುಪಡಿ ಮಾಡಲು ಬಿಜೆಪಿ ನೇತೃತ್ವದ ಸರಕಾರ ನಿರ್ಧರಿಸಿದೆ. ಇದು ರಾಷ್ಟ್ರೀಯ ಸಾರ್ವಭೌಮತೆಯ ಬಗ್ಗೆ ಬಿಜೆಪಿಯ ಆತಂಕ ಎಷ್ಟೊಂದು ಟೊಳ್ಳು ಎಂಬುದನ್ನು ಸಂಪೂರ್ಣವಾಗಿ ಬಯಲು ಮಾಡಿದೆ ಎಂದಿರುವ ಸಿಪಿಐ(ಎಂ) ಕೇಂದ್ರ ಸಮಿತಿ ವಾಜಪೇಯಿ ಸರಕಾರದ ಈ ಕ್ರಮವನ್ನು ಬಲವಾಗಿ ಖಂಡಿಸಿದೆ. ಸಂಸತ್ತು ಅಧಿವೇಶನದಲ್ಲಿಲ್ಲದಿರುವಾಗ ಇಂತಹ ಒಂದು ನಿರ್ಣಯ ಕೈಗೊಂಡು, ಅದು ಹೇಗೆ ಅತ್ಯಂತ ಮಹತ್ವದ ಹಾಗೂ ದೂರಗಾಮಿ ಪ್ರಭಾವ ಬೀರುವ ನಿರ್ಣಯಗಳನ್ನು ಅತ್ಯಂತ ಗುಟ್ಟಿನಲ್ಲಿ ಕೈಗೊಳ್ಳುತ್ತದೆ ಎಂಬುದನ್ನು ಮತ್ತೊಮ್ಮೆ ತೋರಿಸಿಕೊಂಡಿದೆ ಎಂದೂ ಸಿಪಿಐ(ಎಂ) ಖಂಡಿಸಿದೆ.

ಭಾರತೀಯ ಪೇಟೆಂಟ್ ಕಾನೂನಿನ ತಿದ್ದುಪಡಿ ಔಷಧಿಗಳು ಮತ್ತು ರಾಸಾಯನಿಕ ಉದ್ದಿಮೆಗಳ ಮೇಲೆ ಹಾಗೂ ಭಾರತೀಯ ಕೃಷಿಯ ಮೇಲೆ ಬಹಳಷ್ಟು ದುಷ್ಪರಿಣಾಮಗಳು ಬೀರುವಂತದ್ದು, ಭಾರತೀಯ ಜನಗಳ ಆರೋಗ್ಯ ಹಾಗೂ ಭಾರತದ ಆಹಾರ ಭದ್ರತೆಯ ಮೇಲೆ ತಿದ್ದುಪಡಿ ಬಹಳಷ್ಟು ಪ್ರತಿಕೂಲ ಪರಿಣಾಮ ಬೀರುತ್ತದೆ.

ಈ ತಿದ್ದುಪಡಿಯಿಂದಾಗಿ ಭಾರತದಲ್ಲಿ ಹೊಸದಾಗಿ ಮಾರಾಟ ಮಾಡುವ ಔಷಧಿಗಳು ಬಹುಪಾಲು ಭಾರತೀಯರ ಕೈಗೆಟುಕದಂತಾಗುತ್ತದೆ. ಅಲ್ಲದೆ ಬಹಳ ಅಗ್ಗ ದರಗಳಲ್ಲಿ ದೇಶೀ ಔಷಧಿಗಳನ್ನು ಉತ್ಪಾದಿಸುವ ಪ್ರಕ್ರಿಯೆ ತಂತ್ರಜ್ಞಾನಗಳಿಗೆ ಸಂಬಂಧಪಟ್ಟ ಸಂಶೋಧನೆ ಮತ್ತು ಬೆಳವಣಿಗೆಯ ಚಟುವಟಿಕೆಗಳ ಮೇಲೂ ಇದರಿಂದ ಗಂಭೀರ ಹಿನ್ನಡೆಯಾಗಲಿದೆ. ಜತೆಗೆ ಭಾರತದ ಶ್ರೀಮಂತ ಜೀವ ವೈವಿಧ್ಯವನ್ನು ದೊಡ್ಡಪ್ರಮಾಣದಲ್ಲಿ ಲೂಟಿ ಮಾಡಲು ಬಹುರಾಷ್ಟ್ರೀಯ ಕಂಪನಿಗಳಿಗೆ ಇದು ಅವಕಾಶ ಮಾಡಿಕೊಡುತ್ತದೆ.

ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಈ ಹಿಂದೆ ಕಾಂಗ್ರೆಸ್ ಸರಕಾರ 1995 ರಲ್ಲಿ ಒಂದು ಸುಗ್ರೀವಾಜ್ಞೆಯ ಮೂಲಕ ಇಂತಹ ಕೆಲವು ಬದಲಾವಣೆಗಳನ್ನು ತರಲು ಪ್ರಯತ್ನಿಸಿದಾಗ ಬಿಜೆಪಿ ಅದನ್ನು ವಿರೋಧಿಸಿತ್ತು. ಈಗ ಅಂತಹುದೇ ಒಂದು ಏಕಪಕ್ಷೀಯ ನಿರ್ಣಯವನ್ನು ಸಂಸತ್ತಿನ ಹಾಗೂ ಜನಗಳ ಬೆನ್ನ ಹಿಂದೆ ಮಾಡಿದೆ. ಇದರಿಂದ ಭಾರತದ ಹಿತಾಸಕ್ತಿಗಳನ್ನು ರಕ್ಷಿಸಲು ತಾನು ಬದ್ಧ ಎಂಬ ಬಿಜೆಪಿಯ ಮಾತು ಎಷ್ಟೊಂದು ಟೊಳ್ಳು ಎಂಬುದು ಸಂಪೂರ್ಣ ಬಯಲಿಗೆ ಬರುತ್ತದೆ. ಸಾಮ್ರಾಜ್ಯಶಾಹಿಯನ್ನು ತೃಪ್ತಿಪಡಿಸಲು ಈ ಪಕ್ಷ ಭಾರತದ ಹಿತಾಸಕ್ತಿಗಳನ್ನು ಅಮೆರಿಕನ್ ಸಾಮ್ರಾಜ್ಯಶಾಹಿಗೆ ಹಾಗೂ ಬಹುರಾಷ್ಟ್ರೀಯ ಕಂಪನಿಗಳಿಗೆ ಒತ್ತೆಯಿಡಲೂ ಹೇಸುವುದಿಲ್ಲ ಎಂದು ಸಿಪಿಐ(ಎಂ) ಖಂಡಿಸಿದೆ.

ಈ ಕ್ರಮವನ್ನು ಸಂಸತ್ತಿನಲ್ಲಿ ಎಲ್ಲಾ ಪಕ್ಷಗಳು ಐಕ್ಯತೆಯಿಂದ ವಿರೋಧಿಸಬೇಕು ಎಂದು ಕರೆ ನೀಡಿರುವ ಸಿಪಿಐ(ಎಂ) ಕೇಂದ್ರಸಮಿತಿ ಜನತೆ ಈ ಕ್ರಮವನ್ನು ಪ್ರತಿಭಟಿಸಬೇಕು ಎಂದೂ ಕರೆ ನೀಡಿದೆ.

ಕೇಂದ್ರ ಸಮಿತಿ ಹೇಳಿಕೆ

ಪುಟ 5 ರಿಂದ

ಮತ್ತು ಕೋಮುವಾದಿ ಧೋರಣೆಗಳ ವಿರುದ್ಧ ಪ್ರಚಾರ-ಪ್ರಕ್ಷೋಭೆ ನಡೆಸಿ ಜನಗಳನ್ನು ಅಣಿನೆರಿಸಿದ ಪಕ್ಷದ ಎಲ್ಲಾ ಘಟಕಗಳನ್ನು ಅಭಿನಂದಿಸಿತು.

ಗಂಭೀರ ಪ್ರವಾಹ ಪರಿಸ್ಥಿತಿ ಇನ್ನೂ ರಾಷ್ಟ್ರೀಯ ಅನಾಹುತ ಎಂದೇಕೆ ಘೋಷಿಸಿಲ್ಲ?

ಅಸ್ಸಾಂ, ಪಶ್ಚಿಮ ಬಂಗಾಳ, ಬಿಹಾರ, ಉತ್ತರ ಪ್ರದೇಶ ಮತ್ತು ಗುಜರಾತ್, ಒರಿಸ್ಸಾಗಳ ಹಲವು ಭಾಗಗಳಲ್ಲಿ ತೀವ್ರವಾಗಿ ತಟ್ಟಿದ ಭಾರಿ ಪ್ರವಾಹದ ಬಗ್ಗೆ ಕೇಂದ್ರ ಸಮಿತಿ ಗಂಭೀರ ಆತಂಕ ವ್ಯಕ್ತಪಡಿಸಿದೆ. ಸಾವಿರಾರು ಜನ ಜೀವ ಕಳಕೊಂಡಿದ್ದಾರೆ, ಲಕ್ಷಾಂತರ ಮಂದಿ ಮನೆ-ಆಸ್ತಿ ಕಳಕೊಂಡಿದ್ದಾರೆ. ಮತ್ತೆ-ಮತ್ತೆ ಕೇಳಿಕೊಂಡರೂ ಕೇಂದ್ರ ಸರಕಾರ ಇದೊಂದು ರಾಷ್ಟ್ರೀಯ ಅನಾಹುತ ಎಂದು ಘೋಷಿಸಿಲ್ಲ ಎಂದು ಕೇಂದ್ರ ಸಮಿತಿ ಹೇಳಿದೆ. ಇದನ್ನು ಮಾಡದೆ ವಿಶೇಷ ನಿಧಿಯನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸಲು ಸಾಧ್ಯವಿಲ್ಲ. ವ್ಯಾಪಕ ವಿನಾಶವನ್ನು ಎದುರಿಸಲು ಇದು ಅಗತ್ಯ. *ಕೇಂದ್ರ ಸಮಿತಿ ಈಗ ಪ್ರವಾಹ ಪೀಡಿತರಿಗೆ ನೆರವಾಗಲು ಒಂದು ನಿಧಿಯನ್ನು ರಚಿಸಿ ಅದಕ್ಕೆ ಒಂದು ಲಕ್ಷ ರೂ. ನೀಡಿದೆ. ಈ ನಿಧಿಗೆ ಹಣ ಎತ್ತಬೇಕೆಂದು ಅದು ಎಲ್ಲಾ ಪಕ್ಷದ ಘಟಕಗಳಿಗೆ ಕರೆ ನೀಡಿದೆ.*

ಪಕ್ಷದ ಮಹಾಧಿವೇಶನ

ಕಲ್ಕತ್ತದಲ್ಲಿ ಅಕ್ಟೋಬರ್ 5 ರಿಂದ 11 ರವರೆಗೆ ನಡೆಯುರುವ ಪಕ್ಷದ 16ನೇ ಮಹಾಧಿವೇಶನದ ರಾಜಕೀಯ ಸಂಘಟನಾ ವರದಿಯನ್ನು ಕೇಂದ್ರ ಸಮಿತಿ ಚರ್ಚಿಸಿ ಅಂತಿಮಗೊಳಿಸಿತು. ಈ ವರದಿ 15ನೇ ಮಹಾಧಿವೇಶನದ ನಂತರ ಪಕ್ಷ ಮಾಡಿರುವ ರಾಜಕೀಯ, ಸಂಘಟನಾ ಕೆಲಸಗಳ ವಿಮರ್ಶೆ ನಡೆಸಿದೆ. ಕೇಂದ್ರ ಸಮಿತಿ ಮತ್ತೆ ಮಹಾಧಿವೇಶನದ ಹಿಂದಿನ ದಿನ ಅಕ್ಟೋಬರ್ 4 ರಂದು ಸಭೆ ಸೇರಲಿದೆ.

Reg. No. 17015/64 KRNM/BGS-405 MAG (2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಮುದ್ರಣ ಮತ್ತು ಪ್ರಕಾಶನ
ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India (Marxist), Karnataka State Committee.